ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ರಿಸ್‌ಮಸ್ ಸಂಭ್ರಮ

ಕ್ರಿಸ್‌ಮಸ್ ಸಂಭ್ರಮದಲ್ಲಿದ್ದ ಬೆಂಗಳೂರಿನ ಸೇಂಟ್ ಬೆಸಿಲಿಕಾ ಚರ್ಚ್ ಮುಂದೆ ಶನಿವಾರ ಗಾಂಧಿ ಮತ್ತು ಸಾಂಟಾ ಕ್ಲಾಸ್ ವೇಷಧಾರಿಗಳು ಗಮನ ಸೆಳೆದರು

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ





ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ದೃಢ ಸಂಕಲ್ಪ – ಪ್ರಗತಿಪರ ಹೆಜ್ಜೆಗಳು

ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಪ್ರತಿಮೆ ಸ್ಥಾಪನೆಗೆ ನಿರ್ಧಾರ

ಬೆಳಗಾವಿಯ ಸುವರ್ಣಸೌಧದ ಆವರಣದಲ್ಲಿ "ಕಿತ್ತೂರು ರಾಣಿ ಚೆನ್ನಮ್ಮ" ಮತ್ತು "ಸಂಗೊಳ್ಳಿ ರಾಯಣ್ಣ" ಪ್ರತಿಮೆ ಸ್ಥಾಪನೆಗೆ ನಿರ್ಧಾರ.

ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಕಟಿಬದ್ಧವಾಗಿರುವ ಪ್ರಸ್ತುತ ಸರ್ಕಾರ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಟ್ಟು **ರೂ. 2,398.45 ಕೋಟಿ**ಗಳ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಧಾರವಾಡ–ಕಿತ್ತೂರು–ಬೆಳಗಾವಿ ನೂತನ ರೈಲು ಮಾರ್ಗ ನಿರ್ಮಾಣ (73 ಕಿ.ಮೀ.)

ಧಾರವಾಡ–ಕಿತ್ತೂರು–ಬೆಳಗಾವಿ ನೂತನ ರೈಲು ಮಾರ್ಗ ನಿರ್ಮಾಣ (73 ಕಿ.ಮೀ.)ದ ರೂ. 927.40 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.

ಕೈಗಾರಿಕಾ ಉದ್ದೇಶಕ್ಕಾಗಿ ಜಮೀನು ಮಂಜೂರಾತಿ

ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ತಳಬಾಳು ಗ್ರಾಮದ ವಿವಿಧ ಸರ್ವೆ ನಂ.ಗಳಲ್ಲಿರುವ ಒಟ್ಟು 26 ಎಕರೆ 20 ಗುಂಟೆ ಪಟ್ಟಾ ಜಮೀನಿನ ಬದಲಾಗಿ ಅದೇ ಗ್ರಾಮದ ಒಟ್ಟು 24 ಎಕರೆ 21 ಗುಂಟೆ ಸರ್ಕಾರಿ ಜಮೀನನ್ನು Aequs SEZ Private Limited ಇವರಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಮಂಜೂರು ಮಾಡಲು ನಿರ್ಧಾರ.

ಕುಡಿಯುವ ನೀರು ಸರಬರಾಜು ಯೋಜನೆಗಳು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅನುಷ್ಠಾನಗೊಳಿಸುತ್ತಿರುವ ಸುರಪುರ, ಶಹಾಪುರ ಮತ್ತು ತಾವರೆಗೇರಾ ಪಟ್ಟಣಗಳ ಕುಡಿಯುವ ನೀರು ಸರಬರಾಜು ಯೋಜನೆಗಳ ಒಟ್ಟಾರೆ ರೂ. 381.87 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.

ದ್ರಾಕ್ಷಿ ಬೆಳೆಗಾರರಿಗೆ ಉತ್ತೇಜನ: ಕರ್ನಾಟಕ ವೈನ್ ಬೋರ್ಡ್ ಅನ್ನು "ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಬೋರ್ಡ್" ಎಂದು ಪುನರ್‌ರಚನೆ

ಕರ್ನಾಟಕ ಪ್ರಸ್ತುತ ವಾರ್ಷಿಕವಾಗಿ 6.4 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ವಿವಿಧ ದ್ರಾಕ್ಷಿ ಬೆಳೆಗಳನ್ನು ಉತ್ಪಾದಿಸುತ್ತಿದೆ. ದ್ರಾಕ್ಷಿ ಮಾರುಕಟ್ಟೆ ವಲಯದ ಮೌಲ್ಯವರ್ಧನೆಯು ಸೇರಿದಂತೆ ದ್ರಾಕ್ಷಿ ಬೆಳೆಗಾರರಿಗೆ ಉತ್ತೇಜನ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಹಣಕಾಸಿನ ಸ್ಥಿತಿಗತಿಯ ಸುಧಾರಣೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಹಣಕಾಸಿನ ಸ್ಥಿತಿಗತಿಯ ಸುಧಾರಣೆಗಾಗಿ ಸಾಲದ ಪುನರ್ ರಚನೆ ಮತ್ತು ರಾಜ್ಯ ಸರ್ಕಾರದಿಂದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ಒದಗಿಸಿರುವ ಬಡ್ಡಿ ರಹಿತ ಸಾಲಗಳನ್ನು ಷೇರು ಬಂಡವಾಳವಾಗಿ ಪರಿವರ್ತಿಸಲು ನಿರ್ಧಾರ.

ಕಲಬುರಗಿ ಜಿಲ್ಲೆಯ 3,150 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ

ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕಿನ ಕಾಗಿಣಾ ನದಿಯಿಂದ ನೀರನ್ನೆತ್ತಿ 3,150 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ರೂ. 143.80 ಕೋಟಿಗಳ ಯಡ್ಡಳ್ಳಿ ಏತ ನೀರಾವರಿ ಹಾಗೂ ತೆರ್ನಳ್ಳಿ ಏತ ನೀರಾವರಿ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ.



ರಾಜಾ ಲಖಮಗೌಡ ಉದ್ಯಾನಕಾಶಿ

ಬೆಳಗಾವಿ ಜಿಲ್ಲೆ ಹಿಡಕಲ್ ಡ್ಯಾಮ್ ಹತ್ತಿರ ರಾಜಾ ಲಖಮಗೌಡ ಉದ್ಯಾನಕಾಶಿ ನಿರ್ಮಿಸುವ ಯೋಜನೆ. ಅಂದಾಜು ವೆಚ್ಚ ರೂ. 147.14 ಕೋಟಿ.

ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು: ಜನ–ಜಾನುವಾರುಗಳ ಕುಡಿಯುವ ನೀರಿನ ಬವಣೆಗೆ ಪರಿಹಾರ

ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾಂವ, ಹಾನಗಲ್ ಹಾಗೂ ಹಾವೇರಿ ತಾಲ್ಲೂಕಿನ 285 ಗ್ರಾಮಗಳ (291 ಜನವಸತಿಗಳಿಗೆ) ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ. 645.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಡಿ.ಬಿ.ಒ.ಟಿ. ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ.

ಬ್ಯಾಡಗಿ, ರಾಣೇಬೆನ್ನೂರು, ಹಿರೇಕೆರೂರು ಹಾಗೂ ಹಾವೇರಿ ತಾಲ್ಲೂಕಿನ 51 ಜನವಸತಿಗಳಿಗೆ ಡಿ.ಬಿ.ಒ.ಟಿ. ಆಧಾರದ ಮೇಲೆ ರೂ. 109.50 ಕೋಟಿ ವೆಚ್ಚದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಅನುಷ್ಠಾನ.

ಸಸಾಲಟ್ಟಿ – ಶಿವಲಿಂಗೇಶ್ವರ ಏತ ನೀರಾವರಿ ಯೋಜನೆ

ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲ್ಲೂಕಿನ ಹಳಂಗಳಿ ಗ್ರಾಮದ ಹತ್ತಿರ ಕೃಷ್ಣಾ ನದಿಯಿಂದ ನೀರನ್ನು ಎತ್ತಿ ಘಟಪ್ರಭಾ ಎಡದಂಡೆ ಕಾಲುವೆ ಕಿ.ಮೀ. 63 ರಿಂದ 103 ಕಿ.ಮೀ.ವರೆಗೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ರೂ. 266 ಕೋಟಿ ಯೋಜನೆಗೆ ಅನುಮೋದನೆ.

ಆಲಮಟ್ಟಿ ಎಡದಂಡೆ ಕಾಲುವೆ – ಆಧುನೀಕರಣ ಕಾಮಗಾರಿಗಳು

ಆಲಮಟ್ಟಿ ಎಡದಂಡೆ ಕಾಲುವೆಯ ಕಿ.ಮೀ.0.00 ರಿಂದ 68.24ವರೆಗಿನ (ಬಾಕಿ ಉಳಿದ) ಕಾಲುವೆ ಜಾಲದ ಹಾಗೂ ವಿತರಣಾ ಕಾಲುವೆಗಳ ಸ್ಟ್ರಕ್ಚರ್ ಒಳಗೊಂಡಂತೆ ಆಧುನೀಕರಣ ಕಾಮಗಾರಿಗಳನ್ನು ರೂ. 75.41 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಭಾನುವಾರ, ಡಿಸೆಂಬರ್ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 357 | ಪುಟ 18

www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವಿಷಾದ ಬಿಂಬಗಳನ್ನೇ ಹೆಚ್ಚಾಗಿ ಉಳಿಸಿ ಹೊರಟಿರುವ 2021ರ ಹಿನ್ನೋಟ

‘ಮೋದಿಯಿಂದಲೇ ಉತ್ತಮ ಆಡಳಿತ’ 6
ಜಿಎಸ್‌ಟಿ ದರ ಶೇ 5ರಿಂದ ಶೇ 12ಕ್ಕೆ ಏರಿದ ಪರಿಣಾಮ
ಹೊಸ ವರ್ಷದ ಸಂಭ್ರಮ: ಹೊರ ಜಿಲ್ಲೆಗೆ ದೌಡು 5
ಜನವರಿ 1ರಿಂದ ಪಾದರಕ್ಷೆ, ಬಟ್ಟೆ ದುಬಾರಿ ಸಾಧ್ಯತೆ 7

ಜ.3ರಿಂದ ಮಕ್ಕಳಿಗೆ ಲಸಿಕೆ: ಮೋದಿ

15–18 ವರ್ಷದವರಿಗೆ ವ್ಯಾಕ್ಸಿನ್; ಮುಂಚೂಣಿ ಕಾರ್ಯಕರ್ತರಿಗೆ ಬೂಸ್ಟರ್ ಡೋಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 15ರಿಂದ 18 ವರ್ಷದೊಳಗಿನ ಮಕ್ಕಳಿಗೆ ಜನವರಿ 3ರಿಂದ ಕೋವಿಡ್ ತಡೆ ಲಸಿಕೆ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಘೋಷಿಸಿದರು. ದೇಶದ ಮುಂಚೂಣಿ ಕಾರ್ಯಕರ್ತರಿಗೆ ಜನವರಿ 10ರಿಂದ ಬೂಸ್ಟರ್ ಡೋಸ್ ನೀಡಲಾಗುವುದು ಎಂದೂ ಅವರು ಪ್ರಕಟಿಸಿದರು.

ಶಾಲಾ ಕಾಲೇಜಿಗೆ ತೆರಳಿ, 15ರಿಂದ 18 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಲಾಗುವುದು ಎಂದು ಅವರು ತಿಳಿಸಿದರು.

ಶನಿವಾರ ರಾತ್ರಿ ಅವರು ದೇಶವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ, ಗಂಭೀರ ಆರೋಗ್ಯ ಸಮಸ್ಯೆ ಇರುವ 60 ವರ್ಷ ಮೇಲ್ಪಟ್ಟ ವರಿಗೆ ಮುಂಜಾಗ್ರತಾ ಕ್ರಮವಾಗಿ ಕೂಡ ಬೂಸ್ಟರ್ ಡೋಸ್ ಲಸಿಕೆ ನೀಡ ಲಾಗುತ್ತದೆ ಎಂದರು.

ಕೊರೊನಾ ರೂಪಾಂತರ ತಳಿ ಓಮೈಕ್ರಾನ್ ಬಗ್ಗೆ ಆತಂಕ ಬೇಡ, ನಿಯಮಾವಳಿಗಳನ್ನು ಪಾಲಿಸಿ ಎಂದು ಅವರು ಜನರಿಗೆ ಕರೆ ನೀಡಿದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನ ಮತ್ತು ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಮೋದಿ ಅವರು ಈ ಮಹತ್ವದ ಘೋಷಣೆ ಮಾಡಿದ್ದಾರೆ.

ರಾಜ್ಯಗಳಿಗೆ ಕೇಂದ್ರ ತಂಡ: ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ ಯಲ್ಲಿ, ಕರ್ನಾಟಕ ಸೇರಿದಂತೆ 10 ರಾಜ್ಯಗಳಿಗೆ ಕೇಂದ್ರದ ತಾಂತ್ರಿಕ ತಂಡಗಳನ್ನು ನಿಯೋಜಿಸಲಾಗಿದೆ. ಪ್ರತಿ ತಂಡದಲ್ಲಿ ವೈದ್ಯರು ಅಥವಾ ಐಸಿಎಂಆರ್ ವಿಜ್ಞಾನಿಗಳನ್ನು ಒಳಗೊಂಡ ನಾಲ್ವರು ಸದಸ್ಯರು ಇರಲಿದ್ದಾರೆ. ಸೋಂಕಿತರ ಪ್ರಮಾಣ ಏರಿಕೆ ಕಾಣುತ್ತಿರುವ ರಾಜ್ಯಗಳು ಅಥವಾ ಲಸಿಕೆ ಅಭಿಯಾನದಲ್ಲಿ ಹಿಂದೆ ಉಳಿದಿ ರುವ ರಾಜ್ಯಗಳನ್ನು ಗುರುತಿಸಿ, ವಿಭಿನ್ನ ಅಧ್ಯಯನ ವಿಷಯಗಳನ್ನು ನಿರ್ವಹಿಸುವ ಕೇಂದ್ರದ ತಂಡಗಳನ್ನು ಅಲ್ಲಿಗೆ ಕಳುಹಿಸಲು ಕೇಂದ್ರ ಆರೋಗ್ಯ ಸಚಿವಾಲಯ ನಿರ್ಧರಿಸಿದೆ.

ಕರ್ನಾಟಕ, ಕೇರಳ, ಮಹಾರಾಷ್ಟ್ರ, ತಮಿಳುನಾಡು, ಪಶ್ಚಿಮ ಬಂಗಾಳ, ಮಿಜೋರಾಂ, ಬಿಹಾರ, ಉತ್ತರ ಪ್ರದೇಶ, ಜಾರ್ಖಂಡ್ ಮತ್ತು ಪಂಜಾಬ್ ರಾಜ್ಯಗಳಲ್ಲಿ ಈ ತಂಡಗಳು ಆಯಾ ರಾಜ್ಯಗಳ ಆರೋಗ್ಯ ಅಧಿಕಾರಿಗಳೊಂದಿಗೆ ಕಾರ್ಯ ನಿರ್ವಹಿಸಲಿವೆ. ಕೋವಿಡ್ ಪ್ರಕರಣಗಳಲ್ಲಿ ಏರಿಕೆ ಹಾಗೂ ಲಸಿಕೆ ನೀಡಿಕೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಈ ತಂಡಗಳು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಿವೆ. ಸಂಪರ್ಕಿತರನ್ನು ಪತ್ತೆ ಹಚ್ಚುವಿಕೆ, ಸೋಂಕಿತರ ಮಾದರಿಗಳ ಪರೀಕ್ಷೆ, ಕಂಟೇನ್ಮೆಂಟ್ ವಲಯಗಳ ನಿರ್ವಹಣೆ ಹಾಗೂ ಕ್ಲಸ್ಟರ್‌ಗಳಿಂದ ಸಂಗ್ರಹಿಸಿದ ಮಾದರಿಗಳನ್ನು ವೈರಾಣು ಸಂರಚನೆ ವಿಶ್ಲೇಷಣೆಗಾಗಿ ಐಎನ್‌ಎಸ್‌ಎಸಿಒಜಿ ಜಾಲಕ್ಕೆ ಕಳುಹಿಸಿಕೊಡುವುದೂ ಸೇರಿ ವಿವಿಧ ವಿಷಯಗಳ ಬಗ್ಗೆ ಈ ತಂಡಗಳು ಮಾರ್ಗದರ್ಶನ ನೀಡಲಿವೆ.

ದೇಶದಲ್ಲಿ 452ಕ್ಕೇರಿದ ಪ್ರಕರಣಗಳು

ನವದೆಹಲಿ: ದೇಶದಲ್ಲಿ ಕೋವಿಡ್ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 400ರ ಗಡಿ ದಾಟಿದೆ. ಈವರೆಗೆ ಒಟ್ಟು 452 ಓಮೈಕ್ರಾನ್ ಪ್ರಕರಣಗಳು ವರದಿಯಾಗಿವೆ. ಶನಿವಾರ ರಾಜಸ್ಥಾನದಲ್ಲಿ 21, ಕೇರಳದಲ್ಲಿ 1, ಕರ್ನಾಟಕದಲ್ಲಿ 7, ಮಹಾರಾಷ್ಟ್ರದಲ್ಲಿ 2 ಪ್ರಕರಣಗಳು ಕಂಡುಬಂದಿವೆ.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು (110) ಓಮೈಕ್ರಾನ್ ಸೋಂಕಿತರು ಕಂಡುಬಂದಿದ್ದಾರೆ. ಇದುವರೆಗೆ ದೆಹಲಿಯಲ್ಲಿ 79, ಗುಜರಾತ್‌ನಲ್ಲಿ 49, ರಾಜಸ್ಥಾನದಲ್ಲಿ 43, ತೆಲಂಗಾಣದಲ್ಲಿ 38, ಕೇರಳದಲ್ಲಿ 38, ತಮಿಳುನಾಡಿನಲ್ಲಿ 34 ಮತ್ತು ಕರ್ನಾಟಕದಲ್ಲಿ 38 ಓಮೈಕ್ರಾನ್ ಪ್ರಕರಣ ವರದಿಯಾಗಿವೆ.

ಇಂದು ಮುಖ್ಯಮಂತ್ರಿ ಸಭೆ

ಬೆಂಗಳೂರು: ಕೊರೊನಾ ರೂಪಾಂತರಿ ಸೋಂಕು ಓಮೈಕ್ರಾನ್ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿರುವ ಕಾರಣ, ಇದರ ತಡೆಗೆ ತೆಗೆದುಕೊಂಡಿರುವ ಕ್ರಮಗಳು ಮತ್ತು ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ (ಡಿ.26) ಉನ್ನತಮಟ್ಟದ ಸಭೆ ನಡೆಸಲಿದ್ದಾರೆ.

5ನೇ ಪುಟ ನೋಡಿ

ಕೋವ್ಯಾಕ್ಸಿನ್: ಮಕ್ಕಳ ಲಸಿಕೆಗೆ ಅನುಮೋದನೆ

ನವದೆಹಲಿ: 12ರಿಂದ 18 ವರ್ಷದೊಳಗಿನವರಿಗೆ ನೀಡಲಾಗುವ ಕೋವಿಡ್ ಲಸಿಕೆಗೆ ಭಾರತೀಯ ಔಷಧ ನಿಯಂತ್ರಕರು (ಡಿಸಿಜಿಐ) ಶನಿವಾರ ಅನುಮೋದನೆ ನೀಡಿದ್ದಾರೆ. ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ‘ಕೋವ್ಯಾಕ್ಸಿನ್’ ಲಸಿಕೆಯ ತುರ್ತು ಬಳಕೆಗೆ ಅನುಮತಿ ನೀಡಿದೆ.

ಮಕ್ಕಳಿಗೆ ಲಸಿಕೆ ನೀಡುವ ಸಂಬಂಧ ಕೇಂದ್ರವು ಮಾರ್ಗಸೂಚಿಗಳನ್ನು ಹೊರಡಿಸಲಿದ್ದು, ಅದರ ಪ್ರಕಾರ ಲಸಿಕೆ ನೀಡಲಾಗುತ್ತದೆ. ಮಕ್ಕಳಿಗಾಗಿ ಅಭಿವೃದ್ಧಿಪಡಿಸಿದ ಎರಡನೇ ಲಸಿಕೆ ಇದಾಗಿದ್ದು, ಝೈಡಸ್ ಕ್ಯಾಡಿಲಾ ಸಂಸ್ಥೆ ಅಭಿವೃದ್ಧಿಪಡಿಸಿದ್ದ ‘ಝೈಕೋವ್‌ಡಿ’ ಲಸಿಕೆಯು ಈಗಾಗಲೇ ತುರ್ತು ಬಳಕೆಗೆ ಅನುಮತಿ ಪಡೆದಿದೆ.

ಪ್ರೌಢಶಾಲೆ ಬಾಲಕಿಯರಿಗೆ ‘ರೈತ ವಿದ್ಯಾನಿಧಿ’ ವಿಸ್ತರಣೆ

ವಿಜಯಪುರ: ರೈತ ವಿದ್ಯಾನಿಧಿ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಗ್ರಾಮೀಣ ಭಾಗದ ಪ್ರೌಢಶಾಲೆ ವಿದ್ಯಾರ್ಥಿನಿಯರಿಗೂ ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶನಿವಾರ ಜಿಲ್ಲಾಡಳಿತ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ‘ರೈತ ಕುಟುಂಬದ ಹೆಣ್ಣುಮಕ್ಕಳು ಪ್ರಾಥಮಿಕ, ಪ್ರೌಢಶಾಲಾ ಹಂತದಲ್ಲೇ ಶಾಲೆ ಬಿಡುತ್ತಿರುವವರ ಸಂಖ್ಯೆ ಹೆಚ್ಚಿದೆ. ಅವರ ಹಾಜರಾತಿ ಹೆಚ್ಚಿಸಲು ಈ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಮುಖ್ಯಮಂತ್ರಿಯಾದ ದಿನವೇ ‘ರೈತ ವಿದ್ಯಾನಿಧಿ’ ಯೋಜನೆ ಜಾರಿಗೊಳಿಸಿದ್ದೆ. ಈ ವರ್ಷ 2.40 ಲಕ್ಷ ರೈತರ ಮಕ್ಕಳಿಗೆ ವಿದ್ಯಾರ್ಥಿವೇತನ ಬಿಡುಗಡೆ ಮಾಡಲಾಗಿದೆ. ಮುಂದಿನ ವರ್ಷ 5 ಲಕ್ಷ ಮಕ್ಕಳಿಗೆ ಈ ಯೋಜನೆಯ ಲಾಭವು ಸಿಗಲಿದೆ ಎಂದರು.

ಕಾಶ್ಮೀರ: ನಾಲ್ವರು ಉಗ್ರರ ಎನ್‌ಕೌಂಟರ್

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದಲ್ಲಿ ಶನಿವಾರ 12 ಗಂಟೆಗಳ ಅವಧಿಯಲ್ಲಿ ಭಾರತೀಯ ಸೇನೆ ಹಾಗೂ ಭದ್ರತಾ ಪಡೆಗಳು ನಡೆಸಿದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಸುಧಾರಿತ ಸ್ಫೋಟಕ ಪರಿಣಿತ ಸೇರಿ ನಾಲ್ವರು ಉಗ್ರರು ಹತರಾಗಿದ್ದಾರೆ.

ಪುಲ್ವಾಮ ಜಿಲ್ಲೆಯ ತ್ರಾಲ್ ಸಮೀಪದ ಹರ್ದುಮಿರ್ ಪ್ರದೇಶದಲ್ಲಿ ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಉಗ್ರರು ಹತರಾಗಿದ್ದು, ಅವರನ್ನು ನದೀಂ ಭಟ್ ಹಾಗೂ ರಸೂಲ್ ಅಲಿಯಾಸ್ ಆದಿಲ್ ಎಂದು ಗುರುತಿಸಲಾಗಿದೆ. ಶೋಪಿಯಾನ್ ಜಿಲ್ಲೆಯ ಚೌಗಮ್ ಪ್ರದೇಶದಲ್ಲಿ ಶನಿವಾರ ಮುಂಜಾನೆ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಎಲ್‌ಇಟಿ ಉಗ್ರರು ಹತರಾದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎಸ್‌ಎಸ್‌ಪಿ ತಂತ್ರಾಂಶದಿಂದ ಎಡವಟ್ಟು: ಸಮಾಜ ಕಲ್ಯಾಣ ಇಲಾಖೆಗೆ ಅಲೆದಾಟ

ವಿದ್ಯಾರ್ಥಿವೇತನ ಸಿಗದೇ ಪರದಾಟ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಸಮಸ್ಯೆಯಿಂದಾಗಿ ವೈದ್ಯಕೀಯ, ಎಂಜಿನಿಯರಿಂಗ್, ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಕಳೆದ ಸಾಲಿನ ವಿದ್ಯಾರ್ಥಿ ವೇತನವೇ ಬಿಡುಗಡೆಯಾಗಿಲ್ಲ. ಶುಲ್ಕ ಪಾವತಿ ಆಗದಿರುವುದರಿಂದ ಆ ವಿದ್ಯಾರ್ಥಿಗಳ ಭವಿಷ್ಯವೇ ಅಡಕತ್ತರಿಯಲ್ಲಿ ಸಿಲುಕಿದೆ.

ವಿದ್ಯಾರ್ಥಿವೇತನ ವಿತರಣೆ ಮಾಡಲು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸೇರಿ 8 ಇಲಾಖೆಗಳು ತನ್ನದೇ ಆದ ಆನ್‌ಲೈನ್ ಪೋರ್ಟಲ್ ರೂಪಿಸಿಕೊಂಡಿದ್ದವು. ಅದರಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಆಯಾ ಇಲಾಖೆ ಅಧಿಕಾರಿಗಳು ಪರಿಶೀಲಿಸಿ ಸರ್ಕಾರದಿಂದ ಸಂದಾಯವಾಗಬೇಕಿರುವ ಶುಲ್ಕದ ಪಾಲನ್ನು ವಿಶ್ವವಿದ್ಯಾಲಯ ಅಥವಾ ಕಾಲೇಜುಗಳಿಗೆ ಬಿಡುಗಡೆ ಮಾಡುತ್ತಿದ್ದರು.

ಎಲ್ಲಾ ಇಲಾಖೆಗಳ ಅರ್ಜಿಗಳನ್ನು ಒಂದೇ ಪೋರ್ಟಲ್‌ನಲ್ಲಿ ಸ್ವೀಕರಿಸಲು 2019–20ರಲ್ಲಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶವನ್ನು (ಎಸ್‌ಎಸ್‌ಪಿ) ಇ-ಆಡಳಿತ ಇಲಾಖೆ ಅಭಿವೃದ್ಧಿಪಡಿಸಿತು. ಎಲ್ಲಾ ಇಲಾಖೆಗಳಿಂದ ಅನುದಾನ ತರಿಸಿಕೊಂಡು ಎಸ್‌ಎಸ್‌ಪಿ ತಂತ್ರಾಂಶದ ಮೂಲಕ ವಿದ್ಯಾರ್ಥಿಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮಾಡುವುದು ಇ-ಆಡಳಿತ ಇಲಾಖೆಯ ಉದ್ದೇಶ. ಶುಲ್ಕದ ವಿವರಗಳನ್ನು ವಿಶ್ವವಿದ್ಯಾಲಯಗಳಿಂದ ತರಿಸಿಕೊಳ್ಳುತ್ತಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಹೆಸರಿನಲ್ಲಿ ಇ-ಆಡಳಿತ ಇಲಾಖೆಯೇ ವಿದ್ಯಾರ್ಥಿ ವೇತನವನ್ನು ವಿಶ್ವವಿದ್ಯಾಲಯಗಳಿಗೆ ಬಿಡುಗಡೆ ಮಾಡುತ್ತಿದೆ.

‘ಅರ್ಜಿ ಸಲ್ಲಿಸುವಾಗ ತುಸು ಲೋಪವಾದರೂ ಆ ವಿದ್ಯಾರ್ಥಿಯ ಅರ್ಜಿ ಪೋರ್ಟಲ್‌ನಲ್ಲಿ ಕಾಣಿಸುವುದಿಲ್ಲ. ಅರ್ಜಿ ತಿರಸ್ಕಾರಗೊಂಡಿದೆ ಎಂಬ ವಿವರವೂ ಕಾಣಿಸದು. ಅರ್ಜಿ ಸಲ್ಲಿಸಿದವರು ವಿದ್ಯಾರ್ಥಿವೇತನಕ್ಕೆ ಕಾಯುತ್ತಿದ್ದರೆ, ಇತ್ತ ಇ-ಆಡಳಿತ ಇಲಾಖೆ ಅರ್ಜಿಯೇ ಬಂದಿಲ್ಲ ಎಂದು ಹೇಳುತ್ತಿದೆ’ ಎನ್ನುತ್ತಾರೆ ನೊಂದ ವಿದ್ಯಾರ್ಥಿಗಳು.

5ನೇ ಪುಟ ನೋಡಿ

ರಾಜ್ಯದ ವಿಶೇಷ ವಿಶ್ವವಿದ್ಯಾಲಯಗಳ ಅವಸ್ಥೆ, ಅವ್ಯವಸ್ಥೆ

ಘನ ಉದ್ದೇಶದ ನಿರ್ಲಕ್ಷ್ಯ

• ರಶ್ಮಿ ಎಸ್

ಒಳನೋಟ
ದಾರಿ ತಪ್ಪುತ್ತಿವೆಯೇ ವಿಶೇಷ ವಿ.ವಿಗಳು
ಪ್ರತಿಕ್ರಿಯಿಸಿ: 9606038256
feedback@prajavani.co.in

ಹುಬ್ಬಳ್ಳಿ: ರಾಜ್ಯದಲ್ಲಿ ಕನ್ನಡ ನಾಡು, ನುಡಿ, ಭಾಷೆ, ಸಂಗೀತ, ಜಾನಪದ, ಮಹಿಳಾ ಸಬಲೀಕರಣ, ಪಂಚಾಯತ್‌ರಾಜ್ ಮೂಲಕ ಸ್ವರಾಜ್ಯ ಮತ್ತು ಗ್ರಾಮರಾಜ್ಯದ ಸುಭಿಕ್ಷ, ಸುಶಿಕ್ಷಿತ ರಾಜ್ಯದ ಧ್ಯೇಯೋದ್ದೇಶಗಳಿಂದ ಐದು ವಿಶೇಷ ವಿಶ್ವವಿದ್ಯಾಲಯಗಳನ್ನು ಕಳೆದ 25 ವರ್ಷಗಳಲ್ಲಿ ಸ್ಥಾಪಿಸಲಾಗಿದೆ. ಈಗ ಮತ್ತೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂದು ಉನ್ನತ ಶಿಕ್ಷಣ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಒತ್ತಿ ಹೇಳುತ್ತಿದ್ದಾರೆ.

ಸದ್ಯ ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗಿಂತಲೂ ಈಗಿರುವ ವಿಶ್ವವಿದ್ಯಾಲಯಗಳಿಗೆ ಕಾಯಕಲ್ಪದ ಅಗತ್ಯವಿದೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ವಿಶ್ವವಿದ್ಯಾಲಯಗಳ ಸುಧಾರಣೆಗಾಗಿ ಮಾಡಿರುವ ಶಿಫಾರಸುಗಳನ್ನು ನೋಡಿದಾಗ ವಿಶ್ವವಿದ್ಯಾಲಯಗಳ ಆಡಳಿತ ವ್ಯವಸ್ಥೆಗೆ ಕಾಯಕಲ್ಪವಾಗಬೇಕಿರುವುದು ಸ್ಪಷ್ಟವಾಗುತ್ತಿದೆ.

ರಾಜ್ಯದಲ್ಲಿ ಭಾಷೆ, ಸಂಸ್ಕೃತಿಗಳ ರಕ್ಷಣೆಗೆಂದೇ ಈ ವಿಶೇಷ ವಿವಿಗಳನ್ನು ಸ್ಥಾಪಿಸಲಾಯಿತು. ಮೊದಲು ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ ಆಯಿತು. ನಂತರ, ಮಹಿಳಾ ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.

‘ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು’ ಎಂಬ ಉದ್ದೇಶದೊಂದಿಗೆ 1991ರಲ್ಲಿ ಆರಂಭವಾದ ಕನ್ನಡ ವಿಶ್ವವಿದ್ಯಾಲಯಕ್ಕೆ ಈಗಲೂ ಕಾಯಂ ಬೋಧಕರ, ಸಿಬ್ಬಂದಿಯ ಕೊರತೆ ಕಾಡುತ್ತಿದೆ. ಸಾಧನೆ, ಸಂಶೋಧನೆ ಹಾಗೂ ಅಧ್ಯಯನಕ್ಕಿಂತಲೂ ಚರ್ಚೆಗೆ ಒಳಪಟ್ಟಿದ್ದು ಭ್ರಷ್ಟಾಚಾರದ ಕಾರಣಕ್ಕಾಗಿ. ನಿಯಮಗಳ ಉಲ್ಲಂಘನೆ, ನಿಯಮಗಳ ತಿರುಚುವಿಕೆ, ಮುಕ್ತ ಭ್ರಷ್ಟಾಚಾರದಿಂದಲೇ ಹಂಪಿಯ ಈ ವಿಶ್ವವಿದ್ಯಾಲಯ ಸುದ್ದಿಯಾಗುತ್ತಿದೆ.

ಜಾಗತಿಕ ತಂತ್ರಜ್ಞಾನವನ್ನು ಕನ್ನಡಿಗರಿಗೆ ತಲುಪಿಸುವ ಉದ್ದೇಶ ಈ ವಿಶ್ವವಿದ್ಯಾಲಯಕ್ಕೆ ಇತ್ತು. ದುರಂತವೆಂದರೆ ವಿಶ್ವವಿದ್ಯಾಲಯದ ವೆಬ್‌ಸೈಟ್ ಈಗಲೂ ಅಪ್‌ಡೇಟ್ ಆಗಿಲ್ಲ. ಪಿಂಚಣಿ, ಬಡ್ತಿ, ಫೆಲೊಶಿಪ್, ಗುತ್ತಿಗೆ ಆಧಾರದಲ್ಲಿರುವವರಿಗೆ ನೀಡುವ ಸಂಬಳದಲ್ಲಿಯೂ ಪಾಲು ಕೇಳುವ ಸಂಸ್ಕೃತಿ ಬೆಳೆದಿದೆ.

2003ರಲ್ಲಿ ಆರಂಭವಾದ ಮಹಿಳಾ ವಿಶ್ವವಿದ್ಯಾಲಯಕ್ಕೆ 2017ರಲ್ಲಿ ಅಕ್ಕಮಹಾದೇವಿ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲಾಯಿತು. ಹದಿನೆಂಟರ ಹರೆಯದ ಈ ವಿಶ್ವವಿದ್ಯಾಲಯಕ್ಕೆ ಈಗಲೂ ಅಗತ್ಯವಿರುವ ಒಟ್ಟು ಸಿಬ್ಬಂದಿಯಲ್ಲಿ ಶೇ 33ರಷ್ಟು ಮಾತ್ರ ಸಿಬ್ಬಂದಿ ಲಭ್ಯವಿದ್ದಾರೆ. ಶೇ 50ರಷ್ಟು ಸಿಬ್ಬಂದಿಯಾದರೂ ಬೇಕು ಎನ್ನುವುದು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಬೇಡಿಕೆ. ಉತ್ತರ ಕರ್ನಾಟಕ ವಿಭಾಗದ 13 ಜಿಲ್ಲೆಗಳ 156 ಕಾಲೇಜುಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿವೆ. ಮಹಿಳೆಯರ ಸ್ವಾವಲಂಬನೆ ಹಾಗೂ ಸಬಲೀಕರಣದ ಉದ್ದೇಶದಿಂದ ಆರಂಭವಾದ ಈ ವಿಶ್ವವಿದ್ಯಾಲಯ ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಆಗುತ್ತಲೇ ಇಲ್ಲ.

ಸ್ವಂತ ಕಟ್ಟಡವೇ ಇಲ್ಲ: ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು 2009ರಲ್ಲಿ ಸ್ಥಾಪಿಸಲಾಯಿತು.

ಈ ವರೆಗೂ ಸ್ವಂತ ಕಟ್ಟಡದ ಭಾಗ್ಯ ಈ ವಿಶ್ವವಿದ್ಯಾಲಯಕ್ಕಿಲ್ಲ. ಸರ್ದಾರ್ ವಲ್ಲಭಭಾಯಿ ಪಟೇಲ್ ಬಡಾವಣೆಯಲ್ಲಿ ಈಚೆಗೆ ಏಳು ಎಕರೆ ನಿವೇಶನ ಮಂಜೂರಾಗಿದೆ.

4ನೇ ಪುಟ ನೋಡಿ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಗ್ರಂಥಾಲಯ

ಸಾರ್ವಜನಿಕ ಲೆಕ್ಕಪತ್ರಗಳ ವರದಿಯ ಪ್ರಮುಖ ಶಿಫಾರಸುಗಳು

- ನಿಯಮಬಾಹಿರವಾಗಿ ನೇಮಕವಾಗಿರುವ, ಪದೋನ್ನತಿ ಪಡೆದಿರುವ ಪ್ರಾಧ್ಯಾಪಕರು, ಸಹಾಯಕ ಗ್ರಂಥಪಾಲಕರು, ಇತರೆ ಬೋಧನಾ ಸಿಬ್ಬಂದಿ ಸೇವೆಯಲ್ಲಿದ್ದರೆ, ತಕ್ಷಣವೇ ವಜಾಗೊಳಿಸಬೇಕು. ಪಾವತಿಸಿರುವ ಹೆಚ್ಚುವರಿ ಮೊತ್ತವನ್ನು ವಿಶ್ವವಿದ್ಯಾಲಯಗಳು, ಕಾಲೇಜುಗಳು ವಸೂಲಿ ಮಾಡಬೇಕು.
- ಅರ್ಹತೆ ಇಲ್ಲದವರನ್ನು ಕುಲಪತಿಗಳನ್ನಾಗಿ ಆಯ್ಕೆ ಮಾಡಲಾಗುತ್ತಿದೆ. ವಿಶ್ವವಿದ್ಯಾಲಯಗಳ ಗುಣಮಟ್ಟ ಕುಸಿಯುತ್ತಿದೆ. ಉನ್ನತ ಶಿಕ್ಷಣದ ಗುಣಮಟ್ಟ ಕಾಪಾಡಲು ಅಗತ್ಯವಿರುವ ಕ್ರಮ ತೆಗೆದುಕೊಳ್ಳಬೇಕು.
- ಯುಜಿಸಿ ಮತ್ತು ಎಐಸಿಟಿಇ ಶೈಕ್ಷಣಿಕ ಸಿಬ್ಬಂದಿ ನೇಮಕಾತಿ ಕುರಿತು ಕನಿಷ್ಠ ವಿದ್ಯಾರ್ಹತೆ, ಆಯ್ಕೆ ಸಮಿತಿಯ ರಚನೆ ಕುರಿತು ನೇಮಕಾತಿ ಸೂತ್ರಗಳನ್ನು ನಿಗದಿಪಡಿಸುತ್ತದೆ. ಸೂತ್ರಗಳನ್ನು ಉಲ್ಲಂಘಿಸಿ, ಹಲವಾರು ವಿಶ್ವವಿದ್ಯಾಲಯಗಳಲ್ಲಿ ನಿಯಮಬಾಹಿರ ನೇಮಕಾತಿ ಮಾಡಿರುವುದನ್ನು ಮಹಾಲೇಖಪಾಲರ ವರದಿ ಹೇಳಿದೆ. ಇಂತಹ ಲೋಪದೋಷಗಳನ್ನು ನಿಯಂತ್ರಿಸಲು ಮತ್ತು ಉತ್ತಮ ಗುಣಮಟ್ಟದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡಲು ಪಾರದರ್ಶಕವಾದ ಒಂದು ನೇಮಕಾತಿ ಆಯೋಗ ರಚನೆ ಅಥವಾ ಬದಲಿ ವ್ಯವಸ್ಥೆ ಕಾರ್ಯಗತಗೊಳಿಸಬೇಕು.

ಬಸವನಗುಡಿಯಲ್ಲಿ 1945ರಲ್ಲಿ ಸ್ಥಾಪನೆಯಾದ ಸಂಸ್ಥೆ • ವಿವಿಧ ಕಲೆಗಳಿಗೆ ಪ್ರೋತ್ಸಾಹ

ಸಂಸ್ಕೃತಿಯ ಸೇತು ಐಐಡಬ್ಲ್ಯುಸಿ

ಬೆಂಗಳೂರು ನಮ್ಮ ಹೆಮ್ಮೆ...

• ವರುಣ ಹೆಗಡೆ

ಬೆಂಗಳೂರು: ನೃತ್ಯ, ಸಂಗೀತ, ಕಲಾ ಪ್ರದರ್ಶನ, ವಿಚಾರಗೋಷ್ಠಿ ಸೇರಿದಂತೆ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 75ಕ್ಕೂ ಅಧಿಕ ವರ್ಷಗಳಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ (ಐಐಡಬ್ಲ್ಯುಸಿ) ವೇದಿಕೆ ಕಲ್ಪಿಸುತ್ತಿದೆ. ಹಲವು ತಲೆಮಾರುಗಳ ಅರಿವಿನ ಕುತೂಹಲ ತಣಿಸಿದ, ಸಾಂಸ್ಕೃತಿಕ ಅನುಭವಗಳನ್ನು ಉಣಬಡಿಸಿದ ಈ ಸಂಸ್ಥೆ ಕೆಲ ತಿಂಗಳ ಹಿಂದಷ್ಟೇ ಅಮೃತ ಮಹೋತ್ಸವವನ್ನೂ ಆಚರಿಸಿಕೊಂಡಿದೆ.

ಬಸವನಗುಡಿಯ ಹಸಿರು ವಾತಾವರಣದಲ್ಲಿ 1945ರಲ್ಲಿ ಜನ್ಮ ತಳೆದ ಈ ಸಂಸ್ಥೆಯು ಬಿ.ಪಿ. ವಾಡಿಯ ಅವರ ಚಿಂತನೆಯ ಕೂಸು. ಮೊದಲ ನಾಲ್ಕು ವರ್ಷಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯಚಟುವಟಿಕೆ ನಡೆಸಿ, 1948ರಲ್ಲಿ ಸ್ವಂತ ಜಾಗವನ್ನು ಖರೀದಿಸಿತು. ಅಂದಿನಿಂದ ಇಂದಿನವರೆಗೂ ಈ ಸಾಂಸ್ಕೃತಿಕ ಕೇಂದ್ರವು ಈ ನೆಲದ ಕಲೆ ಮತ್ತು ಸಂಸ್ಕತಿಯ ಸೊಬಗನ್ನು ವಿಸ್ತರಿಸಲು ಅವಿರತವಾಗಿ ಶ್ರಮಿಸುತ್ತಿದೆ.

‘ಸಂಸ್ಥೆಯು ಜನ್ಮ ತಳೆದಿರುವುದು ಮಾನವೀಯತೆಯ ಹೆಗ್ಗುರುತಾಗಿರುವಂತಹ ಬದುಕಿನ ಸೊಬಗುಗಳನ್ನು ರೂಢಿಸಿಕೊಳ್ಳಲು. ಇದು ಜನಸಾಮಾನ್ಯರಿಗೆ ಅವಕಾಶ ಕಲ್ಪಿಸುವ ಸಾಂಸ್ಕೃತಿಕ ಕೇಂದ್ರವಾಗಿದೆಯೇ ಹೊರತು, ವಿದ್ವತ್ ಸಭೆಯಲ್ಲ’ ಎನ್ನುವುದು ಸಂಸ್ಥೆಯ ಧ್ಯೇಯ ವಾಕ್ಯ. ಇದಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ, ಸಾವಿರಾರು ಸಮಾರಂಭಗಳಿಗೆ ವೇದಿಕೆ ಕಲ್ಪಿಸಿದೆ.

ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್, ಪೆಂಚನ್ ಲಾಮಾ ಅವರಂತಹ ಖ್ಯಾತನಾಮರು, ಸಿ.ವಿ.ರಾಮನ್, ಜ್ಯೂಲಿಯನ್ ಹಕ್ಸ್‌ಲೇ, ರಿಚರ್ಡ್ ಬಂಚ್ ಒಳಗೊಂಡಂತೆ ವಿವಿಧ ನೊಬೆಲ್ ಪುರಸ್ಕೃತರು, ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್, ರಾಜ್ಯಪಾಲರಾದ ವಿ.ವಿ.ಗಿರಿ, ಸಿ. ರಾಜಗೋಪಾಲಚಾರಿ, ಸರ್ ಮಿರ್ಜಾ ಇಸ್ಮಾಯಿಲ್, ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್, ತಿರುವನಂತಪುರದ ರಾಜ ಮಾರ್ತಾಂಡ ವರ್ಮ, ವಿಜ್ಞಾನಿಗಳಾದ ಹೋಮಿ ಜೆ. ಭಾಭಾ, ವಿಕ್ರಮ್ ಸಾರಾಭಾಯಿ, ಪ್ರಖ್ಯಾತ ಸಂಗೀತಗಾರರು, ಸಾಹಿತಿಗಳು, ನೃತ್ಯಪಟುಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರು ಇಲ್ಲಿಗೆ ಭೇಟಿ ನೀಡಿ, ಉಪನ್ಯಾಸ ನೀಡಿದ್ದಾರೆ.

ಪ್ರತ್ಯೇಕ ಕಲಾ ವಿಭಾಗ: ಬಿ.ಪಿ. ವಾಡಿಯಾ ಅವರು ತಮ್ಮ ಸ್ವಂತ ಹಣದ ಜೊತೆಗೆ ದಾನಿಗಳು ಹಾಗೂ ಜನಸಾಮಾನ್ಯರಿಂದ ದೇಣಿಗೆ ಪಡೆದು, ಸಾರ್ವಜನಿಕ ಸಭಾಂಗಣ ಮತ್ತು ಗ್ರಂಥಾಲಯದ ಕಟ್ಟಡವನ್ನು ನಿರ್ಮಿಸಿದ್ದರು. ಈ ಸಂಸ್ಥೆಯು ಸಾರ್ವಜನಿಕ ಸಭೆ, ಸಮಾರಂಭ ಹಾಗೂ ಕಲಾ ಪ್ರದರ್ಶನಕ್ಕಾಗಿ ಎರಡು ಸುಸಜ್ಜಿತ ಸಭಾಂಗಣಗಳನ್ನು ಹೊಂದಿದೆ. ಸಂಸ್ಥೆಯು 1945ರಿಂದ ಈವರೆಗೆ ಆರು ಮಂದಿ ಅಧ್ಯಕ್ಷರನ್ನು ಕಂಡಿದ್ದು, ವಿ.ಜೆ.ಪ್ರಸಾದ್ ಅವರು ಈಗಿನ ಅಧ್ಯಕ್ಷರು.

ಸಂಸ್ಥೆಯಲ್ಲಿ 3,702 ಆಜೀವ ಸದಸ್ಯರಿದ್ದಾರೆ. ವಿವಿಧ ಸಂಘ–ಸಂಸ್ಥೆಗಳೂ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಯೋಜನೆಗಳಿಗೆ ಕೈಜೋಡಿಸುತ್ತಿವೆ. ಸಂಸ್ಥೆಯಲ್ಲಿ ಪ್ರತ್ಯೇಕ ಕಲಾ ವಿಭಾಗವಿದ್ದು, ದೇಶ–ವಿದೇಶದ ಪ್ರಮುಖ ಕಲಾವಿದರ ಕಲಾಕೃತಿಗಳು ಇಲ್ಲಿ ಪ್ರದರ್ಶನ ಕಂಡಿವೆ. ಚಿತ್ರಕಲಾ ಪ್ರದರ್ಶನಗಳನ್ನೂ ಆಯೋಜಿಸಲಾಗುತ್ತಿದೆ. ಬೇಸಿಗೆ ಶಿಬಿರವನ್ನೂ ಪ್ರತಿವರ್ಷ ಏರ್ಪಡಿಸಲಾಗುತ್ತಿದ್ದು, ಚಿತ್ರಕಲೆ, ಯೋಗ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುತ್ತಿದೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಕಟ್ಟಡದ ಹೊರನೋಟ

– ಪ್ರಜಾವಾಣಿ ಚಿತ್ರ/ ರಂಜು ಪಿ

ಅಂಕಿ–ಅಂಶಗಳು

85,000 ಸಂಸ್ಥೆಯ ಗ್ರಂಥಾಲಯದಲ್ಲಿರುವ ಪುಸ್ತಕಗಳು

10,000 ಮಕ್ಕಳ ಗ್ರಂಥಾಲಯದಲ್ಲಿರುವ ಪುಸ್ತಕಗಳು

2,100 ಸಂಸ್ಥೆಯಲ್ಲಿ ನಡೆದಿರುವ ಉಪನ್ಯಾಸಗಳು

3,600 ಸಂಸ್ಥೆಯಲ್ಲಿ ನಡೆದ ಕಲಾ ಪ್ರದರ್ಶನಗಳು

ಸಂಸ್ಥೆಯ ಹೆಜ್ಜೆ ಗುರುತು

- **1945 :** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಪ್ರಾರಂಭ
- **1950:** ಡಬ್ಲ್ಯುಕ್ಯು ಕಾಸ್ಮೊಪಾಲಿಟನ್ ವಿದ್ಯಾರ್ಥಿನಿಲಯ ಪ್ರಾರಂಭ
- **1951:** ಮುಖ್ಯಗ್ರಂಥಾಲಯ ಮತ್ತು ಸಭಾಂಗಣ ಉದ್ಘಾಟನೆ
- **1955:** ಗ್ರಂಥಾಲಯದಲ್ಲಿ ಮಕ್ಕಳಿಗಾಗಿ ಪ್ರತ್ಯೇಕ ವಿಭಾಗ ಪ್ರಾರಂಭ
- **1970:** ರಜತ ಮಹೋತ್ಸವದ ಭಾಗವಾಗಿ ಮಕ್ಕಳಿಗಾಗಿ ಪ್ರತ್ಯೇಕ ಗ್ರಂಥಾಲಯದ ಕಟ್ಟಡ ಉದ್ಘಾಟನೆ
- **1995:** ಸ್ವರ್ಣ ಮಹೋತ್ಸವ ಆಚರಣೆ
- **2005:** ವಜ್ರ ಮಹೋತ್ಸವದ ಮನೋರಮಾ ಸಭಾಂಗಣ ಉದ್ಘಾಟನೆ
- **2019:** ಪರಿಷತ್ ಮಕ್ಕಳ ಗ್ರಂಥಾಲಯ ಉದ್ಘಾಟನೆ
- **2021:** ಅಮೃತ ಮಹೋತ್ಸವ ಆಚರಣೆ

‘ದೇಶದ ಅತಿ ದೊಡ್ಡ ಖಾಸಗಿ ಗ್ರಂಥಾಲಯ’

‘ಎಲ್ಲ ವಯೋಮಾನದವರಿಗಾಗಿ ದೊಡ್ಡ ಪುಸ್ತಕ ಭಂಡಾರರೇ ಇಲ್ಲಿದೆ. 1947ರಲ್ಲಿ ಪ್ರಾರಂಭವಾದ ಗ್ರಂಥಾಲಯವು ದಾನಿಗಳ ನೆರವಿನಿಂದ ನಡೆಯುತ್ತಿದೆ. 1951ರಲ್ಲಿ ವಾಡಿಯಾ ಭವನದ ಮೇಲ್ಭಾಗದಲ್ಲಿ ಗ್ರಂಥಾಲಯಕ್ಕೆ ವಿಶಾಲ ಭವನವನ್ನು ನಿರ್ಮಿಸಲಾಯಿತು. ಈ ಗ್ರಂಥಾಲಯವು ಈಗ ದೇಶದಲ್ಲಿಯೇ ಅತಿ ದೊಡ್ಡ ಖಾಸಗಿ ಗ್ರಂಥಾಲಯವೆಂದು ಗುರುತಿಸಿಕೊಂಡಿದೆ. ವಿದ್ಯಾರ್ಥಿಗಳಿಗೆ ಅಗತ್ಯವಿರುವ ಆಕರ ಗ್ರಂಥಗಳು ದೊರೆಯುತ್ತವೆ. ಮಕ್ಕಳಿಗಾಗಿಯೂ ಪ್ರತ್ಯೇಕ ಗ್ರಂಥಾಲಯವಿದ್ದು, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಂದ ವರ್ಷಕ್ಕೆ ₹ 200 ಶುಲ್ಕ ಪಡೆಯಲಾಗುತ್ತಿದೆ’ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಅರಕಲಿ ವೆಂಕಟೇಶ್ ಪ್ರಸಾದ್ ತಿಳಿಸಿದರು.



ಸ್ವಯಂ ಸೇವಕರು, ದಾನಿಗಳ ನೆರವಿನಿಂದ ನಡೆಯುತ್ತಿರುವ ಸಂಸ್ಥೆಯು ಅಮೃತ ಮಹೋತ್ಸವ ಆಚರಿಸಿ, ಮುನ್ನಡೆಯುತ್ತಿದೆ. ಈ ಪಯಣದಲ್ಲಿ ಸರ್ಕಾರ ಹಾಗೂ ವಿವಿಧ ಸಂಘ–ಸಂಸ್ಥೆಗಳು ನಮಗೆ ಸಹಕಾರ ನೀಡಿವೆ.

ಅರಕಲಿ ವೆಂಕಟೇಶ್ ಪ್ರಸಾದ್, ಐಐಡಬ್ಲ್ಯುಸಿ ಗೌರವ ಕಾರ್ಯದರ್ಶಿ

ಸುದ್ದಿ 2 ನಿಮಿಷ

₹4 ಕೋಟಿ ಮೌಲ್ಯದ ಅಂಬರ್‌ಗ್ರೀಸ್ ಜಪ್ತಿ: ಮೂವರ ಬಂಧನ

ಬೆಂಗಳೂರು: ತಿಮಿಂಗಿಲದ ವಾಂತಿಯನ್ನು (ಅಂಬರ್ ಗ್ರೀಸ್) ತಮಿಳುನಾಡಿನಿಂದ ತಂದು ನಗರದಲ್ಲಿ ಮಾರಾಟ ಮಾಡಲು ಮುಂದಾಗಿದ್ದ ಮೂವರು ಆರೋಪಿಗಳನ್ನು ಮೈಕೋ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಇದೇ 22ರಂದು ಠಾಣೆ ವ್ಯಾಪ್ತಿಯ ಸೋಮೇಶ್ವರ ಕಾಲೋನಿಯ ಲೇಕ್ ರಸ್ತೆ ಬಳಿ ಅಪರಿಚಿತ ವ್ಯಕ್ತಿಗಳು ಅಂಬರ್ ಗ್ರೀಸ್ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ ಮೂವರನ್ನು ಬಂಧಿಸಲಾಗಿತ್ತು. ನಗರದಲ್ಲಿ ಸುಗಂಧ ದ್ರವ್ಯ ತಯಾರಿಸುವವರಿಗೆ ಅದನ್ನು ಅತಿ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ವಿಚಾರಣೆ ಮುಂದುವರಿಸಿದ್ದೇವೆ’ ಎಂದು ಹೇಳಿದ್ದಾರೆ.

ಸಾಂಟಾ ಕ್ಲಾಸ್ ವೇಷಧಾರಿ ಮಹಿಳೆಯರ ಬೈಕ್ ಸವಾರಿ

ಬೆಂಗಳೂರು: ಕ್ರಿಸ್‌ಮಸ್ ಅಂಗವಾಗಿ, ಯೋಧರ ಮಕ್ಕಳ ಶಿಕ್ಷಣಕ್ಕೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ಷಿ ಫಾರ್ ಸೊಸೈಟಿ ಮತ್ತು ಟಸ್ಕರ್ ಹರ್ಲಿ ತಂಡದ ವತಿಯಿಂದ ಏರ್ಪಡಿಸಿದ್ದ ರ‍್ಯಾಲಿಯಲ್ಲಿ ಸಾಂಟಾ ಕ್ಲಾಸ್ ಪೋಷಾಕು ಧರಿಸಿದ 100 ಮಹಿಳೆಯರು ಬೈಕ್ ಸವಾರಿ ನಡೆಸಿದರು.ಚಾನ್ಸರಿ ಪೆವಿಲಿಯನ್ ಹೋಟೆಲ್ ಬಳಿಯಿಂದ ಹೊರಟ ರ‍್ಯಾಲಿಯು ರೆಸಿಡೆನ್ಸಿ ರಸ್ತೆ, ಮೆಯೋ ಹಾಲ್, ಮಹಾತ್ಮ ಗಾಂಧಿ ರಸ್ತೆ, ವಿಧಾನಸೌಧ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಕಂಠೀರವ ಕ್ರೀಡಾಂಗಣ, ಮಲ್ಯ ಆಸ್ಪತ್ರೆ ಮೂಲಕ ಸಾಗಿತು. ಷಿ ಫಾರ್ ಸೊಸೈಟಿಯ ಸಂಸ್ಥಾಪಕ ಸದಸ್ಯರಾದ ಹರ್ಷಿಣಿ ವೆಂಕಟೇಶ್, ವಿದ್ಯಾ ಮಂಜುನಾಥ್, ಶಾಲಿನಿ ದೀಪಕ್ ಮತ್ತು ಕವಿತಾ ಪ್ರಭಾಕರ್ ನೇತೃತ್ವದ ಬೈಕ್ ತಂಡಗಳು ಭಾಗವಹಿಸಿದ್ದವು.

ರ‍್ಯಾಲಿಗೆ ಶಾಸಕಿ ಸೌಮ್ಯಾ ರೆಡ್ಡಿ ಹಾಗೂ ಚಾನ್ಸರಿ ಪೆವಿಲಿಯನ್ ಹೋಟೆಲ್ ನಿರ್ದೇಶಕ ಭಾಸ್ಕರ್ ರಾಜು ಚಾಲನೆ ನೀಡಿದರು. ವೈಸ್ ಮಾರ್ಷಲ್ ಬಿ.ಕೆ. ಮುರುಳಿ ಉಪಸ್ಥಿತರಿದ್ದರು.

ಬಸ್ ಪ್ರಯಾಣಕ್ಕೂ 2 ಡೋಸ್ ಲಸಿಕೆ ಕಡ್ಡಾಯ?

ಓಮೈಕ್ರಾನ್ ನಿಯಂತ್ರಣಕ್ಕೆ ಕಠಿಣ ಕ್ರಮಕ್ಕೆ ಶಿಫಾರಸು ಮಾಡಲು ಬಿಬಿಎಂಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್ ಪ್ರವೇಶ, ಬಸ್‌ಗಳಲ್ಲಿ ಪ್ರಯಾಣ ಸೇರಿ ಸಾರ್ವಜನಿಕ ಸಾರಿಗೆಗಳಲ್ಲಿ ಪ್ರಯಾಣಿಸಲು ಇನ್ನು ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆಯುವುದು ಕಡ್ಡಾಯ ಆಗಲಿದೆಯೇ? ಹೌದು ಎನ್ನುತ್ತವೆ ಬಿಬಿಎಂಪಿ ಮೂಲಗಳು.

ಓಮೈಕ್ರಾನ್ ಸೊಂಕು ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಜ್ಞರ ಜೊತೆ ಭಾನುವಾರ ಸಭೆ ನಡೆಸಲಿದ್ದಾರೆ. ನಗರದಲ್ಲಿ ಓಮೈಕ್ರಾನ್ ಸೋಂಕು ದಿನೇ ದಿನೇ ಹೆಚ್ಚುತ್ತಿರುವುದರಿಂದ ಸೋಂಕು ನಿಯಂತ್ರಣಕ್ಕೆ ಇನ್ನಷ್ಟು ಬಿಗಿ ಕ್ರಮ ಜಾರಿಗೊಳಿಸುವ ಅಗತ್ಯವನ್ನು ಪ್ರತಿಪಾದಿಸಲು ಅಧಿಕಾರಿಗಳು ತಯಾರಿ ನಡೆಸಿದ್ದಾರೆ.

‘ಎಲ್ಲ ಸಾರ್ವಜನಿಕ ತಾಣಗಳ ಪ್ರವೇಶಕ್ಕೆ ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದವರಿಗೆ ಮಾತ್ರ ಅವಕಾಶ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಲು ನಿರ್ಧರಿಸಿದ್ದೇವೆ’ ಎಂದು ಪಾಲಿಕೆಯ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ರೂಪಾಂತರ ತಳಿಯ ನಿಯಂತ್ರಣಕ್ಕೆ ಸದ್ಯ ಜಾರಿಯಲ್ಲಿರುವ ನಿಯಂತ್ರಣ ಕ್ರಮಗಳಿಂದ ಏನೆಲ್ಲ ಪರಿಣಾಮಗಳು ಆಗಿವೆ ಎಂಬುದನ್ನು ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸಲಹೆ ನೀಡಲಿದ್ದೇವೆ’ ಎಂದು ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇದುವರೆಗೆ ಸಿನಿಮಾ ಮಂದಿರಗಳು ಮತ್ತು ಮಾಲ್‌ಗಳ ಪ್ರವೇಶಕ್ಕೆ ಮಾತ್ರ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆಯುವುದನ್ನು ಕಡ್ಡಾಯ ಮಾಡಲಾಗಿತ್ತು. ಇನ್ನು ಸಾರ್ವಜನಿಕ ಸಾರಿಗೆ, ಬಾರ್ ಮತ್ತು ರೆಸ್ಟೋರೆಂಟ್, ಹೋಟೆಲ್, ಉದ್ಯಾನ ಸೇರಿದಂತೆ ಎಲ್ಲ ತರಹದ ಸಾರ್ವಜನಿಕ ತಾಣಗಳ ಪ್ರವೇಶಕ್ಕೂ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದವರಿಗೆ ಮಾತ್ರ ಅವಕಾಶ ಕಲ್ಪಿಸಬೇಕು ಎಂದು ಸಲಹೆ ನೀಡಲು ತೀರ್ಮಾನಿಸಿದ್ದೇವೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ನಗರದಲ್ಲಿ ನಿತ್ಯವೂ ಸರಾಸರಿ 45 ಸಾವಿರ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತಿದ್ದೇವೆ. ಇವುಗಳಲ್ಲಿ ಶೇ 10ರಷ್ಟು ಕೋವಿಡ್ ಪರೀಕ್ಷೆಗಳನ್ನು ಶಾಲಾ ಕಾಲೇಜುಗಳಲ್ಲಿ ನಡೆಸಲಾಗುತ್ತಿದೆ. ನಗರದಲ್ಲಿ ನಿತ್ಯವೂ ಸರಾಸರಿ 30 ಸಾವಿರ ಮಂದಿ ಕೋವಿಡ್ ಲಸಿಕೆ ಪಡೆಯುತ್ತಿದ್ದಾರೆ. ಈ ಕ್ರಮಗಳೂ ಓಮೈಕ್ರಾನ್ ಸೋಂಕು ನಿಯಂತ್ರಣಕ್ಕೆ ನೆರವಾಗಲಿವೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸೋಂಕಿತರೆಲ್ಲರ ಮಾದರಿ ಜೀನೋಮ್ ಸೀಕ್ವೆನ್ಸಿಂಗ್’

ಓಮೈಕ್ರಾನ್ ಸೋಂಕು ಹರಡುವಿಕೆ ನಿಯಂತ್ರಣಕ್ಕಾಗಿ ಮತ್ತಷ್ಟು ಕಠಿಣ ಕ್ರಮ ಕೈಗೊಂಡಿರುವ ಬಿಬಿಎಂಪಿ, ಕೊರೊನಾ ಸೋಂಕು ದೃಢಪಟ್ಟ ಎಲ್ಲರ ಮಾದರಿಗಳನ್ನೂ ಇನ್ನು ವೈರಾಣುವಿನ ವಂಶವಾಹಿ ಸಂಚರನೆಯನ್ನು ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಒಳಪಡಿಸಲು ಕ್ರಮ ಕೈಗೊಂಡಿದೆ.

‘ಇದುವರೆಗೆ ಓಮೈಕ್ರಾನ್ ಸೋಂಕಿತರ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರ ಮಾದರಿಯನ್ನು ಹಾಗೂ ವೈರಾಣುವಿನ ಪ್ರಮಾಣ ಹೆಚ್ಚಿರುವ ಆಯ್ದ ಮಾದರಿಗಳನ್ನು ಮಾತ್ರ ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುತ್ತಿದ್ದೆವು. ಈಗ ಕೋವಿಡ್ ದೃಢಪಟ್ಟ ಎಲ್ಲರ ಮಾದರಿಯನ್ನೂ ಕಳುಹಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ಎರಡು ದಿನಗಳಿಂದ ಈ ಕ್ರಮ ಅನುಸರಿಸಲಾಗುತ್ತಿದೆ’ ಎಂದು ಡಾ.ಕೆ.ವಿ.ತ್ರಿಲೋಕಚಂದ್ರ ತಿಳಿಸಿದರು.

ನಗರದಲ್ಲಿ ನಾಲ್ಕು ಪ್ರಯೋಗಾಲಯಗಳಲ್ಲಿ ಮಾತ್ರ ಜೀನೋಮ್ ಸೀಕ್ವೆನ್ಸಿಂಗ್ ನಡೆಸಲಾಗುತ್ತಿದೆ. ಸೀಮಿತ ಮೂಲಸೌಕರ್ಯ ಇರುವುದರಿಂದ ಇದರ ಫಲಿತಾಂಶ ಕೈಸೇರಲು ನಾಲ್ಕರಿಂದ ಐದು ದಿನಗಳು ಬೇಕಾಗುತ್ತಿದೆ. ಸೋಂಕು ದೃಢಪಟ್ಟ ಎಲ್ಲರ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಿದರೆ ಫಲಿತಾಂಶ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ.

‘ಕೋವಿಡ್ ದೃಢಪಟ್ಟ ಎಲ್ಲರ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಿದರೂ ಫಲಿತಾಂಶದಲ್ಲಿ ಭಾರಿ ವಿಳಂಬ ಆಗದು. ಮೂಲಸೌಕರ್ಯ ಹೆಚ್ಚಳಕ್ಕೂ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ತ್ರಿಲೋಕಚಂದ್ರ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,61,308 ಒಟ್ಟು ಸೋಂಕಿತರು (12,61,156 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,890	12,39,034	16,383

ದಿನದ ಏರಿಕೆ

ಹೊಸ ಪ್ರಕರಣ	152
ಗುಣಮುಖ	126
ಸಾವು	02

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಓಮೈಕ್ರಾನ್: ನಗರದಲ್ಲಿ ಒಂದೇ ದಿನ 7 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕು ನಗರದಲ್ಲಿ ಶನಿವಾರ ಒಂದೇ ದಿನ ಏಳು ಮಂದಿಯಲ್ಲಿ ದೃಢಪಟ್ಟಿದೆ. ಸೋಂಕಿತರಲ್ಲಿ ಐವರು ವಿದೇಶದಿಂದ ಮರಳಿದವರು. ಒಬ್ಬರು ನವದೆಹಲಿ ಪ್ರವಾಸ ಕೈಗೊಂಡಿದ್ದರು. ಇನ್ನೊಬ್ಬರಿಗೆ ಸೋಂಕಿತರ ಸಂಪರ್ಕದಿಂದ ಓಮೈಕ್ರಾನ್ ತಗುಲಿದೆ. ನಗರದಲ್ಲಿ ಓಮೈಕ್ರಾನ್ ಪ್ರಕರಣಗಳ ಒಟ್ಟು ಸಂಖ್ಯೆ 26ಕ್ಕೆ ಏರಿಕೆಯಾಗಿದೆ.

ನವದೆಹಲಿಯಿಂದ ನಗರಕ್ಕೆ ಮರಳಿದ್ದ 76 ವರ್ಷದ ವೃದ್ಧರೊಬ್ಬರಿಗೆ ಕೊರೊನಾ ದೃಢಪಟ್ಟಿತ್ತು. ಅವರಿಗೆ ಹೊಸ ಮಾದರಿಯ ಸೋಂಕು ಇರುವುದು ಪರೀಕ್ಷೆಯಿಂದ ತಿಳಿದು ಬಂದಿದೆ. ಇವರೊಂದಿಗೆ ನೇರ ಸಂಪರ್ಕ ಹೊಂದಿದ್ದವರಲ್ಲಿ ಇಬ್ಬರು ಕೋವಿಡ್ ಪೀಡಿತರಾಗಿದ್ದಾರೆ.

ಯುಎಇಯಿಂದ ಇದೇ 13ರಂದು ಮರಳಿದ್ದ 30 ವರ್ಷದ ಮಹಿಳೆಗೆ ಸೋಂಕು ಇರುವುದು ಇದೇ 17ರಂದು ಖಚಿತಪಟ್ಟಿತ್ತು. ಅವರ ಸಂಪರ್ಕದಿಂದ ಒಬ್ಬರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಜಾಂಬಿಯಾದಿಂದ ಮರಳಿದ್ದ 63 ವರ್ಷದ ವ್ಯಕ್ತಿಗೆ ಕೊರೊನಾ ಸೋಂಕು ತಗುಲಿರುವುದು ಖಚಿತಪಟ್ಟಿತ್ತು. ಬ್ರಿಟನ್‌ನಿಂದ ಮರಳಿದ ವ್ಯಕ್ತಿಯೊಬ್ಬರ ಸಂಪರ್ಕದಿಂದ 54 ವರ್ಷದ ವ್ಯಕ್ತಿಗೆ ಓಮೈಕ್ರಾನ್ ದೃಢಪಟ್ಟಿದೆ.

ಬ್ರಿಟನ್‌ನಿಂದ ಮರಳಿದ ಯುವಕನಿಗೆ ಕೊರೊನಾ ಸೋಂಕು ದೃಢಪಟ್ಟಿತ್ತು. ಆದರೆ ಪರೀಕ್ಷೆಯಲ್ಲಿ ಸೋಂಕಿತರಾಗಿರಲಿಲ್ಲ. ಅವರೊಂದಿಗೆ ನೇರ ಸಂಪರ್ಕ ಹೊಂದಿದ್ದ ಆರು ಮಂದಿಯಲ್ಲಿ ಇಬ್ಬರಿಗೆ ಓಮೈಕ್ರಾನ್ ಸೋಂಕು ತಗುಲಿದೆ. ದೆಹಲಿಯಿಂದ ಇಲ್ಲಿಗೆ ಮರಳಿದ್ದ 62 ವರ್ಷದ ವ್ಯಕ್ತಿಗೆ ಸೋಂಕು ದೃಢಪಟ್ಟಿತ್ತು. ಅವರ ಸಂಪರ್ಕಿತರೊಬ್ಬರು ಸೋಂಕಿತರಾಗಿದ್ದಾರೆ. ಅಮೆರಿಕದಿಂದ ಇದೇ 20ರಂದು ಮರಳಿದ 15 ವರ್ಷದ ವ್ಯಕ್ತಿಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿತ್ತು. ಅವರೊಂದಿಗೆ ಸಂಪರ್ಕ ಹೊಂದಿದ್ದ ಮೂರು ಮಂದಿಯಲ್ಲಿ ಒಬ್ಬರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಕೋವಿಡ್: 30.04 ಲಕ್ಷಕ್ಕೆ ಪ್ರಕರಣ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 270 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.04 ಲಕ್ಷಕ್ಕೆ ಏರಿಕೆ ಕಂಡಿದೆ.

19 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರು ನಗರದಲ್ಲಿ 152 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕೊಡಗಿನಲ್ಲಿ 25, ತುಮಕೂರು ಹಾಗೂ ಉಡುಪಿಯಲ್ಲಿ ತಲಾ 14, ಮೈಸೂರಿನಲ್ಲಿ 13 ಹಾಗೂ ದಕ್ಷಿಣ ಕನ್ನಡದಲ್ಲಿ 11 ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು, ಧಾರವಾಡ ಹಾಗೂ ಉಡುಪಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	27.95 ಕೋಟಿ	3.47 ಕೋಟಿ
ಸಕ್ರಿಯ ಪ್ರಕರಣ	2.42 ಕೋಟಿ	77,032
ಗುಣಮುಖ	24.99 ಕೋಟಿ	3.42 ಕೋಟಿ
ಸಾವು	54.12 ಲಕ್ಷ	4.79 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	8.14 ಲಕ್ಷ	7,189
ಗುಣಮುಖ	4.45 ಲಕ್ಷ	7,286
ಸಾವು	5,856	387

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.97 ಲಕ್ಷ ಅಮೆರಿಕ; 1.12 ಲಕ್ಷ ಬ್ರಿಟನ್; 94,124 ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 1.15 ಕೋಟಿ ಅಮೆರಿಕ; 11.08 ಲಕ್ಷ ಫ್ರಾನ್ಸ್; 17.82 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 46,203 ಕೇರಳ; 36,714 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.54 ಮಹಾರಾಷ್ಟ್ರ; 52.30 ಕೇರಳ; 27.42 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ವೈದ್ಯರ ಶಿಫಾರಸ್ಸಿನ ಮೇರೆಗೆ ಹಿರಿಯ ನಾಗರಿಕರಿಗೆ ಬೂಸ್ಟರ್ ಡೋಸ್

ನವದೆಹಲಿ: ಕೊರೊನಾ ರೂಪಾಂತರಿ ‘ಓಮೈಕ್ರಾನ್’ ಸೋಂಕು ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್–19 ಲಸಿಕೆ ಅಭಿಯಾನದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಮಹತ್ತರ ಘೋಷಣೆಗಳನ್ನು ಮಾಡಿದರು.

ಹೆಚ್ಚುವರಿ (ಬೂಸ್ಟರ್) ಡೋಸ್ ಕುರಿತೂ ಅವರು ಈ ವೇಳೆ ಘೋಷಣೆಗಳನ್ನು ಮಾಡಿದರು. ದೇಶದ ಮುಂಚೂಣಿ ಕಾರ್ಯಕರ್ತರ ಜೊತೆ, ಒಂದಕ್ಕಿಂತ ಹೆಚ್ಚು ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ 60 ವರ್ಷ ಮೇಲ್ಪಟ್ಟವರು ಮುನ್ನೆಚ್ಚರಿಕಾ ಕ್ರಮವಾಗಿ ಬೂಸ್ಟರ್ ಡೋಸ್ ಪಡೆಯಬಹುದು. ಆದರೆ ಅವರು ವೈದ್ಯರಿಂದ ಶಿಫಾರಸ್ಸು ಪಡೆದಿರಬೇಕು. ಅವರಿಗೂ ಜ.10 ರಿಂದಲೇ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

ಕೋವಿಡ್ ವಿರುದ್ಧದ ಜಗತ್ತಿನ ಮೊದಲ ಡಿಎನ್‌ಎ ಲಸಿಕೆ ಮತ್ತು ಮೂಗಿನ ಮೂಲಕ ನೀಡಲಾಗುವ ಲಸಿಕೆಗಳನ್ನು ಸದ್ಯದಲ್ಲೇ ಭಾರತದಲ್ಲೂ ನೀಡಲಾಗುವುದು ಎಂದರು.

ನಗರದಲ್ಲಿ ಇಂದು

ವಿಶ್ವ ಮಾನವ ದಿನ ಅಂಗವಾಗಿ ನುಡಿನಮನ, ಕವಿಗೋಷ್ಠಿ: ಉದ್ಘಾಟನೆ– ಸಿ.ಎನ್.ಅಶ್ವತ್ಥನಾರಾಯಣ, ಅತಿಥಿಗಳು– ಸುರೇಶ್ ಗೌಡ, ಎನ್.ಜೈಪಾಲ್, ಅಧ್ಯಕ್ಷತೆ–ಎಂ.ಪ್ರಕಾಶ ಮೂರ್ತಿ, ಕುವೆಂಪು ಕುರಿತು ಉಪನ್ಯಾಸ–ಎಚ್.ಎನ್.ಸತ್ಯನಾರಾಯಣ, ಆಯೋಜನೆ– ಮಂದಗೆರೆ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಸ್ಥಳ–ರೋಟರಿ ಸಭಾಂಗಣ, ಮಲ್ಲೇಶ್ವರ 13ನೇ ಅಡ್ಡರಸ್ತೆ, ಬೆಳಿಗ್ಗೆ 9.45

ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಅವರಿಗೆ ನುಡಿನಮನ ಮತ್ತು ಗೀತನಮನ: ಅಧ್ಯಕ್ಷತೆ–ಹಂಪ ನಾಗರಾಜಯ್ಯ, ನುಡಿನಮನ–ಎಲ್.ಜಿ.ಮೀರಾ, ಅತಿಥಿಗಳು–ಎನ್.ಎಸ್.ಜ್ಯೋತಿ, ಎಚ್.ಎಸ್.ವೆಂಕಟೇಶಮೂರ್ತಿ, ರಂಗನಾಥ್ ರಾವ್, ನರಹಳ್ಳಿ ಬಾಲಸುಬ್ರಹ್ಮಣ್ಯ, ಬಿ.ಆರ್.ಲಕ್ಷ್ಮಣರಾವ್, ವಿಶ್ವೇಶ್ವರ್ ಭಟ್, ಆಯೋಜನೆ– ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ–ಸಿ.ಅಶ್ವತ್ಥ್ ಕಲಾಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಪೂರ್ಣ ಮಂಡಲೋತ್ಸವ: ಬೆಳಿಗ್ಗೆ 11ಕ್ಕೆ ಉದ್ಘಾಟನೆ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಪ್ರದರ್ಶನ ಉದ್ಘಾಟನೆ– ಕರ್ನಾಟಕ ಸಂಸ್ಕೃತಿ ವಿಶ್ವವಿದ್ಯಾಲಯದ ಕುಲಪತಿ ಕ.ಈ.ದೇವನಾಥನ್, ಸಾನ್ನಿಧ್ಯ–ಸ್ವಾಮಿ ಮುಕ್ತಿದಾನಂದಜಿ, ಮುಖ್ಯಭಾಷಣ–ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಂಜೆ 4ಕ್ಕೆ ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ–ಎಂ.ಆರ್.ಜಯರಾಮ್, ಅತಿಥಿ–ಇ.ವಿ.ರಮಣರೆಡ್ಡಿ, ಆಯೋಜನೆ–ಜನಸೇವಾ ವಿಶ್ವಸ್ಥ ಮಂಡಳಿ, ಸ್ಥಳ–ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ

ಎಸ್.ಜಿ.ಸಿದ್ಧರಾಮಯ್ಯ ಅವರ ಆತ್ಮಕಥನ ‘ಯರಬೇವು’ ಬಿಡುಗಡೆ ಹಾಗೂ ‘ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ’ ಪ್ರದಾನ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅತಿಥಿಗಳು– ಹಂಸಲೇಖ, ಎಸ್.ಮಹಾದೇವಯ್ಯ, ಎಂ.ಎಸ್.ಆಶಾದೇವಿ, ಅಧ್ಯಕ್ಷತೆ–ಕೆ.ಮರುಳಸಿದ್ಧಪ್ಪ, ಆಯೋಜನೆ– ಬಹುರೂಪಿ ಮತ್ತು ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ– ಗಾಂಧಿ ಭವನ, ಬೆಳಿಗ್ಗೆ 11



ಎಸ್.ಜಿ ಸಿದ್ಧರಾಮಯ್ಯ

ಕೆ.ಎಂ.ಫೌಂಡೇಷನ್ ವತಿಯಿಂದ ನೋಟ್ ಪುಸ್ತಕ, ಸೀರೆ ಹಾಗೂ ಕಂಬಳಿ ವಿತರಣೆ: ಉದ್ಘಾಟನೆ–ಸಚಿವ ಆರ್.ಅಶೋಕ, ಅತಿಥಿಗಳು–ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ಎಸ್.ಆರ್.ವಿಶ್ವನಾಥ್, ಸ್ಥಳ–ಪಿ.ಎಂ.ಕಲ್ಯಾಣ ಮಂಟಪ, ಎನ್.ಎಸ್.ಪಾಳ್ಯ, ಬಿಟಿಎಂ ಬಡಾವಣೆ, ಬೆಳಿಗ್ಗೆ 11

ಹೊನ್ನವಳ್ಳಿ ಕೃಷ್ಣ ಅವರಿಗೆ ‘ರಾಜರತ್ನ ಪುನೀತ್ ರಾಜ್‌ಕುಮಾರ್ ಪ್ರಶಸ್ತಿ’ ಪ್ರದಾನ: ಉದ್ಘಾಟನೆ– ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಅತಿಥಿಗಳು– ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ, ಅಧ್ಯಕ್ಷತೆ–ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಆಯೋಜನೆ–ಮಾನವ ಹಕ್ಕುಗಳ ಸಂರಕ್ಷಣಾ ಸಂಸ್ಥೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11.30

ಎನ್.ಸಂತೋಷ್ ಹೆಗ್ಡೆ

ವನಿತಾ ಅಣ್ಣಯ್ಯ ಯಾಜಿ ಅವರ ಪುಸ್ತಕಗಳ ಪರಿಚಯ: ಆಯೋಜನೆ ಮತ್ತು ಸ್ಥಳ–ಹರಿವು ಬುಕ್ಸ್, ಡಿವಿಜಿ ರಸ್ತೆ, ನಾಗಸಂದ್ರ ವೃತ್ತದ ಬಳಿ, ಬಸವನಗುಡಿ, ಬೆಳಿಗ್ಗೆ 11.30

ಗಿರಿಜಾ ಕಲ್ಯಾಣ: ಗೌರವಾರ್ಪಣೆ–ಕೆ.ಎಲ್.ರಾಮಸ್ವಾಮಿ, ಮಹಾಲಕ್ಷ್ಮಿ, ಅತಿಥಿಗಳು– ಸಚಿವರಾದ ಸಿ.ಎನ್.ಅಶ್ವತ್ಥನಾರಾಯಣ ಮತ್ತು ಮುನಿರತ್ನ, ಅಕ್ಷಯ ಬ್ರಾಹ್ಮಣ ಮಹಾಸಂಘ, ಸ್ಥಳ–ಲಕ್ಷ್ಮೀ ವೆಂಕಟೇಶ್ವರ ಕಲ್ಯಾಣ ಮಂಟಪ, ತ್ರಿವೇಣಿ ರಸ್ತೆ, ಯಶವಂತಪುರ, ಮಧ್ಯಾಹ್ನ 12

ಕುವೆಂಪು ಸಂಸ್ಮರಣೆ: ಪುಸ್ತಕ ಬಿಡುಗಡೆ ಮತ್ತು ಅನಿಕೇತನ ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ–ವೂಡೇ ಪಿ.ಕೃಷ್ಣ, ಅಧ್ಯಕ್ಷತೆ– ಬಿ.ಎನ್.ಕೃಷ್ಣಪ್ಪ, ಆಯೋಜನೆ–ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ– ವಿನೋಬಾ ಸಭಾಂಗಣ, ಗಾಂಧಿ ಭವನ, ಮಧ್ಯಾಹ್ನ 3.45ಕ್ಕೆ

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿ– ಬಸವರಾಜ ಹೊರಟ್ಟಿ, ಅಧ್ಯಕ್ಷತೆ– ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಅತಿಥಿ–ಬಿ.ಎಸ್.ಯಡಿಯೂರಪ್ಪ, ಆಯೋಜನೆ–ದಿ ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ, ಸ್ಥಳ–ಬಿಎಂಸಿ ಸಭಾಂಗಣ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಆವರಣ, ಕೆ.ಆರ್.ರಸ್ತೆ, ಸಂಜೆ 4



ಬಸವರಾಜ ಹೊರಟ್ಟಿ

ಸಂಗೀತ ಸಂಜೆ: ಮಕ್ಕಳಿಂದ ಶಾಸ್ತ್ರೀಯ ಸಂಗೀತ ಹಾಗೂ ದೇವರನಾಮ ಪ್ರಸ್ತುತಿ, ನೇತೃತ್ವ–ವಿಜಯಾ ಭಟ್, ಆಯೋಜನೆ– ನಾದಸುಧಾ ಸಂಗೀತ ಕಲಾ ಮಂದಿರ, ಸ್ಥಳ–ರಾಮಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 4.30

ಕರ್ನಾಟಕ ಮಹಿಳಾ ಸಾಧಕರ ಪ್ರಶಸ್ತಿ (ಕೆಡಬ್ಲ್ಯುಎ) ಪ್ರದಾನ: ಅತಿಥಿ–ಸಚಿವೆ ಶಶಿಕಲಾ ಜೊಲ್ಲೆ, ಸಂಸದೆ ಸುಮಲತಾ ಅಂಬರೀಷ್, ಕಾಮಾಕ್ಷಿ ದೇವಿ ಒಡೆಯರ್, ಆಯೋಜನೆ–ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಸ್, ಸ್ಥಳ–ತಾಜ್ ಯಶವಂತಪುರ, ಸಂಜೆ 6

ಕೀರ್ತ್ಯಾರಾಧನಾ–ಭರತನಾಟ್ಯ ರಂಗಪ್ರವೇಶ: ಕೀರ್ತಿ ನರೇನ್, ಅತಿಥಿ–ಸಂಸದ ತೇಜಸ್ವಿ ಸೂರ್ಯ, ಆಯೋಜನೆ–ಸುಕೃತಿ ನಾಟ್ಯಾಲಯ, ಸ್ಥಳ–ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಮಲ್ಲೇಶ್ವರ, ಸಂಜೆ 5

ಕೀರ್ತಿ ನರೇನ್

ಕಲಬುರಗಿಯಲ್ಲಿ ಜ.4ರಂದು ಪ್ರಶಸ್ತಿ ಪ್ರದಾನ

67 ಮಂದಿಗೆ ಪತ್ರಕರ್ತರ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ನೀಡುವ 2019 ನೇ ಸಾಲಿನ ಪ್ರಶಸ್ತಿಗೆ ಹುಣಸವಾಡಿ ರಾಜನ್, ಚಂದ್ರಕಾಂತ ವಡ್ಡು, ವಿಶ್ವೇಶ್ವರ ಭಟ್, ಟಿ. ವೆಂಕಟೇಶ್, ಬಿ.ಪಿ.ಮಲ್ಲಪ್ಪ, ಎಂ.ಕೆ.ಭಾಸ್ಕರರಾವ್, ದಿನೇಶ ಅಮಿನ್ ಮಟ್ಟು, ಟಿ.ವಿ. ಶಿವಾನಂದನ್ ಸೇರಿದಂತೆ ಒಟ್ಟು 67 ಪತ್ರಕರ್ತರು ಆಯ್ಕೆಯಾಗಿದ್ದಾರೆ.

ಮಂಗಳ ಎಂ.ಸಿ.ವರ್ಗೀಸ್ ವಾರ ಪತ್ರಿಕೆ ಪ್ರಶಸ್ತಿಗೆ ‘ಸುಧಾ’ ವಾರಪತ್ರಿಕೆಯ ಉಮಾ ವೇಣೂರು ಹಾಗೂ ಬಿ.ಎಸ್. ವೆಂಕಟರಾಂ (ಸ್ಕೂಪ್ ವರದಿ) ಪ್ರಶಸ್ತಿಗೆ ‘ಪ್ರಜಾವಾಣಿ’ಯ ಕೃಷ್ಣಿ ಶಿರೂರ ಆಯ್ಕೆಯಾಗಿದ್ದಾರೆ.

ಕಲಬುರಗಿಯಲ್ಲಿ 2022ರ ಜನವರಿ 4 ರಂದು ನಡೆಯಲಿರುವ 36 ನೇ ರಾಜ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಪ್ರಶಸ್ತಿ ಪುರಸ್ಕೃತರು: ಡಾ.ಎಂ.ಎಂ.ಕಲಬುರ್ಗಿ ಪ್ರಶಸ್ತಿ: ಹುಣಸವಾಡಿ ರಾಜನ್, ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ: ದಿನೇಶ್ ಅಮಿನ್ ಮಟ್ಟು, ಪಿ.ರಾಮಯ್ಯ ಪ್ರಶಸ್ತಿ: ವಿಶ್ವೇಶ್ವರ ಭಟ್, ಮಹದೇವ ಪ್ರಕಾಶ್ ಪ್ರಶಸ್ತಿ: ಎಂ.ಕೆ.ಭಾಸ್ಕರರಾವ್, ಮ.ರಾಮಮೂರ್ತಿ ಪ್ರಶಸ್ತಿ: ಟಿ. ವೆಂಕಟೇಶ್, ಅಚ್ಯುತ ಚೇವಾರ್,

ಗುಡಿಹಳ್ಳಿ ನಾಗರಾಜ್ ಪ್ರಶಸ್ತಿ : ಜಗದೀಶ ಬುರ್ಲಬುಡ್ಡಿ, ವಿನಾಯಕ ಭಟ್ ಮೂರೂರು, ಅಭಿಮಾನಿ ಪ್ರಕಾಶನ ಪ್ರಶಸ್ತಿ: ಟಿ.ವಿ.ಶಿವಾನಂದನ್, ವಿ.ಎನ್. ತಾಳಿಕೋಟಿ, ಕೆ.ಎನ್.ಸುಬ್ರಹ್ಮಣ್ಯ ಪ್ರಶಸ್ತಿ: ಅಶ್ವಿನಿ ಶ್ರೀಪಾದ್, ಹೃಷಿಕೇಶ್ ಬಹದ್ದೂರ್ ದೇಸಾಯಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ: ಬಿ.ಪಿ.ಮಲ್ಲಪ್ಪ, ಶ್ರೀನಿವಾಸ ಹಳಕಟ್ಟಿ, ಎಂ.ಸಿ.ಶೋಭಾ.

ಗಿರಿಜಮ್ಮ ರುದ್ರಪ್ಪ ತಾಳಿಕೋಟೆ ಪ್ರಶಸ್ತಿ: ಗುಡಿಪುರ ನಂದೀಶ್, ಬಾ.ಮ.ಬಸವರಾಜಯ್ಯ, ಬದರಿನಾಥ ಹೊಂಬಾಳೆ ಪ್ರಶಸ್ತಿ: ಕೌಶಲ್ಯಾ ದತ್ತಾತ್ರೇಯ ಫಳನಾಕರ್, ಎಸ್. ಬಿ.ಜೋಷಿ.

ರಾಜಶೇಖರ ಕೋಟಿ ಪ್ರಶಸ್ತಿ: ಎಸ್.ನಾಗಣ್ಣ, ಜಿ.ರಾಜೇಂದ್ರ, ಅಪ್ಪಾಜಿಗೌಡ ಸಿನಿಮಾ ಪ್ರಶಸ್ತಿ: ವಿಜಯ ಭರಮಸಾಗರ, ಕೆ.ಬಿ.ಪಂಕಜ. ಆಹ್ವಾನಿತ ಅತ್ಯುತ್ತಮ ವರದಿಗಳಿಗೆ ನೀಡುವ ಪ್ರಶಸ್ತಿಗಳು: ಜಿ.ನಾರಾಯಣ ಸ್ವಾಮಿ (ಗ್ರಾಮೀಣ ವರದಿ) ಪ್ರಶಸ್ತಿ: ಈಶ್ವರ ಹೋಟಿ, ಎಂ.ಎಚ್. ನದಾಫ್, ಪಟೇಲ್ ಭೈರಹನುಮಯ್ಯ (ಮಾನವೀಯ ವರದಿ) ಪ್ರಶಸ್ತಿ: ಸುಭಾಷ್ ಚಂದ್ರ ಎಂ.ಎಸ್., ಕರಿಯಪ್ಪ ಎಚ್.ಚೌಡಕ್ಕನವರ, ಗಿರಿಧರ್ ಪ್ರಶಸ್ತಿ (ಅಪರಾಧ ವರದಿ): ಗಿರೀಶ್ ಮಾದೇನಹಳ್ಳಿ, ವಾದಿರಾಜ್, ಬಿ.ಎಸ್. ವೆಂಕಟರಾಂ (ಸ್ಕೂಪ್ ವರದಿ) ಪ್ರಶಸ್ತಿ: ವಿಜಯ್ ಕೋಟ್ಯಾನ್, ಕೃಷ್ಣಿ ಶಿರೂರ, ಕೆ.ಎ.ನೆಟ್ಟಕಲ್ಲಪ್ಪ (ಕ್ರೀಡಾ ವರದಿ): ಕಾರ್ತಿಕ್.ಕೆ.ಕೆ., ಟಿ.ಎನ್.ಪದ್ಮನಾಭ.

ಖಾದ್ರಿ ಶಾಮಣ್ಣ (ಸುದ್ದಿ ವಿಮರ್ಶೆ) ಪ್ರಶಸ್ತಿ: ಮುರುಳಿಪ್ರಸಾದ್, ಶಿವಕುಮಾರ್ ಬೆಳ್ಳಿತಟ್ಟೆ, ಮಂಗಳ ಎಂ.ಸಿ.ವರ್ಗೀಸ್ ವಾರಪತ್ರಿಕೆ ಪ್ರಶಸ್ತಿ: ಉಮಾ ವೇಣೂರು, ಎಸ್. ಜಯರಾಂ, ಬಂಡಾಪುರ ಮುನಿರಾಜ್ (ಛಾಯಾಚಿತ್ರ) ಪ್ರಶಸ್ತಿ: ವಿಶ್ವನಾಥ್ ಸುವರ್ಣ, ಆಸ್ಟ್ರೋ ಮೋಹನ್, ಆರ್.ಎಲ್.ವಾಸುದೇವರಾವ್ (ಅರಣ್ಯ ವರದಿ) ಪ್ರಶಸ್ತಿ: ಸೋಮಶೇಖರ, ಬಾಲಕೃಷ್ಣ ಭೀಮಗುಳಿ, ಆರ್.ಎಲ್. ವಾಸುದೇವ ರಾವ್ (ವನ್ಯಪ್ರಾಣಿ) ಪ್ರಶಸ್ತಿ: ಜೋಸೆಫ್ ಡಿಸೋಜ,ಶಿವು ಹುಣಸೂರು, ಬಿ.ಜಿ.ತಿಮ್ಮಪ್ಪಯ್ಯ (ಆರ್ಥಿಕ ದುರ್ಬಲ ವರ್ಗ) ಪ್ರಶಸ್ತಿ: ಕೆ.ಎಂ.ಮಂಜುನಾಥ್, ಬಸವರಾಜ ಪರಪ್ಪ ದಂಡಿನ, ಮಂಡಿಬೆಲೆ ಶಾಮಣ್ಣ ಪ್ರಶಸ್ತಿ: ಶರಣಯ್ಯ ಒಡೆಯರ್, ಮುರುಳೀಧರ ಎಸ್.ಎ., ಯಜಮಾನ್ ಟಿ.ನಾರಾಯಣಪ್ಪ (ಕೃಷಿ ವರದಿ) ಪ್ರಶಸ್ತಿ: ಶೇಖರ ಸಂಕಗೋಡನಹಳ್ಳಿ, ಎಚ್.ಎಸ್.ಶ್ರೀಹರಪ್ರಸಾದ್.

ನಾಡಿಗೇರ ಕೃಷ್ಣರಾಯರ (ಹಾಸ್ಯ) ಪ್ರಶಸ್ತಿ: ನರಸಿಂಹ ಹುಲಿಹೈದರ್, ಚಂದ್ರಕಾಂತ ವಡ್ಡು, ಡೆಸ್ಕ್ ಶ್ರೇಷ್ಠ ನಿರ್ವಹಣೆ: ಅ.ಮ.ಸುರೇಶ್, ಮಲ್ಲಿಕ ಚರಣವಾಡಿ, ಚಂದ್ರಕಲಾ, ಪುಟವಿನ್ಯಾಸ ಪ್ರಶಸ್ತಿ: ಮಹೇಶ್, ತಿಮ್ಮೇಶ್ ಎಸ್.

ವಿದ್ಯುನ್ಮಾನ ವಿಭಾಗ ಪ್ರಶಸ್ತಿ: ಆ್ಯಂಕರಿಂಗ್: ರಾಧಾ ಹಿರೇಗೌಡರ್.

ವಿಶೇಷ ಪ್ರಶಸ್ತಿ: ಸುಶೀಲೇಂದ್ರ ಸೌದಾಗರ್, ಅಜೀಜ್ ಮಸ್ಕಿ, ಅನಂತರಾಮು ಸಂಕ್ಲಾಪುರ, ಸುಶೀಲೇಂದ್ರ ನಾಯಕ್, ಹನುಮೇಶ್ ಯಾವಗಲ್, ಆದಿನಾರಾಯಣ, ರವೀಂದ್ರ ಸುರೇಶ್ ದೇಶಮುಖ್

ತುಮಕೂರು ಮೇಲ್ಸೇತುವೆಯಲ್ಲಿ ದೋಷ • ಸರ್ವೀಸ್ ರಸ್ತೆಗಳಲ್ಲಿ ದಟ್ಟಣೆ ಕಿರಿಕಿರಿ

ವಾಹನ ಸಂಚಾರ ಒಂದು ವಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಂತ ವಾಹನ ದಟ್ಟಣೆ ಇರುವ ತುಮಕೂರು ರಸ್ತೆಯ ಎಲಿವೇಟೆಡ್ ಕಾರಿಡಾರ್‌ನ (ಡಾ. ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಎರಡು ಪಿಲ್ಲರ್‌ಗಳನ್ನು ಸಂಪರ್ಕಿಸುವ ಕೇಬಲ್‌ನಲ್ಲಿ ಸಣ್ಣ ದೋಷ ಕಂಡು ಬಂದಿದ್ದು, ಶನಿವಾರ ಮಧ್ಯಾಹ್ನದಿಂದ ಒಂದು ವಾರದವರೆಗೆ ಇದರಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಕ್ರಿಸ್‌ಮಸ್ ರಜೆಯಿಂದ ವಾಹನ ದಟ್ಟಣೆ ಹೆಚ್ಚಾಗಿದ್ದ ಸಂದರ್ಭದಲ್ಲೇ ಮೇಲ್ಸೇತುವೆ ಮೇಲೆ ವಾಹನ ಸಂಚಾರ ನಿರ್ಬಂಧಿಸಿದ್ದು, ಸರ್ವೀಸ್ ರಸ್ತೆಗಳಲ್ಲಿ ಕಿಲೋ ಮಿಟರ್ ಗಟ್ಟಲೆ ವಾಹನ ದಟ್ಟಣೆ ಉಂಟಾಗಿತ್ತು.

8ನೇ ಮೈಲಿ ಜಂಕ್ಷನ್‌ನ ಸ್ವಾತಿ ಪೆಟ್ರೋಲ್ ಬಂಕ್ ಮುಂಭಾಗದ 102 ಮತ್ತು 103ನೇ ಪಿಲ್ಲರ್‌ಗಳನ್ನು ಸಂಪರ್ಕಿಸುವ ಕೇಬಲ್ ಸಣ್ಣದಾಗಿ ಸವೆದಿದ್ದು, ಅದನ್ನು ಬದಲಿಸುವ ಅಗತ್ಯವಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಮೂಲಗಳು ತಿಳಿಸಿವೆ. 20 ಕೇಬಲ್‌ಗಳಲ್ಲಿ 2 ಕೇಬಲ್‌ಗಳಲ್ಲಿ ಸಮಸ್ಯೆ ಇರುವುದನ್ನು ಸ್ಥಳಕ್ಕೆ ಭೇಟಿ ನೀಡಿದ್ದ ಎನ್‌ಎಚ್‌ಎಐ ಅಧಿಕಾರಿಗಳು ಪತ್ತೆ ಹಚ್ಚಿದರು. ದುರಸ್ತಿಗಾಗಿ ಒಂದು ವಾರದ ಮಟ್ಟಿಗೆ ಮೇಲ್ಸೇತುವೆಯಲ್ಲಿ ಸಂಚಾರ ಸ್ಥಗಿತಗೊಳಿಸಲು ನಿರ್ಧರಿಸಿದರು.

‘ಪ್ರತಿ ಮಳೆಗಾಲದ ಬಳಿಕ ಸಾಮಾನ್ಯವಾಗಿ ಮೇಲ್ಸೇತುವೆ ಸ್ಥಿತಿಗತಿ ಪರಿಶೀಲನೆ ನಡೆಸುತ್ತೇವೆ. ಕಂಬಗಳ ನಡುವಿನ ಎರಡು ಕೇಬಲ್‌ಗಳು ತುಕ್ಕು ಹಿಡಿದಿರುವುದನ್ನು ಗಮನಿಸಿದ್ದೇವೆ. ಮುನ್ನೆಚ್ಚರಿಕಾ ಕ್ರಮವಾಗಿ ಸಂಚಾರ ನಿರ್ಬಂಧಿಸಲಾಗಿದೆ. ಯಾರೂ ಗಾಬರಿಯಾಗುವ ಅಗತ್ಯವಿಲ್ಲ’ ಎಂದು ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮುಂದಿನ ದುರಸ್ತಿ ಕಾರ್ಯ ನಿರ್ಧರಿಸಲು ತಜ್ಞರ ಸಮಿತಿ ಮೇಲ್ಸೇತುವೆಯನ್ನು ಭಾನುವಾರ ಪರಿಶೀಲಿಸಲಿದೆ. ಆ ಸಮಿತಿಯ ಅಭಿಪ್ರಾಯ ಆಧರಿಸಿ ವಾಹನ ಸಂಚಾರಕ್ಕೆ ಅನುವು ಮಾಡಬೇಕೋ, ಬೇಡವೋ ಎಂಬುದನ್ನು ನಿರ್ಧರಿಸುತ್ತೇವೆ. ದುರಸ್ತಿ ಕಾರ್ಯ ಆರಂಭಿಸಿದರೆ ಪೂರ್ಣಗೊಳಿಸಲು ನಾಲ್ಕು ದಿನಗಳು ಬೇಕಾಗಬಹುದು’ ಎಂದು ವಿವರಿಸಿದರು.

ತುಮಕೂರು ರಸ್ತೆಯ ಮೇಲ್ಸೇತುವೆಯಲ್ಲಿ ಸಂಚಾರ ನಿರ್ಬಂಧಿಸಿರುವುದರಿಂದ ಸರ್ವೀಸ್ ರಸ್ತೆಯಲ್ಲಿ ಶನಿವಾರ ವಾಹನ ದಟ್ಟಣೆ ಕಂಡು ಬಂತು —ಪ್ರಜಾವಾಣಿ ಚಿತ್ರ

ಮೇಲ್ಸೇತುವೆ ಮೇಲೆ ಸಂಚಾರ ನಿರ್ಬಂಧಿಸಿದ ಬಳಿಕ ಸಂಚಾರ ದಟ್ಟಣೆ ನಿಭಾಯಿಸಲು ಸಂಚಾರ ಪೊಲೀಸರು ಕೂಡಲೇ ಮಾರ್ಗ ಬದಲಾವಣೆಯ ಅಧಿಸೂಚನೆ ಹೊರಡಿಸಿದರು. ತುಮಕೂರು ರಸ್ತೆಯಿಂದ ಬೆಂಗಳೂರು ಪ್ರವೇಶಿಸುವ ಎಲ್ಲಾ ವಾಹನಗಳು ಮಾದಾವರ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ನೈಸ್ ರಸ್ತೆಯನ್ನು ಬಳಸಿ ಬೆಂಗಳೂರು ಪ್ರವೇಶಿಸಬೇಕು. ಅದೇ ರೀತಿ, ಹೊರಹೋಗುವ ವಾಹನಗಳು ಗೊರಗುಂಟೆಪಾಳ್ಯ ಸಿಎಂಟಿಐ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ರಿಂಗ್ ರಸ್ತೆ ಮೂಲಕ ಸುಮನಹಳ್ಳಿ ಮೂಲಕ ನೈಸ್ ರಸ್ತೆ ಪ್ರವೇಶಿಸಬೇಕು ಎಂದು ತಿಳಿಸಿದೆ.

ಕ್ರಿಸ್‌ಮಸ್: ಎಲ್ಲೆಡೆ ಸಂಭ್ರಮದ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗಾರಗೊಂಡಿದ್ದ ಚರ್ಚ್‌ಗಳು, ಬೆಳಗಿದ ವಿದ್ಯುತ್ ದೀಪಗಳು, ನಡು ನಡುವೆ ಸಾಂಟಾ ಕ್ಲಾಸ್ ವೇಷಧಾರಿಗಳು, ಚರ್ಚ್‌ಗಳಲ್ಲಿ ಸಾಮೂಹಿಕ ಪ್ರಾರ್ಥನೆ...

ಇದು ನಗರದಲ್ಲಿ ಶನಿವಾರ ಕಂಡು ಬಂದ ದೃಶ್ಯ. ಕ್ರಿಸ್‌ಮಸ್ ಅಂಗವಾಗಿ ನಗರದ ಹಲವೆಡೆ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಚರ್ಚ್‌ಗಳ ಆವರಣ ಮತ್ತು ಹೊರಗಿನ ರಸ್ತೆಗಳು ಕಳೆಗಟ್ಟಿದ್ದವು. ಚರ್ಚ್‌ಗಳ ಒಳಗೆ ಸಾಮೂಹಿಕ ಪ್ರಾರ್ಥನೆ ನಡೆದರೆ, ಸುತ್ತಮುತ್ತಲ ಮಾರುಕಟ್ಟೆಗಳಲ್ಲಿ ಕ್ರಿಸ್‌ಮಸ್‌ಗಾಗಿ ಅಲಂಕಾರಿಕ ವಸ್ತುಗಳು, ಉಡುಗೊರೆಗಳ ಖರೀದಿ ಭರಾಟೆಯಿಂದ ನಡೆದಿತ್ತು.

ಶುಕ್ರವಾರ ರಾತ್ರಿಯಿಂದಲೇ ಚರ್ಚ್‌ಗಳಲ್ಲಿ ಪ್ರಾರ್ಥನೆಗಳು ಆರಂಭವಾಗಿದ್ದವು. ಶನಿವಾರ ಮಧ್ಯಾಹ್ನದ ತನಕವೂ ಪ್ರಾರ್ಥನೆಗಳು ನಡೆದವು. ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಜನ ಜಾತ್ರೆಯೇ ನೆರೆದಿತ್ತು. ಎರಡು ದಿನಗಳಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಚರ್ಚ್‌ಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಯೇಸುವಿನ ಜೀವನ ಬಿಂಬಿಸುವ ಗೋದಲಿ ಪ್ರದರ್ಶನ ಜನರನ್ನು ಆಕರ್ಷಿಸಿತ್ತು.

ಯೇಸುವಿನ ಪ್ರತಿಮೆ ಮುಂದೆ ಭಕ್ತರು ಮೊಂಬತ್ತಿ ಹಿಡಿದು ನಮನ ಸಲ್ಲಿಸಿದರು. ಆಕರ್ಷಣೆಯ ಕೇಂದ್ರವಾಗಿದ್ದ ಸಾಂಟಾಕ್ಲಾಸ್ ಬೊಂಬೆಗಳ ಮುಂದೆ ಮಕ್ಕಳನ್ನು ನಿಲ್ಲಿಸಿ ಪೋಷಕರು ಪೋಟೊ ತೆಗೆಯುತ್ತಿದ್ದುದು ಕಂಡುಬಂತು.

ಕ್ರಿಸ್‌ಮಸ್ ರಜಾ ಹಾಗೂ ವಾರಾಂತ್ಯದ ಹಿನ್ನೆಲೆಯಲ್ಲಿ ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಶನಿವಾರ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು —ಪ್ರಜಾವಾಣಿ ಚಿತ್ರ/ ರಂಜು ಪಿ.

ಕಳೆದ ವರ್ಷ ಕ್ರಿಸ್‌ಮಸ್ ಆಚರಣೆಗೆ ಕೋವಿಡ್ ನಿರ್ಬಂಧಗಳಿದ್ದವು. ಈ ಬಾರಿ ಕಟ್ಟುನಿಟ್ಟಿನ ನಿರ್ಬಂಧ ಇಲ್ಲದಿದ್ದರಿಂದ ಎಲ್ಲೆಡೆ ಸಂಭ್ರಮ ಹೆಚ್ಚಾಗಿತ್ತು. ಫ್ರೇಜರ್ ಟೌನ್‌ನ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್ ಚರ್ಚ್, ಬ್ರಿಗೇಡ್ ರಸ್ತೆ ಬಳಿಯ ಸೇಂಟ್ ಪ್ಯಾಟ್ರಿಕ್ಸ್ ಚರ್ಚ್, ಸೇಂಟ್ ಮಾರ್ಕ್ಸ್ ಕೆಥೆಡ್ರಲ್, ಚಾಮರಾಜಪೇಟೆಯ ಸೇಂಟ್ ಜೋಸೆಫ್ಸ್ ಚರ್ಚ್, ಸೇಂಟ್ ಜಾನ್ಸ್ ಚರ್ಚ್ ಸೇರಿದಂತೆ ಅನೇಕ ಚರ್ಚ್‌ಗಳಲ್ಲೂ ಸಂಭ್ರಮ ಜೋರಾಗಿತ್ತು. ಬೃಹದಾಕಾರದ ನಕ್ಷತ್ರಗಳು, ಕ್ರಿಸ್‌ಮಸ್ ವೃಕ್ಷಗಳು, ಬಣ್ಣ ಬಣ್ಣದ ಬಲೂನುಗಳು, ಗಂಟೆಗಳು ಹಾಗೂ ಸಾಂಟಾ ಕ್ಲಾಸ್‌ನ ಪ್ರತಿರೂಪಗಳು ಹಬ್ಬದ ಮೆರುಗು ಹೆಚ್ಚಿಸಿದ್ದವು.

ಚರ್ಚ್ ರಸ್ತೆಯಲ್ಲಿ ಜನ ಜಂಗುಳಿ

ಕ್ರಿಸ್‌ಮಸ್ ಆಚರಣೆಯ ಸಂಭ್ರಮದಲ್ಲಿ ಜನ ಮುಳುಗಿದ್ದ ಜನ, ಎಂ.ಜಿ.ರಸ್ತೆ ಮತ್ತು ಚರ್ಚ್ ರಸ್ತೆಯಲ್ಲಿ ಶನಿವಾರ ಜಮಾಯಿಸಿದ್ದರು.

ಸ್ನೇಹಿತರು, ಸಂಬಂಧಿಕರೊಂದಿಗೆ ಚರ್ಚ್ ರಸ್ತೆ, ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಯ ಹೋಟೆಲ್, ಪಬ್‌ಗಳಲ್ಲಿ ತುಂಬಿಕೊಂಡಿದ್ದರು. ಎಂ.ಜಿ. ರಸ್ತೆಯಲ್ಲಿ ವಾಹನಗಳ ದಟ್ಟಣೆ ಉಂಟಾಗಿ ವಾಹನ ಸವಾರರು ಪರದಾಡಿದರು.

ಹೆಣ್ಣು ಮಗುವಿಗೆ ಜನ್ಮ ನೀಡಿದ ಅಂಗವಿಕಲ ಮಹಿಳೆ

ಬೆಂಗಳೂರು: ಹೊಟ್ಟೆಯು ಬೆನ್ನಿನತ್ತ ಹೊರಳಿದ್ದರಿಂದ ಸಮಸ್ಯೆ ಎದುರಿಸುತ್ತಿದ್ದ ಸರ್ಜಾಪುರದ ಅಂಗವಿಕಲ ಕಾರ್ಮಿಕ ಮಹಿಳೆಗೆ ಕಲ್ಯಾಣ ನಗರದ ಸ್ಪೆಷಲಿಸ್ಟ್ ಆಸ್ಪತ್ರೆಯ ವೈದ್ಯರು ಶನಿವಾರ ಹೆರಿಗೆ ಮಾಡಿಸಿದ್ದು, ತಾಯಿ–ಮಗು ಆರೋಗ್ಯವಾಗಿದ್ದಾರೆ.

ಸುಮಾ ಎಂಬುವರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ. ಪೋಲಿಯೊಪೀಡಿತರಾಗಿದ್ದ ಅವರಿಗೆ, ಊರುಗೋಲಿನ ನೆರವಿಲ್ಲದೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಅವರ ಪತಿ ಮಂಜುನಾಥ್ ದಿನಗೂಲಿ ನೌಕರ. ಕಾರ್ಖಾನೆಯೊಂದರಲ್ಲಿ ಬಟ್ಟೆ ಹೊಲಿಯುವ ಕೆಲಸ ಮಾಡುತ್ತಿದ್ದ ಅವರಿಗೆ ಕೋವಿಡ್ ಬಳಿಕ ಕೆಲಸ ಇರಲಿಲ್ಲ.

‘ಅವರು ಆಸ್ಪತ್ರೆಯನ್ನು ಸಂಪರ್ಕಿಸಿದರು. ಅವರಿಗೆ ಹೆರಿಗೆ ಮಾಡಿಸುವುದು ಸವಾಲಾಗಿತ್ತು. ಅವರಿಗೆ ಸಹಜ ಹೆರಿಗೆಯನ್ನೇ ಮಾಡಲಾಗಿದ್ದು, ₹ 30 ಸಾವಿರ ನೆರವನ್ನೂ ನೀಡಲಾಗಿದೆ. ಎಲ್ಲ ವೆಚ್ಚವನ್ನು ಆಸ್ಪತ್ರೆಯೇ ಭರಿಸಿದೆ’ ಎಂದು ವೈದ್ಯರು ತಿಳಿಸಿದರು.

ಹೊಸ ವರ್ಷಾಚರಣೆ: ನಿಷೇಧಾಜ್ಞೆ ಉಲ್ಲಂಘಿಸುವಂತಿಲ್ಲ– ಕಮಲ್ ಪಂತ್

‘ಒತ್ತಾಯದ ಬಂದ್‌ಗೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒತ್ತಾಯದ ಬಂದ್‌ಗೆ ನಾವು ಅವಕಾಶ ನೀಡುವುದಿಲ್ಲ’ ಎಂದು ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು ‘ಕರ್ನಾಟಕ ಬಂದ್ ಬಗ್ಗೆ ನಮಗೆ ಮಾಹಿತಿ ಇಲ್ಲ. ಈ ವಿಚಾರವಾಗಿ ಈವರೆಗೂ ಯಾರೊಬ್ಬರೂ ನಮ್ಮನ್ನು ಸಂಪರ್ಕಿಸಿಲ್ಲ. ನಾಗರಿಕರು ಸ್ವ ಇಚ್ಛೆಯಿಂದ ಬಂದ್‌ಗೆ ಸಹಕರಿಸಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಬಲವಂತಪಡಿಸಿದರೆ, ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸಿದರೆ ಕಾನೂನು ಕ್ರಮ ಕೈಗೊಳ್ಳುವುದು ಅನಿವಾರ್ಯ. ಇದಕ್ಕೆ ಅಗತ್ಯ ತಯಾರಿ ಮಾಡಿಕೊಳ್ಳಲಾಗುತ್ತದೆ’ ಎಂದರು.

‘ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ಅವಕಾಶ ಇಲ್ಲ. ಸರ್ಕಾರದ ಆದೇಶದಲ್ಲೇ ಇದನ್ನು ಸ್ಪಷ್ಟಪಡಿಸಲಾಗಿದೆ. ಪಬ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಒಟ್ಟು ಆಸನ ಸಾಮರ್ಥ್ಯದ ಶೇ 50 ರಷ್ಟು ಮಂದಿಗೆ ಅವಕಾಶವಿದೆ. ಅಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವಂತಿಲ್ಲ. ಹೋದ ವರ್ಷದ ಹಾಗೆ ಅದಕ್ಕೆ ಪ್ರತ್ಯೇಕ ಮಾರ್ಗಸೂಚಿ ಬಿಡುಗಡೆ ಮಾಡಲಾಗುತ್ತದೆ. ಕೆಲ ಷರತ್ತುಗಳನ್ನೂ ವಿಧಿಸಲಾಗುತ್ತದೆ. ನಿಷೇಧಾಜ್ಞೆಯನ್ನೂ ಜಾರಿಗೊಳಿಸಲಾಗುತ್ತದೆ’ ಎಂದು ಹೇಳಿದರು.

‘ಹೋಟೆಲ್, ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ನಿಗದಿಯಾಗಿರುವ ಪಾರ್ಟಿಗಳಲ್ಲಿ ಪಾಲ್ಗೊಳ್ಳಲು ಮುಂಗಡ ಬುಕ್ಕಿಂಗ್ ಮಾಡಿದವರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ.

ಅವರು ಅಗತ್ಯ ದಾಖಲೆಗಳನ್ನು ತೋರಿಸಬೇಕಾಗುತ್ತದೆ. ನಮ್ಮ ಅಧಿಕಾರಿಗಳು ಈಗಾಗಲೇ ಕ್ಲಬ್ ಹಾಗೂ ಪಬ್ ಮಾಲೀಕರ ಜೊತೆ ಮಾತುಕತೆ ನಡೆಸಿದ್ದಾರೆ.

ಸೋಮವಾರ ಅಥವಾ ಮಂಗಳವಾರ ಹೊಸ ಮಾರ್ಗಸೂಚಿ ಹೊರಡಿಸಲಾಗುತ್ತದೆ’ ಎಂದು ವಿವರಿಸಿದರು.

‘ಗುರುತಿನ ಚೀಟಿ ಹೊಂದಿರುವುದು ಕಡ್ಡಾಯ’

‘ಚರ್ಚ್‌ಸ್ಟ್ರೀಟ್ ಹಾಗೂ ಬ್ರಿಗೇಡ್ ರಸ್ತೆಯಲ್ಲಿ ಪೊಲೀಸ್ ಬಂದೋಬಸ್ತ್ ಇರಲಿದೆ. ಬೇರೆ ಊರುಗಳಿಗೆ ಹೋಗುವ ಸಲುವಾಗಿ ವಿಮಾನ ನಿಲ್ದಾಣ, ರೈಲ್ವೆ ಹಾಗೂ ಬಸ್ ನಿಲ್ದಾಣಗಳಿಗೆ ಬರುವವರು ಅಗತ್ಯ ದಾಖಲೆಗಳನ್ನು ತೋರಿಸಬೇಕಾಗುತ್ತದೆ. ಕಚೇರಿಗಳಿಗೆ ಹೋಗುವವರೂ ಗುರುತಿನ ಚೀಟಿ ತೋರಿಸಬೇಕು’ ಎಂದು ಕಮಲಪಂತ್ ತಿಳಿಸಿದರು.

ಕೊಲೆ: 11 ವರ್ಷದ ನಂತರ ಅಪರಾಧಿಗಳಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಶ್ಯಾವಾಟಿಕೆಗೆ ಯುವತಿಯೊಬ್ಬಳನ್ನು ಕಳುಹಿಸುವುದಾಗಿ ನಂಬಿಸಿ ನವದೆಹಲಿಯ ಸಿದ್ಧಾರ್ಥ್ ದಾಸ್ ಎಂಬುವರನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಕೊಲೆ ಮಾಡಿದ್ದ ಅಪರಾಧಿಗಳಿಗೆ ನಗರದ 57ನೇ ಸಿಸಿಎಚ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ನ್ಯಾಯಾಧೀಶ ಕೆ.ಜಿ.ಚಿಂತಾ ಅವರು ಕಾಮಾಕ್ಷಿಪಾಳ್ಯ ಬಳಿಯ ರಂಗನಾಥಪುರದ ವಿನೋದ್ (40) ಹಾಗೂ ಹೊಂಗಸಂದ್ರ ನಿವಾಸಿ ರಾಘವೇಂದ್ರ (20) ಎಂಬುವರಿಗೆ ಶಿಕ್ಷೆಯ ಜೊತೆಗೆ ತಲಾ ₹50 ಸಾವಿರ ದಂಡ ವಿಧಿಸಿದ್ದಾರೆ. ಈ ಮೊತ್ತವನ್ನು ಮೃತ ಯುವಕನ ತಂದೆ ಸುಧಾಮ ದಾಸ್‌ಗೆ ನೀಡುವಂತೆ ಆದೇಶಿಸಿದ್ದಾರೆ.

‘ನವದೆಹಲಿಯ ಲೈಟ್ ಕ್ರಾಫ್ಟ್ ಹೆಸರಿನ ಕಂಪನಿಯಲ್ಲಿ ಮಾರುಕಟ್ಟೆ ವಿಭಾಗದ ಮ್ಯಾನೇಜರ್ ಸಿದ್ದಾರ್ಥ್,ಕೆಲಸ ನಿಮಿತ್ತ ಮಂತ್ರಿ ಮಾಲ್‌ಗೆ ಬಂದಿದ್ದರು. ಎಸ್.ಸಿ.ರಸ್ತೆಯಲ್ಲಿರುವ ಕರಾವಳಿ ಲಾಡ್ಜ್‌ನಲ್ಲಿ ತಂಗಿದ್ದ ಅವರು 2010ರ ಮಾರ್ಚ್ 26ರಂದು ರಾತ್ರಿ 8.30ರ ಸುಮಾರಿಗೆ ಸಹೋದ್ಯೋಗಿ ಜೊತೆ ಅಭಿನಯ ಚಿತ್ರಮಂದಿರದ ಬಳಿ ನಿಂತಿದ್ದರು. ಈ ವೇಳೆ ವಿನೋದ್, ಅವರ ಬಳಿ ಹೋಗಿ ತನ್ನನ್ನು ಪರಿಚಯಿಸಿಕೊಂಡಿದ್ದ. ವೇಶ್ಯಾವಾಟಿಕೆಗೆ ಯುವತಿಯರನ್ನು ಕೊಡಿಸುವುದಾಗಿ ಆಸೆ ತೋರಿಸಿದ್ದ’ ಎಂದು ಶೇಷಾದ್ರಿಪುರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

‘ಸಿದ್ಧಾರ್ಥ್‌ನನ್ನು ಪ್ಯಾಲೇಸ್ ಮೈದಾನಕ್ಕೆ ಕರೆದುಕೊಂಡು ಹೋಗಿದ್ದ ಅಪರಾಧಿಗಳು ಚಾಕು ತೋರಿಸಿ ಮೊಬೈಲ್, ಹಣ, ಎಟಿಎಂ ಕಾರ್ಡ್ ಕಸಿದುಕೊಂಡಿದ್ದರು. ಸಿದ್ಧಾರ್ಥ್ ಮೊಬೈಲ್‌ನಿಂದಲೇ ಲಾಡ್ಜ್‌ಗೆ ಕರೆಮಾಡಿ ಅಲ್ಲಿನ ಸಿಬ್ಬಂದಿಯಿಂದ ಪಿನ್ ನಂಬರ್ ಪಡೆದುಕೊಂಡಿದ್ದರು. ನಂತರ ಅಪರಾಧಿಯೊಬ್ಬ ಎಟಿಎಂ ಕೇಂದ್ರಕ್ಕೆ ಹೋಗಿ ಪಿನ್ ನಂಬರ್ ಸರಿ ಇದೆಯೊ ಇಲ್ಲವೊ ಎಂದು ಪರಿಶೀಲಿಸಿದ್ದ. ಅದು ಸರಿ ಇದೆ ಎಂಬುದು ಖಾತರಿಯಾದ ನಂತರ ಹಗ್ಗದಿಂದ ಸಿದ್ಧಾರ್ಥ್‌ನ ಕುತ್ತಿಗೆ ಬಿಗಿದು ಸಾಯಿಸಿದ್ದರು. ಬಳಿಕ ಅಲ್ಲೇ ಇದ್ದ ಕಟ್ಟಿಗೆಗಳ ಮೇಲೆ ಶವ ಇಟ್ಟು ಪೆಟ್ರೋಲ್ ಸುರಿದು ಸುಟ್ಟುಹಾಕಿದ್ದರು. ಎಟಿಎಂ ಕಾರ್ಡ್ ಬಳಸಿ ₹73 ಸಾವಿರ ಹಣ ಡ್ರಾ ಮಾಡಿಕೊಂಡಿದ್ದರು’ ಎಂದೂ ತಿಳಿಸಲಾಗಿದೆ.

ನಿರ್ದೇಶಕ ನಾಗಶೇಖರ್‌ಗೆ ವಂಚನೆ: ಇಬ್ಬರ ವಿರುದ್ಧ ದೂರು

ಬೆಂಗಳೂರು: ‘ತನಗೆ ಮನೆ ಮಾರುವುದಾಗಿ ಹೇಳಿ ಹಂತ ಹಂತವಾಗಿ ₹50 ಲಕ್ಷ ಹಣ ಪಡೆದಿದ್ದ ಮಹಿಳೆ ಈಗ ಬೇರೊಬ್ಬರಿಗೆ ಮನೆ ಮಾರಾಟ ಮಾಡಿದ್ದಾರೆ. ತನ್ನಿಂದ ಪಡೆದ ಹಣವನ್ನು ಈವರೆಗೂ ಹಿಂತಿರುಗಿಸಿಲ್ಲ’ ಎಂದು ಚಲನಚಿತ್ರ ನಿರ್ದೇಶಕ ನಾಗಶೇಖರ್ ಅವರು ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ದೂರಿನ ಆಧಾರದಲ್ಲಿ ಪೊಲೀಸರು ರಾಜರಾಜೇಶ್ವರಿ ನಗರ ನಿವಾಸಿಗಳಾದ ಮೀನಾ ಹಾಗೂ ರಾಜ್‌ಕುಮಾರ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಆರ್.ಆರ್.ನಗರದ ಜಯಣ್ಣ ಲೇಔಟ್‌ನಲ್ಲಿ ಮನೆ ಖರೀದಿಸಲು ನಾಗಶೇಖರ್ ನಿರ್ಧರಿಸಿದ್ದರು. ಮೀನಾ ಮನೆ ನೀಡಲು ಒಪ್ಪಿದ್ದರು. ₹2.70 ಕೋಟಿಗೆ ಮನೆ ಖರೀದಿಸುವ ಕುರಿತು ಮಾತುಕತೆ ನಡೆದಿತ್ತು. 2020ರ ಆಗಸ್ಟ್‌ನಲ್ಲಿ ಖರೀದಿ ಒಪ್ಪಂದ ಮಾಡಿಕೊಂಡಿದ್ದ ನಾಗಶೇಖರ್ ಹಂತ ಹಂತವಾಗಿ ಮೀನಾ ಖಾತೆಗೆ ₹50 ಲಕ್ಷ ವರ್ಗಾಯಿಸಿದ್ದರು’ ಎಂದು ಪೊಲೀಸರು ಹೇಳಿದ್ದರು.

‘ಖರೀದಿ ಒಪ್ಪಂದದ ಬಳಿಕ ಮಹಿಳೆಯು ಮತ್ತೊಬ್ಬರಿಗೆ ಮನೆ ಮಾರಿದ್ದಳು. ನಾಗಶೇಖರ್ ಅವರಿಂದ ಪಡೆದಿದ್ದ ಮೊತ್ತವನ್ನೂ ಹಿಂತಿರುಗಿಸಿರಲಿಲ್ಲ. ದೂರು ದಾಖಲಾದ ಕೂಡಲೇ ವಂಚಕರಿಬ್ಬರೂ ತಲೆಮರೆಸಿಕೊಂಡಿದ್ದಾರೆ’ ಎಂದು ತಿಳಿಸಿದರು.

ಜನಪ್ರಿಯತೆ ಜತೆಗೆ ವಿದ್ಯಾರ್ಥಿಗಳ ಸಂಖ್ಯೆಯೂ ಏರಿಕೆ!

ಗದುಗಿನ ನಾಗಾವಿ ಬಳಿ ಇರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

ರಾಜ್ಯದಲ್ಲಿರುವ ಐದು ವಿಶೇಷ ವಿಶ್ವವಿದ್ಯಾಲಯಗಳು ಭ್ರಷ್ಟಾಚಾರ ಮತ್ತು ದುರಾಡಳಿತದ ನೆರಳಿನಲ್ಲಿ ತಮ್ಮ ಘನ ಉದ್ದೇಶವನ್ನೇ ಮರೆತಂತಿವೆ. ಈ ವಿಶ್ವವಿದ್ಯಾಲಯಗಳ ಕಾಯಕಲ್ಪ ಆಗಬೇಕಿರುವುದು ಹೇಗೆ? ಇವುಗಳನ್ನು ಮತ್ತೆ ಪ್ರವರ್ಧಮಾನಕ್ಕೆ ತರಲು ಕೈಗೊಳ್ಳಬೇಕಾದ ಕ್ರಮಗಳೇನು ಎಂಬ ಪ್ರಶ್ನೆಗಳನ್ನು 'ಪ್ರಜಾವಾಣಿ'ಯು ತಜ್ಞರ ಮುಂದಿರಿಸಿತು. ಸಮಸ್ಯೆಗಳ ಸುಳಿಯನ್ನು ಎಲ್ಲಿಂದ ಬಿಡಿಸಬೇಕು ಎಂಬುದಕ್ಕೆ ಪರಿಣತರು ಇಲ್ಲಿ ಉತ್ತರಿಸಿದ್ದಾರೆ.

ಪ್ರತಿ ವಿಶ್ವವಿದ್ಯಾಲಯದಲ್ಲಿಯೂ ಕಾಯಂ ಬೋಧಕರ ನೇಮಕಾತಿಗೆ ಕ್ರಮ ಕೈಗೊಂಡರೆ ನಿರೀಕ್ಷಿತ ಫಲ ಸಿಗುತ್ತದೆ ಎಂಬುದು ಎಲ್ಲರ ಒಕ್ಕೊರಲಿನ ಮಾತು. ಜೊತೆಗೆ ಕೆಲವು ಸಕಾರಾತ್ಮಕ ಸಲಹೆಗಳೂ ಇಲ್ಲಿವೆ. ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವಾಗ ಇರುವ ಉತ್ಸಾಹ, ಅವುಗಳನ್ನು ಬೆಳೆಸುವವರೆಗೂ, ಅವು ಸ್ವಾಯತ್ತವಾಗಿ ಬೆಳೆಯುವವರೆಗೂ ಪೋಷಿಸುವಷ್ಟು ಇದ್ದರೆ, ಅಭಿವೃದ್ಧಿ ಸುಸ್ಥಿರವಾಗುತ್ತದೆ. ಇಲ್ಲದಿದ್ದಲ್ಲಿ ಕೆಲವೆಡೆ ಕೇವಲ ಕಟ್ಟಡ ಸಂಸ್ಕೃತಿಯೂ, ಇನ್ನೂ ಕೆಲವೆಡೆ ಕೇವಲ ಕಡತಗಳ ಸಂಸ್ಕೃತಿಯೂ ಬೆಳೆಯುತ್ತದೆ.

ಪರಿಣತರು ಏನು ಹೇಳುತ್ತಾರೆ ಇಲ್ಲಿದೆ..

● ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಗ್ರಾಮೀಣ ಜನರ ಬದುಕಿನ ವಿವಿಧ ಆಯಾಮಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ, ಗ್ರಾಮೀಣ ಕೌಶಲಗಳನ್ನು ಕಲಿಸುವ ಉದ್ದೇಶದೊಂದಿಗೆ ಆರಂಭವಾದ ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಅದಕ್ಕೆ ತಕ್ಕದಾದ ಪಠ್ಯಕ್ರಮವನ್ನೂ ರಚಿಸಿ, ವಿಶ್ವವಿದ್ಯಾಲಯ ಸ್ಥಾಪನೆಯ ಉದ್ದೇಶವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತ ಬಂದಿದೆ.

ಗ್ರಾಮೀಣ ಜನರ ಉದ್ಯೋಗಗಳಾದ ಕೃಷಿ, ಪಶುಸಂಗೋಪನೆ, ಸಸ್ಯಪಾಲನೆ ಹಾಗೂ ಇನ್ನಿತರ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತ ಬಂದಿದೆ. ಈ ಮೂಲಕ ವಿಶ್ವವಿದ್ಯಾಲಯದ ಉದ್ದೇಶವನ್ನು ಸಶಕ್ತಗೊಳಿಸುತ್ತಿದೆ. ಈ ವಿಶ್ವವಿದ್ಯಾಲಯದಲ್ಲಿ ಪ್ರಾಯೋಗಿಕ ಕಲಿಕೆಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ಬಿತ್ತುವುದರಿಂದ ಬೆಳೆಯುವವರೆಗಿನ ಎಲ್ಲ ಪ್ರಕ್ರಿಯೆಯ ಅನುಭವ ಪಡೆದುಕೊಳ್ಳುತ್ತಿದ್ದಾರೆ.

'2021–22ನೇ ಸಾಲಿನ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದಲ್ಲಿ ಪದವಿ ತರಗತಿಗಳನ್ನು ಕೂಡ ಆರಂಭಿಸಲಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ ಸಂಬಂಧಿಸಿದ ಪಠ್ಯಕ್ರಮ ರಚಿಸಲಾಗಿದೆ. ಆರಂಭದಲ್ಲಿ ಬೆರಳೆಣಿಕೆಯಷ್ಟಿದ್ದ ವಿದ್ಯಾರ್ಥಿಗಳ ಸಂಖ್ಯೆ ಪ್ರತಿ ವರ್ಷ ಗಣನೀಯವಾಗಿ ಹೆಚ್ಚುತ್ತಿರುವುದು ವಿಶ್ವವಿದ್ಯಾಲಯದ ಖ್ಯಾತಿ ಹೆಚ್ಚುತ್ತಿರುವುದಕ್ಕೆ ಸಾಕ್ಷಿಯಾಗಿದೆ' ಎನ್ನುತ್ತಾರೆ ಅವರು.

ವಿಶ್ವವಿದ್ಯಾಲಯದಲ್ಲಿ ಕಾಯಂ ಸಿಬ್ಬಂದಿ ಇಲ್ಲದ ಕಾರಣ ಸಂಶೋಧನಾ ಚಟುವಟಿಕೆಗಳು ನಡೆಯುತ್ತಿಲ್ಲ. ಗೆಸ್ಟ್ ಫ್ಯಾಕಲ್ಟಿಗೆ ಗೈಡ್ ಮಾಡುವ ಅವಕಾಶ ಇಲ್ಲದ ಕಾರಣ ಸಂಶೋಧನೆಯಲ್ಲಿ ಆಸಕ್ತಿ ಇದ್ದರೂ ಕೂಡ ತೊಡಗಿಸಿಕೊಳ್ಳಲಾಗದ ಅಸಹಾಯಕ ಸ್ಥಿತಿಯಲ್ಲಿದ್ದಾರೆ ವಿದ್ಯಾರ್ಥಿಗಳು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗೆ ಸಂಬಂಧಿಸಿದಂತೆ ಇರುವ ದೇಶದ ಏಕೈಕ ವಿಶ್ವವಿದ್ಯಾಲಯ ಗದುಗಿನಲ್ಲಿದೆ. ಒಂದು ವಿಶ್ವವಿದ್ಯಾಲಯ ಆರಂಭವಾಗಿ ತುಂಬ ಕಡಿಮೆ ಅವಧಿಯಲ್ಲಿ ಅತ್ಯುತ್ತಮ ಪ್ರತಿಕ್ರಿಯೆ ಪಡೆದುಕೊಂಡಿದ್ದು ಇದರ ಹೆಗ್ಗಳಿಕೆ.



ಎಚ್‌.ಕೆ.ಪಾಟೀಲ

'ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ' ಎಂದು ವಿಶ್ವವಿದ್ಯಾಲಯ ಸ್ಥಾಪನೆಯ ಕನಸುಗಾರ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕ ಎಚ್‌.ಕೆ.ಪಾಟೀಲ ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಅಪರೂಪದ ಕೋರ್ಸ್‌ಗಳು ಲಭ್ಯವಿದೆ.

ಲಭ್ಯ ಇರುವ ಕೋರ್ಸ್‌ಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ನಿರ್ವಹಣೆ, ಸಾರ್ವಜನಿಕ ಆಡಳಿತ, ಅಭಿವೃದ್ಧಿ ಅರ್ಥಶಾಸ್ತ್ರ, ಸಮುದಾಯ ಅಭಿವೃದ್ಧಿ, ಸಮುದಾಯ ಆರೋಗ್ಯ, ಉದ್ಯಮಶೀಲತೆ, ಸಹಕಾರ ನಿರ್ವಹಣೆ, ಜಿಯೊಇನ್ಫರ್ಮಾಟಿಕ್ಸ್, ಆಹಾರ ಮತ್ತು ತಂತ್ರಜ್ಞಾನ, ಡೇಟಾ ಅನಾಲಿಟಿಕ್ಸ್, ಸಾರ್ವಜನಿಕ ಆರೋಗ್ಯ, ಗ್ರಾಮೀಣ ನಿರ್ವಹಣೆ/ ಕೃಷಿ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದ ಎಂ.ಎ, ಎಂಎಸ್‌ಡಬ್ಲ್ಯು, ಎಂ.ಕಾಂ, ಎಂ.ಎಸ್ಸಿ, ಎಂಪಿಎಸ್ ಹಾಗೂ ಎಂಬಿಎ ಕೋರ್ಸ್

ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಸಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, 2021–22ನೇ ಸಾಲಿನಲ್ಲಿ ಪದವಿ ತರಗತಿಗಳನ್ನೂ ಆರಂಭಿಸಿದೆ. 'ಈ ವಿಶ್ವವಿದ್ಯಾಲಯದಲ್ಲಿ ಓದಿದವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಉದ್ಯೋಗ ಕಲ್ಪಿಸಬೇಕು ಎಂಬ ಬೇಡಿಕೆ ವಿದ್ಯಾರ್ಥಿಗಳಿಂದ ಕೇಳಿಬಂದಿದೆ. ಈ ಸಂಬಂಧ ಕಾನೂನು ಬದಲಾವಣೆ ಆಗಬೇಕು. ವಿಶ್ವವಿದ್ಯಾಲಯಕ್ಕೆ ಕಾಯಂ ಸಿಬ್ಬಂದಿ ನೇಮಕ ಹಾಗೂ ವಿದ್ಯಾರ್ಥಿಗಳಿಗೆ ಉದ್ಯೋಗ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕೂಡ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ' ಎಂದು ಅವರು ಹೇಳಿದರು.

ಇಲ್ಲಿ ಓದಿರುವವರು ಕೃಷಿಗೆ ಸಂಬಂಧಿಸಿದ ಉದ್ಯಮಗಳನ್ನು ಆರಂಭಿಸಿದ್ದಾರೆ. ಎನ್‌ಜಿಒಗಳಲ್ಲೂ ಕೆಲಸ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ಉದ್ದೇಶ ಈಡೇರಿಕೆಯಲ್ಲಿ ಶೇ 100ರಷ್ಟು ಸಫಲತೆ ಸಾಧಿಸಿದ್ದೇವೆ

ಪ್ರೊ. ಬಸವರಾಜ ಲಕ್ಕಣ್ಣವರ, ಕುಲಸಚಿವರು ಪಂಚಾಯತ್ ರಾಜ್ ವಿಶ್ವವಿದ್ಯಾಲಯ

ಆಗಬೇಕಿರುವುದು: ವಿಶ್ವವಿದ್ಯಾಲಯ ದಲ್ಲಿ ಕಾಯಂ ಸಿಬ್ಬಂದಿ ಇಲ್ಲದ ಕಾರಣ ಸಂಶೋಧನಾ ಚಟುವಟಿಕೆಗಳು ನಡೆಯುತ್ತಿಲ್ಲ. ಗೆಸ್ಟ್ ಫ್ಯಾಕಲ್ಟಿಗೆ ಮಾರ್ಗದರ್ಶನ ಮಾಡುವ ಅವಕಾಶ ಇಲ್ಲದ ಕಾರಣದಿಂದಾಗಿ ಸಂಶೋಧನಾಸಕ್ತ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದಾರೆ. ಆದಕಾರಣ, ಸರ್ಕಾರ ತಕ್ಷಣವೇ ಕಾಯಂ ಸಿಬ್ಬಂದಿ ನೇಮಕಕ್ಕೆ ಕ್ರಮವಹಿಸಬೇಕಿದೆ.

ಗುರಿ ತಲುಪದ ಮಹಿಳಾ ವಿವಿ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ
ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

● ನಿರೂಪಣೆ: ಬಸವರಾಜ್ ಸಂಪಳ್ಳಿ

ವಿಜಯಪುರ: ಲಿಂಗ ತಾರತಮ್ಯ ನಿವಾರಿಸುವುದು, ಗ್ರಾಮೀಣ ಮತ್ತು ಹಿಂದುಳಿದ ಮಹಿಳೆಯರನ್ನು ಮುಖ್ಯವಾಹಿನಿಗೆ ಸೇರುವಂತೆ ಸಹಾಯ ಮಾಡುವುದು, ಮಹಿಳೆಯರನ್ನು ಶಿಕ್ಷಣದಿಂದ ಸಶಕ್ತರನ್ನಾಗಿಸುವುದು, ಸಮಾಜದ ಎಲ್ಲ ಸ್ತರಗಳಲ್ಲಿ ಮಹಿಳೆಯರು ಪರಿಣಾಮಕಾರಿ ಮತ್ತು ರಚನಾತ್ಮಕ ಪಾತ್ರ ನಿರ್ವಹಿಸುವಂತೆ ಸಮರ್ಥರಾಗಲು ಪ್ರೇರಣೆ ನೀಡುವ ಉದ್ದೇಶದೊಂದಿಗೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಆರಂಭವಾಗಿದೆ.

ಆದರೆ, ಆರ್ಥಿಕ ಅಡಚಣೆ, ಸಿಬ್ಬಂದಿ ಕೊರತೆ, ಕಟ್ಟಡಗಳ ಕೊರತೆ, ಸರ್ಕಾರದ ನಿರ್ಲಕ್ಷ್ಯದಿಂದ ಉದ್ದೇಶಿತ ಗುರಿ ತಲುಪಲು ಇದುವರೆಗೂ ಸಾಧ್ಯವಾಗಿಲ್ಲ.

ವಿವಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಒಳಪಡಿಸಬೇಕು ಎಂಬ ಬೇಡಿಕೆ ಇದೆ. ಆದರೆ, ಸದ್ಯ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಇರುವುದರಿಂದ ವಿಶೇಷ ಅನುದಾನ ಲಭಿಸದೆ ಅಭಿವೃದ್ಧಿಗೆ ತೊಡಕಾಗಿದೆ.

ಬೇಕಿದೆ ವಿಶೇಷ ಸ್ಥಾನಮಾನ

ಆರಂಭದಲ್ಲಿ ಉತ್ತರ ಕರ್ನಾಟಕ 13 ಜಿಲ್ಲೆಗಳಿಗೆ ಸೀಮಿತವಾಗಿದ್ದ ಮಹಿಳಾ ವಿಶ್ವವಿದ್ಯಾಲಯದ ವ್ಯಾಪ್ತಿಯನ್ನು ಸರ್ಕಾರ ಇಡೀ ರಾಜ್ಯಕ್ಕೆ ವಿಸ್ತರಿಸಿದೆ. ಆದರೆ, ಈ ಆದೇಶ ಇನ್ನೂ ಆಡಳಿತಾತ್ಮಕವಾಗಿ ಜಾರಿ ಆಗಿಲ್ಲ.

ಈ ವಿಶ್ವವಿದ್ಯಾಲಯದ ಪಠ್ಯದಲ್ಲಿ ಲಿಂಗಸೂಕ್ಷ್ಮತೆ, ಮಹಿಳಾ ಸಬಲೀಕರಣದ ಮಾದರಿ ನೀಡಿಕೆ ಮತ್ತು ಎಲ್ಲ ಜ್ಞಾನಶಿಸ್ತುಗಳಲ್ಲಿ ಮಹಿಳಾ ಲೋಕದೃಷ್ಟಿಯ ವಿನ್ಯಾಸ ತಿಳಿಸುವ, ಬೆಳೆಸುವ ಕ್ರಮವನ್ನು ಜಾರಿ ಮಾಡಬೇಕಿದೆ. ಶಿಕ್ಷಣದ ಸಿದ್ಧಚೌಕಟ್ಟಿನ ಮಾದರಿಗಳನ್ನು ಮುರಿದುಕಟ್ಟುವ ಬಗೆಯನ್ನು ಶೋಧಿಸಬೇಕಾಗಿದೆ.

ಈ ವಿವಿಯು ಹತ್ತರಲ್ಲಿ ಒಂದಷ್ಟೆ ಎಂಬ ಸರ್ಕಾರದ ಧೋರಣೆಯನ್ನು ಪರಾಮರ್ಶಿಸಿ ಕೊಳ್ಳುವಂತೆ ಒತ್ತಾಯಿಸಿ, ವಿಶೇಷ ಸ್ಥಾನಮಾನಕ್ಕಾಗಿ ಪ್ರಯತ್ನಿಸಬೇಕಿದೆ.

ಪ್ರೊ.ಸಬಿಹಾ ಭೂಮಿಗೌಡ, ನಿಕಟಪೂರ್ವ ಕುಲಪತಿ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ಸ್ತ್ರೀನೋಟದ ಕುಲಪತಿ ಬೇಕು

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಮಹಿಳಾ ಅಸ್ಮಿತೆಯ, ಮಹಿಳಾ ಪರ ದೃಷ್ಟಿಕೋನ ಇರುವ, ಲಿಂಗಸಮಾನತೆ ಸಾರುವ ದೃಢಸಂಕಲ್ಪ ಹಾಗೂ ಕಣ್ನೋಟ ಇರುವ ಒಬ್ಬ ಮುತ್ಸದ್ದಿ ಕುಲಪತಿ ಬೇಕು. ಸರ್ಕಾರದ ಜೊತೆ ಮಾತುಕತೆ ನಡೆಸಿ, ಹೆಚ್ಚಿನ ಅನುದಾನ ತರುವ, ಕೆಲಸ ಚುರುಕುಗೊಳಿಸುವ ಅಕಾಡೆಮಿಕ್ ಆಗಿರುವ ಕುಲಪತಿ ಇರಬೇಕು.

ಈಗಿನ ಮಹಿಳಾ ವಿವಿ ಕೇವಲ ಮಹಿಳಾ ಕಾಲೇಜಾಗಿ ಕಾರ್ಯನಿರ್ವಹಿಸುತ್ತಿದೆಯೇ ಹೊರತು ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಿಸುತ್ತಿಲ್ಲ. 2004ರ ಉನ್ನತ ಶಿಕ್ಷಣ ಕಾರ್ಯಪಡೆ ವರದಿ ಹೇಳಿರುವಂತೆ ಇತರೆ ವಿವಿಗಳಂತೆ ಮಹಿಳಾ ವಿವಿ ಆಗಬಾರದು. ಮಹಿಳಾ ಪರ ಇರುವ ಕೋರ್ಸ್, ಲಿಂಗ ಸಂವೇದನೆ ತರಬೇತಿ ನೀಡುವ ವಿವಿ ಆಗಬೇಕು. ಮಹಿಳಾ ಅಧ್ಯಯನ ಎಂಬುದು ಕೇವಲ ವಿಷಯ ವಸ್ತುವಲ್ಲ. ಜ್ಞಾನಶಿಸ್ತು ಆಗಬೇಕು. ಆದರೆ, ಇಂದಿಗೂ ಅದು ಮಾಡಲು ಸಾಧ್ಯವಾಗಿಲ್ಲ. ಜಡತ್ವಕ್ಕೆ ಜಾರಿರುವ ಮಹಿಳಾ ವಿಶ್ವವಿದ್ಯಾಲಯವನ್ನು ಮಹಿಳಾ ಪರಿಕಲ್ಪನೆ ಮೇಲೆ ಪುನರ್ ಕಟ್ಟುವ ಕೆಲಸವಾಗಬೇಕು.

ಮೀನಾಕ್ಷಿ ಬಾಳಿ, ಪ್ರಾಧ್ಯಾಪಕಿ, ಕಲಬುರ್ಗಿ

ಸೌಕರ್ಯ ವಂಚಿತ ಜಾನಪದ ವಿವಿ

● ಸಿದ್ದು ಆರ್.ಜಿ. ಹಳ್ಳಿ

ಹಾವೇರಿ: 'ಜಾನಪದ ವಿವಿಯಲ್ಲಿ ಎಲ್ಲ ಸಮಸ್ಯೆಗಳಿಗೂ ಮೂಲ ಕಾರಣ ಕಾಯಂ ಹುದ್ದೆಗಳಿಲ್ಲದಿರುವುದು. ಕಾಯಂ ಹುದ್ದೆಗಳಿದ್ದರೆ ಯುಜಿಸಿ ಅನುದಾನ, ಗುಣಮಟ್ಟದ ಶಿಕ್ಷಣ, ಪ್ರವೇಶಾತಿ ಹೆಚ್ಚಳ, ಸಂಶೋಧನೆಗೆ ಒತ್ತು, ಬೋಧಕರ ಗುಣಮಟ್ಟ ವೃದ್ಧಿ ಸೇರಿದಂತೆ ವಿವಿ ಸಮಗ್ರ ಅಭಿವೃದ್ಧಿಯಾಗುತ್ತಿತ್ತು' ಎಂದು ಪ್ರಾಧ್ಯಾಪಕರೊಬ್ಬರು ಸಮಸ್ಯೆಯನ್ನು ತೋಡಿಕೊಳ್ಳುತ್ತಾರೆ. ಜಾನಪದ ವಿಶ್ವವಿದ್ಯಾಲಯದ ಸ್ಥಿತಿಗತಿಗಳನ್ನು ಈ ಮಾತು ಸ್ಪಷ್ಟಪಡಿಸುತ್ತದೆ.

ಅನುದಾನದ ತೀವ್ರ ಕೊರತೆಯಿಂದ ವಿವಿ ಮೂಲ ಸೌಕರ್ಯ ವಂಚಿತವಾಗಿದೆ. ಯುಜಿಸಿ ಮಾನ್ಯತೆ ದೊರಕದ ಕಾರಣ ಸರ್ಕಾರದ ಅನುದಾನವನ್ನು ಅವಲಂಬಿಸಿದೆ.

ಶೈಕ್ಷಣಿಕ ಭವನ, ಗ್ರಂಥಾಲಯದ ಕಟ್ಟಡ, ಜನರಲ್ ಹಾಸ್ಟೆಲ್, ಕ್ಯಾಂಟೀನ್, ಅತಿಥಿ ಗೃಹ, ಕಾಂಪೌಂಡ್, ಕುಲಪತಿ ವಸತಿಗೃಹ, ಬೋಧಕರ ವಸತಿಗೃಹ, ಬೋಧಕೇತರ ವಸತಿಗೃಹ ಹಾಗೂ ಬಸ್ ಸೌಲಭ್ಯದ ಕೊರತೆಗಳನ್ನು ವಿವಿ ಎದುರಿಸುತ್ತಿದೆ. ಕನಿಷ್ಠ ₹25 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದರೆ ಬಹುತೇಕ ಸಮಸ್ಯೆಗಳು ಬಗೆಹರಿಯುತ್ತದೆ ಎನ್ನುತ್ತದೆ ವಿವಿ ಆಡಳಿತ ಮಂಡಳಿ.

ವಿವಿಗೆ ಮಂಜೂರಾದ ಹುದ್ದೆಗಳು ಒಟ್ಟು 56. ಇದರಲ್ಲಿ ಕುಲಪತಿ ಮತ್ತು ಇಬ್ಬರು ಕುಲಸಚಿವರ ಹುದ್ದೆಗಳು ನಿಯೋಜಿತ ಹುದ್ದೆಗಳಾಗಿವೆ. ಉಳಿದಂತೆ 21 ಬೋಧಕ ಮತ್ತು 32 ಬೋಧಕೇತರ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಿಸಿಕೊಳ್ಳಲಾಗಿದೆ.

ಅಗತ್ಯಗಳನ್ನೇ ಪೂರೈಸಿಲ್ಲ'

30 ಸಾವಿರ ಹಳ್ಳಿಗಳ ಚರಿತ್ರೆ ತಿಳಿಸುವ 'ಗ್ರಾಮ ಚರಿತ್ರೆ ಕೋಶ' ಯೋಜನೆ ಪೂರ್ಣಗೊಂಡಿಲ್ಲ. ಮ್ಯೂಸಿಯಂ ಕೆಲಸ ನನೆಗುದಿಗೆ ಬಿದ್ದಿದೆ. ಜಾನಪದ ಕಲೆಯು ಕಾಲಕ್ರಮೇಣ ಕಾಲಗರ್ಭದಲ್ಲಿ ನಶಿಸಿ ಹೋಗುವ ಮುನ್ನ, ಲಭ್ಯವಿರುವುದನ್ನು ದಾಖಲೀಕರಣ ಮಾಡಬೇಕಿದೆ. ಆಧುನಿಕ ಕಾಲಮಾನದಲ್ಲಿ ಜನಪದೀಯ ಕೆಲವು ಅಂಶಗಳನ್ನು ಇಂದಿಗೂ ಅನ್ವಯಿಸಬಹುದು. ಭಾಷೆ, ಸಂಸ್ಕೃತಿ, ಉಪಕರಣಗಳ ತಯಾರಿಕೆಯಲ್ಲಿ, ಕುಶಲಕಲೆಯಲ್ಲಿ ಬಳಸಿಕೊಳ್ಳಲು ಸಾಧ್ಯವಿದೆ.

ಜಾನಪದ ವಿವಿಗೆ ಆರಂಭಿಕ ಹಂತದಲ್ಲಿ ಸ್ಥಳ ಗುರುತಿಸುವಿಕೆಗೆ ಬಸವರಾಜ ಬೊಮ್ಮಾಯಿ ಅವರು ಬಹಳ ಸಹಾಯ ಮಾಡಿದ್ದರು. ಇಂದು ಅವರೇ ಮುಖ್ಯಮಂತ್ರಿಯಾಗಿರುವ ಕಾರಣ ವಿಶೇಷ ಆಸಕ್ತಿ ವಹಿಸಿ ಅಭಿವೃದ್ಧಿಪಡಿಸಬೇಕು ಎಂದು ಮನವಿ ಮಾಡುತ್ತೇನೆ.

ಗೊ.ರು.ಚನ್ನಬಸಪ್ಪ, ಜಾನಪದ ವಿದ್ವಾಂಸ

ಇಚ್ಛಾಶಕ್ತಿ ಕೊರತೆ

ಈ ವಿವಿಯಲ್ಲಿ ಅಧ್ಯಯನ ಮಾಡಿದ ಪದವೀಧರ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುವಂತಾಗಬೇಕು. ಇದರಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಬಹುದು. ಜನಪದ ಕಲೆ, ಜನಪದ ಸಂಸ್ಕೃತಿಯನ್ನು ಮುಂಬರುವ ಪೀಳಿಗೆಗೆ ಉಳಿಸಲು ಸಾಧ್ಯವಿದೆ. ವಿಶ್ವವಿದ್ಯಾಲಯದಲ್ಲಿನ ಮುಖ್ಯಸ್ಥರು ಹಾಗೂ ಸಿಬ್ಬಂದಿ ನಡುವಿನ ಬಿನ್ನಾಭಿಪ್ರಾಯ ಶಮನವಾಗಬೇಕು.

ಗ್ರಾಮೀಣ ಜನಪದ ಕಲೆ ಗುರುತಿಸಲು ವಿವಿ ಜನರ ಬಳಿ ಹೋಗಬೇಕಾಗಿತ್ತು, ಇದುವರೆಗೂ ಹೋಗಿಲ್ಲ. ಜನಪದ ಕಲೆಯನ್ನು ಕ್ರೋಡೀಕರಣ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಸುಗ್ಗಿ, ಸೋಬಾನೆ, ಹಂತಿಪದ, ಭಜನೆ, ಚರ್ಮ ವಾದ್ಯ ಮತ್ತು ಹಾಡುಗಾರಿಕೆ, ಕರಡಿ ಮಜಲು, ಡೊಳ್ಳು ಮಜಲು, ಕೋಲಾಟ ಸೇರಿದಂತೆ ಗ್ರಾಮೀಣ ಕಲೆಯನ್ನು ವಿಡಿಯೊ ದಾಖಲಾತಿ ಮಾಡಬೇಕು. ಅಲ್ಲದೆ ಅವುಗಳ ಸಣ್ಣ ಪುಸ್ತಕಗಳನ್ನು ಪ್ರಕಟಿಸಿ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಣೆ ಮಾಡಬೇಕು. ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ದೊಡ್ಡ ಗ್ರಂಥಗಳನ್ನು ಬರೆದು ಗ್ರಂಥಾಲಯದಲ್ಲಿ ಕಟ್ಟಿಟ್ಟರೆ ಜನಮನಕ್ಕೆ ಪ್ರಚಾರವಾಗಲು ಸಾಧ್ಯವಿಲ್ಲ.

ಶಂಕರ ಅರ್ಕಸಾಲಿ, ಕರ್ನಾಟಕ ರಾಜ್ಯ ಜಾನಪದ ಅಕಾಡೆಮಿ ಸದಸ್ಯ

ಘನ ಉದ್ದೇಶದ ನಿರ್ಲಕ್ಷ್ಯ

ಒಂದನೇ ಪುಟದಿಂದ...

ಅಭಿವೃದ್ಧಿ ಹಣದಿಂದ ನಿಯಮಬಾಹಿರವಾಗಿ ವೇತನ ನೀಡುವುದು, ಅನುಮೋದನೆ ದೊರೆತ ಹುದ್ದೆಗಳಿಗೆ ನೇಮಕಾತಿ ಆಗದಿರುವುದು, ಸದ್ಯ ಕೋವಿಡ್ ನೆಪದಲ್ಲಿ ಎಂಟು ಜನರನ್ನು ಕೆಲಸದಿಂದ ತೆಗೆದಿರುವುದು, ಕಳೆದೆಂಟು ತಿಂಗಳಿಂದ ವೇತನವನ್ನೂ ನೀಡದೇ ಇರುವುದು.. ಹೀಗೆ ಗೊಂದಲಗಳ ಗೂಡಾಗಿದೆ ಈ ವಿಶ್ವವಿದ್ಯಾಲಯ.

2011ರಲ್ಲಿ ಜೀವತಳೆದ ಜಾನಪದ ವಿಶ್ವವಿದ್ಯಾಲಯವು ಜನಪದ ಕ್ಷೇತ್ರಕ್ಕಾಗಿ ವಿಶೇಷವಾದ, ಪ್ರತ್ಯೇಕವಾದ ಪ್ರಪಂಚದ ಮೊದಲ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆ ಹೊಂದಿದೆ. ಇದರ ಜೊತೆಗೇ, ಈವರೆಗೆ ಒಂದೇ ಒಂದು ಕಾಯಂ ಬೋಧಕರ ನೇಮಕಾತಿ ಇಲ್ಲದ ವಿಶ್ವವಿದ್ಯಾಲಯ ಎಂಬ ಅಪಖ್ಯಾತಿಯನ್ನೂ ಹೊಂದಿದೆ. ಈ ವಿಶ್ವವಿದ್ಯಾಲಯದಿಂದ ಆಚೆ ಬರುವವರಿಗೆ ಉದ್ಯೋಗಾವಕಾಶವಾಗಲೀ, ಉದ್ಯೋಗ ಸೃಷ್ಟಿಯಾಗಲಿ ಆಗಲಿಲ್ಲ. ಅಲಕ್ಷಿತ ಮತ್ತು ತಳಮಟ್ಟದ ಸಮುದಾಯದ ಅಧ್ಯಯನ, ಅವರಿಗೂ ಓದು ಜೊತೆಗೆ ಮುಖ್ಯವಾಹಿನಿಗೆ ತರುವ ಗುರುತರ ಉದ್ದೇಶ ಈ ವಿಶ್ವವಿದ್ಯಾಲಯಕ್ಕೆ ಇತ್ತು. ಕಾಲಕಾಲಕ್ಕೆ ಜಾನಪದ ಅಧ್ಯಯನ ವಿಷಯವನ್ನು ವಿಸ್ತಾರಗೊಳಿಸಿ, ಪಾರಂಪರಿಕ ಜ್ಞಾನಕ್ಕೆ ವಿವಿಯ ಚೌಕಟ್ಟಿನ ಶಿಸ್ತಿಗೆ ಒಳಪಡಿಸಬೇಕಿತ್ತು. ಸದ್ಯಕ್ಕೆ ಯಾವ ಕೆಲಸಗಳೂ ಆಗುತ್ತಿಲ್ಲ. ಓದುವವರ ಸಂಖ್ಯೆಯೂ ಕ್ಷೀಣಿಸುತ್ತಿದೆ.

2016ರ ಜೂನ್‌ನಲ್ಲಿ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂತು. 'ಗ್ರಾಮೀಣ ಬೇರು ಜಾಗತಿಕ ಮೇರು' ಎಂಬ ಧ್ಯೇಯವಾಕ್ಯದೊಂದಿಗೆ ವಿಶ್ವವಿದ್ಯಾಲಯವು ಕಾರ್ಯ ಆರಂಭಿಸಿತು. ಗಾಂಧೀಜಿ ಅವರ ಗ್ರಾಮರಾಜ್ಯ ಕಲ್ಪನೆಯೇ ಇದಕ್ಕೆ ಬುನಾದಿಯಾಗಿತ್ತು. 2017–18ರಿಂದ ಶೈಕ್ಷಣಿಕ ಚಟುವಟಿಕೆಗಳಿಲ್ಲಿ ಆರಂಭವಾದವು. ಸ್ವಉದ್ಯೋಗ, ಸುಸ್ಥಿರ ಬೆಳವಣಿಗೆಯ ಪರಿಕಲ್ಪನೆಯಲ್ಲಿ ಇಲ್ಲಿಯ ವಿದ್ಯಾರ್ಥಿಗಳು ಮುಂದುವರಿಯುತ್ತಿದ್ದಾರೆ. ಕೊರತೆಗಳಿದ್ದಾಗಲೂ ತನ್ನ ಉದ್ದೇಶವನ್ನು ಸಾಧಿಸುವಲ್ಲಿ ಈ ವಿಶ್ವವಿದ್ಯಾಲಯವು ದಾಪುಗಾಲು ಹಾಕುತ್ತಿದೆ ಎಂಬುದೊಂದೇ ಕಾರ್ಮೋಡದಂಚಿನ ಬೆಳ್ಳಿಗೆರೆ. ಆದರೆ ಪ್ರಾಧ್ಯಾಪಕ ಹುದ್ದೆ 10, ಅಸೋಸಿಯೇಟ್ ಪ್ರೊಫೆಸರ್ 10, ಅಸಿಸ್ಟೆಂಟ್ ಪ್ರೊಫೆಸರ್ 20, ರಿಸರ್ಚ್ ಪ್ರೊಫೆಸರ್ 10 ಹುದ್ದೆಗಳು ಸೇರಿದಂತೆ ಒಟ್ಟು 50 ಕಾಯಂ ಹುದ್ದೆಗಳಿವೆ. ಆದರೆ, ಈವರೆಗೂ ಈ ಹುದ್ದೆಗಳ ಭರ್ತಿಯಾಗಿಲ್ಲ.

ಈ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣ, ರಾಜಕೀಯ ಇಚ್ಛಾಶಕ್ತಿ ಇಲ್ಲದೇ ಇರುವುದು. ಆರಂಭ ಶೂರತ್ವ ಹಾಗೂ ಘೋಷಿಸುವಲ್ಲಿ ಇರುವಾಗಿನ ಉತ್ಸಾಹ ಅನುದಾನ ನೀಡುವಲ್ಲಿ ಇರುವುದಿಲ್ಲ. ವಿಶ್ವವಿದ್ಯಾಲಯವನ್ನು ಪೋಷಿಸಲಾಗದೇ ಅವು ಸಮಸ್ಯೆಗಳ ಗೂಡಾಗಿದೆ, ಭ್ರಷ್ಟಾಚಾರದ ಬಲೆಯಾಗಿದೆ. ಕಾಯಂ ಸಿಬ್ಬಂದಿ ಇಲ್ಲದೇ ಯುಜಿಸಿ ಅನುದಾನ ಸಿಗುವುದಿಲ್ಲ. ಅನುದಾನವಿಲ್ಲದೆ ಇವು ಬೆಳೆಯುವುದಿಲ್ಲ. ಇದು ಮುಗಿಯದ ವಿಷವರ್ತುಲವಾಗುತ್ತಿದೆ.

ಲಯ ತಪ್ಪಿದ ಸಂಗೀತ ವಿ ವಿ

ಮೈಸೂರು: ಸಂಗೀತ ವಿಶ್ವವಿದ್ಯಾಲಯದಲ್ಲಿ ಆಡಳಿತ, ಮೂಲಸೌಲಭ್ಯ, ಕಟ್ಟಡ ಎಲ್ಲವೂ ಲಯ ತಪ್ಪಿವೆ. ಆರಂಭವಾದಾಗಿನಿಂದ ಕಾಯಂ ಉಪನ್ಯಾಸಕರು ಒಬ್ಬರೂ ಇಲ್ಲ, ಸ್ವಂತ ಕಟ್ಟಡವೂ ಇಲ್ಲ. ಹೀಗಾಗಿ, ಸಂಶೋಧನಾ ಕಾರ್ಯ ನಡೆದಿಲ್ಲ. ಕುಲಪತಿ ಹಾಗೂ ಹಣಕಾಸು ಅಧಿಕಾರಿ ಮಾತ್ರ ಕಾಯಂ ಆಗಿದ್ದಾರೆ.

ಸದ್ಯ ವಾರ್ಷಿಕ ₹ 50 ಲಕ್ಷ ಅಭಿವೃದ್ಧಿ ಹಣ ಬರುತ್ತದೆ. ಹತ್ತು ಮಂದಿ ಹೊರಗುತ್ತಿಗೆ ನೌಕರರನ್ನೂ ಈಚೆಗೆ ಕೆಲಸದಿಂದ ತೆಗೆಯಲಾಗಿದೆ. ಕಳೆದ ಎಂಟು ತಿಂಗಳಿಂದ ತಾತ್ಕಾಲಿಕ ನೌಕರರು ಹಾಗೂ ಅತಿಥಿ ಉಪನ್ಯಾಸಕರಿಗೆ ವೇತನ ನೀಡಿಲ್ಲ.

'ನೌಕರರಿಗೆ ನೀಡಲು ಸರ್ಕಾರದಿಂದ ಇನ್ನೂ ಹಣ ಬಿಡುಗಡೆಯಾಗಿಲ್ಲ. ಸರ್ಕಾರದ ಅನುಮೋದನೆ ಇಲ್ಲದೆ ನೇಮಕಾತಿ ಆಗಿರುವುದರಿಂದ ವೇತನ ಮಂಜೂರಾಗಿಲ್ಲ. ಹಿಂದೆ ಆಡಳಿತ ನಡೆಸಿದವರು ಅಭಿವೃದ್ಧಿ ಅನುದಾನವನ್ನು ವೇತನಕ್ಕಾಗಿ ನಿಯಮಬಾಹಿರವಾಗಿ ಬಳಸಿದ್ದಾರೆ' ಎಂದು ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ ಹೇಳುತ್ತಾರೆ. ಸಂಗೀತದ ವಾತಾವರಣವೇ ಇಲ್ಲದೆ, ಈ ವಿಶ್ವವಿದ್ಯಾಲಯ ಸೊರಗುತ್ತಿದೆ.

'ಸಂಗೀತಮಯವಾಗಲಿ'

ಗಂಗೂಬಾಯಿ ಹಾನಗಲ್ ಅವರಂಥ ಶ್ರೇಷ್ಠರ ಹೆಸರನ್ನು ಸಂಗೀತ ವಿಶ್ವವಿದ್ಯಾಲಯಕ್ಕೆ ಇಟ್ಟಿದ್ದು, ಅದಕ್ಕೆ ತಕ್ಕಂತೆ ಗುಣಮಟ್ಟ ಕಾಯ್ದುಕೊಳ್ಳಬೇಕು. ವಿಶ್ವವಿದ್ಯಾಲಯ 'ಸಂಗೀತ'ಮಯವಾಗಿರಬೇಕು.

ಸ್ವಂತ ಕಟ್ಟಡ ನಿರ್ಮಿಸಿ ಕುಲಸಚಿವರು, ಎಂಜಿನಿಯರ್ ಹಾಗೂ ಕಾಯಂ ಬೋಧಕರನ್ನು ನೇಮಿಸಬೇಕು. ಸಿಂಡಿಕೇಟ್‌ನಲ್ಲಿ ಸಂಗೀತಗಾರರು ಹಾಗೂ ಸಂಗೀತ ತಿಳಿದವರನ್ನೇ ನೇಮಿಸಬೇಕು. ವರ್ಷದಲ್ಲಿ ನಾಲ್ಕು ಬಾರಿ ವಿದ್ವಾಂಸರಿಂದ ಕಾರ್ಯಾಗಾರ ನಡೆಸಬೇಕು. ವಾದ್ಯ ಪರಿಕರ ಹೆಚ್ಚಿಸಬೇಕು. ಸಂಗೀತಕ್ಕೆ ಸಂಬಂಧಿಸಿದಂತೆ ಸಿ.ಡಿ ಹಾಗೂ ಪುಸ್ತಕ ಸಂಗ್ರಹಾಲಯ ಸ್ಥಾಪಿಸಬೇಕು.

ಹೆಸರಾಂತ ಕಲಾವಿದರು, ಪರಿಣತರನ್ನು ಆಹ್ವಾನಿಸಿ ಸಂವಾದ ಕಾರ್ಯಕ್ರಮ ಆಯೋಜಿಸಬೇಕು. ರಾಜ್ಯ ಸರ್ಕಾರವೇ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಮುನ್ನಡೆಸಬೇಕು. ಉನ್ನತ ಶಿಕ್ಷಣ ಸಚಿವರು ಈ ವಿಚಾರದತ್ತ ಗಮನ ಹರಿಸಬೇಕು.



ಸಿ.ಆರ್.ಹಿಮಾಂಶು, ಸಂಗೀತ ವಿ.ವಿ ಸಿಂಡಿಕೇಟ್ ಮಾಜಿ ಸದಸ್ಯ, ಸಂಗೀತ ಪೋಷಕ, ಮೈಸೂರು

ರೋಗಗ್ರಸ್ತ ವಿ.ವಿಗೆ ಚಿಕಿತ್ಸೆ ಬೇಕಿದೆ!

ಶ್ರೇಷ್ಠ ಸಂಗೀತಗಾರರಿಗೆ ಜನ್ಮ ನೀಡಿದ ಸಾಂಸ್ಕೃತಿಕ ನಗರಿಯಲ್ಲೇ ಸಂಗೀತ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ಹಲವರು ಪಟ್ಟು ಹಿಡಿದಿದ್ದರ ಫಲವಾಗಿ ಇಲ್ಲಿ ವಿಶ್ವವಿದ್ಯಾಲಯ ತಲೆಯೆತ್ತಿತ್ತು. ದಕ್ಷಿಣ ಭಾರತದಲ್ಲಿ ಸಂಗೀತಕ್ಕೆ ಮೀಸಲಾಗಿರುವ ಪೂರ್ಣಪ್ರಮಾಣದ ಏಕೈಕ ವಿಶ್ವವಿದ್ಯಾಲಯವಿದು.

ವಿಶ್ವವಿದ್ಯಾಲಯವು ರೋಗಗ್ರಸ್ತ ಶಿಶುವಿನಂತಾಗಿದ್ದು, ಚಿಕಿತ್ಸೆ ಅಗತ್ಯವಿದೆ. ಆಡಳಿತ, ಪರೀಕ್ಷಾಂಗ ಕುಲಪತಿ ನೇಮಕವಾದರೆ ವ್ಯವಸ್ಥೆ ಸರಿ ಹೋಗಬಹುದು.

ವ್ಯವಸ್ಥೆ ಸರಿಯಿಲ್ಲವೆಂದು ಒಂದು ವಿಶ್ವವಿದ್ಯಾಲಯವನ್ನು ಮುಚ್ಚುವುದು ಸುಲಭ. ಆದರೆ, ಉಳಿಸಿ ಬೆಳೆಸಿಕೊಂಡು ಹೋಗುವುದು ಸವಾಲಿನ ವಿಷಯ.

ಕೃಪಾ ಫಡ್ಕೆ, ನೃತ್ಯ ಕಲಾವಿದೆ, ಮೈಸೂರು

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 26-12-1996

● ಸಿಪಿಪಿ ಅಧ್ಯಕ್ಷತೆ: ಪವಾರ್, ಪೈಲಟ್ ಸ್ಪರ್ಧೆ ತಪ್ಪಿಸಲು ಕೇಸರಿ ರಾಜಿಸೂತ್ರ

ನವದೆಹಲಿ, ಡಿ–25: ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರನ್ನು ಸರ್ವಸಮ್ಮತ ಅಭ್ಯರ್ಥಿಯಾಗಿಸಿ, ಶರದ್ ಪವಾರ್ ಹಾಗೂ ಮನಮೋಹನ ಸಿಂಗ್ ಅವರನ್ನು ಸಂಸತ್ತಿನ ಉಭಯ ಸದನಗಳಲ್ಲಿ ನಾಯಕರನ್ನಾಗಿ ಮಾಡುವ ರಾಜಿಸೂತ್ರವೊಂದು ಕಾಂಗ್ರೆಸ್ ವಲಯದಲ್ಲಿ ಸಿದ್ಧವಾಗಿದ್ದು, ನಾಯಕತ್ವಕ್ಕೆ ನಡೆಯುವ ಸ್ಪರ್ಧೆಯನ್ನು ತಪ್ಪಿಸಲು ತೀವ್ರ ಯತ್ನ ಸಾಗಿದೆ.

'ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕತ್ವಕ್ಕೆ ಚುನಾವಣೆ ನಡೆಯಬೇಕು ಎಂದು ಪಟ್ಟು ಹಿಡಿದಿರುವ ಶರದ್ ಪವಾರ್ ಮತ್ತು ರಾಜೇಶ್ ಪೈಲಟ್ ಅವರಿಗೆ ಪ್ರಮುಖ ಸ್ಥಾನಗಳನ್ನು ನೀಡಲು ಕೇಸರಿ ಅವರ ಬೆಂಬಲಿಗರಿಂದ ಯಾವುದೇ ವಿರೋಧ ಇಲ್ಲ. ರಾಜಿ ಸೂತ್ರಕ್ಕೆ ಎಲ್ಲರ ಒಪ್ಪಿಗೆಯಿದೆ' ಎಂದು ಕಾಂಗ್ರೆಸ್ ಪಕ್ಷದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

● ಗಡಿ ಕನ್ನಡಿಗರ ಸಮಸ್ಯೆಗೆ ಸಮಿತಿ: ಭರವಸೆ

ಬೆಂಗಳೂರು, ಡಿ.25: ಗಡಿ ಪ್ರದೇಶದ ಕನ್ನಡಿಗರ ಸಮಸ್ಯೆಗಳನ್ನು ಅರಿಯಲು ತಜ್ಞರ ಸಮಿತಿಯೊಂದನ್ನು ರಚಿಸುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಭರವಸೆ ನೀಡಿದ್ದಾರೆ ಎಂದು ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷ ಎಂ.ಚಿದಾನಂದಮೂರ್ತಿ ಅವರು ಇಂದು ಇಲ್ಲಿ ತಿಳಿಸಿದರು.

ದಿನ ಭವಿಷ್ಯ

ಭಾನುವಾರ ಡಿಸೆಂಬರ್ 26, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ), ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮೂಲ ಸಪ್ತಮೀ ಗಂ. 21-26 (ಹ. 3-20), ಭಾನುವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 46-36 (ರಾ. 1-24) ಆಯುಃನಾಮ, ಯೋಗ ಗಂ. 1-57 ಉಪರಿ ಸೌಭಾಗ್ಯ ನಾಮ ಯೋಗ ಗಂ. 55-13 ಬವ ಕರಣ ಗಂ. 21-26, ವಿಷ ಗಂ. 4-28 ಅಮೃತ ಗಂ. 28-14 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30: ಸೂರ್ಯೋದಯ: 6-42 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 7.

ಮೇಷ: ವಂಚಕರ ಬಲೆಗೆ ಬಿದ್ದು ತೊಳಲಾಡುವ ಸಾಧ್ಯತೆ. ಮುಖ್ಯವಾಗಿ ಹಣಕಾಸಿನ ವಿಚಾರದಲ್ಲಿ ತುಂಬಾ ಎಚ್ಚರಿಕೆ ಅಗತ್ಯವಿದೆ. ಆಹಾರ–ವಿಹಾರಗಳಲ್ಲಿ ಸ್ವಲ್ಪಮಟ್ಟಿನ ಎಚ್ಚರಿಕೆ ವಹಿಸಿ. ಮಾನಸಿಕ ಶಾಂತಿಗಾಗಿ ಅಧ್ಯಾತ್ಮದೆಡೆಗೆ ಗಮನ.

ವೃಷಭ: ನಿಮ್ಮ ಯೋಜನೆಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಂತೆ ಭಾಸ. ಮಕ್ಕಳ ಪ್ರತಿಭೆಯನ್ನು ಕಂಡು ಹರ್ಷ. ಕುಟುಂಬ ಸಮೇತರಾಗಿ ಪುಣ್ಯಕ್ಷೇತ್ರಗಳ ದರ್ಶನ ಮಾಡುವ ಸಾಧ್ಯತೆ.

ಮಿಥುನ: ವೃಥಾ ಮೊಂಡುವಾದ ಇತ್ಯಾದಿಗಳಿಗೆ ಸಿಲುಕಿ ಸಂಕಷ್ಟ ಅನುಭವಿಸುವ ಸಾಧ್ಯತೆ. ಎಚ್ಚರಿಕೆಯಿಂದ ವ್ಯವಹರಿಸುವುದು ಉತ್ತಮ. ವಿಪರೀತ ತಲೆನೋವು ಕಾಣಿಸಿಕೊಳ್ಳಬಹುದು. ದೇವತಾರಾಧನೆಯಲ್ಲಿ ತೊಡಗಿಕೊಳ್ಳುವ ಸಾಧ್ಯತೆ.

ಕರ್ಕಾಟಕ: ಒಟ್ಟಾರೆ ಸಂತಸದ ದಿನವಾಗಲಿದೆ. ಬಹುದಿನಗಳ ನಂತರ ಕುಟುಂಬದ ಸದಸ್ಯರೊಂದಿಗೆ ಕಾಲ ಕಳೆಯಲಿದ್ದೀರಿ. ಕೃಷಿಕ ಬಾಂಧವರಿಗೆ ಉತ್ತಮ. ಫಲಿತಾಂಶದ ನಿರೀಕ್ಷೆ. ಸಂಶೋಧನಾನಿರತರಿಗೆ ಉತ್ತಮ ಫಲಿತಾಂಶ.

ಸಿಂಹ: ವ್ಯಾಪಾರ–ವ್ಯವಹಾರಗಳಲ್ಲಿ ತೊಡಗಿರುವವರಿಗೆ ಸಾಮಾನ್ಯ ದಿನವಾಗುವುದು. ಮಹಿಳೆಯರಿಗೆ ಬಿಡುವಿನ ನಡುವೆ ಚಿಂತೆಗಳು ತಲೆದೋರುವ ಸಾಧ್ಯತೆ.

ಕನ್ಯಾ: ಸಂಗೀತಗಾರರೇ ಮುಂತಾದ ಕಲಾವಿದರಿಗೆ ಉತ್ತಮ ಅವಕಾಶದ ದಿನವಾಗಲಿದೆ. ಮಹಿಳೆಯರಿಗೆ ಹೊಸದೊಂದು ಸಾಧನೆಯ ನೆಮ್ಮದಿ ದೊರಕಲಿದೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಪ್ರಶಂಸೆ.

ತುಲಾ: ನಿಮ್ಮ ಪ್ರಯೋಗಶೀಲ ಮನೋಭಾವಕ್ಕೆ ಇಂಬು ದೊರಕಲಿದೆ. ಕೆಲಸ ಕಾರ್ಯಗಳಲ್ಲಿ ವಿಶೇಷ ಕಾಳಜಿ ಅಗತ್ಯ. ಪ್ರವಾಸದ ಬಗ್ಗೆ ಚಿಂತನೆ. ಆಹಾರ ವ್ಯತ್ಯಯದಿಂದ ಸ್ವಲ್ಪಮಟ್ಟಿನ ಅನಾರೋಗ್ಯ ಬಾಧೆ.

ವೃಶ್ಚಿಕ: ಇಂದಿನ ನಿಮ್ಮ ಉತ್ತಮ ಆಲೋಚನೆಗಳು ಮುಂದೆ ಉತ್ತಮ ಫಲ ನೀಡಲಿವೆ. ಸಲ್ಲದ ಮಾರ್ಗದ ಆದಾಯದಿಂದ ವಿಪತ್ತನ್ನು ಎದುರಿಸಬೇಕಾದೀತು. ಪತ್ರಿಕೋದ್ಯಮದಲ್ಲಿ ತೊಡಗಿದವರಿಗೆ ಉತ್ತಮ ಅವಕಾಶ.

ಧನು: ಕಟ್ಟಡ ಕಾಮಗಾರಿಗಳಿಗೆ ಕೂಲಿಗಳ ಸಮಸ್ಯೆಯಿಂದ ಸ್ಥಗಿತಗೊಳ್ಳುವ ಸಾಧ್ಯತೆ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ನೆಮ್ಮದಿಯ ದಿನ. ಸಾಧಕರಿಗೆ ಸಾಧನೆಯ ಸೋಪಾನಗಳು ಗೋಚರವಾಗುತ್ತವೆ.

ಮಕರ: ಸಂಶೋಧನಾನಿರತರಿಗೆ ಎಲ್ಲಿಲ್ಲದ ಉತ್ಸಾಹ, ಯಶಸ್ಸಿನ ನಿರೀಕ್ಷೆ. ಅತಿಯಾದ ಕಾರ್ಯಬಾಹುಳ್ಯದಿಂದ ಸಂಸಾರದಲ್ಲಿ ಕಿರಿಕಿರಿ ಅನುಭವಿಸಬೇಕಾದೀತು. ರಕ್ಷಣಾ ಕಾರ್ಯದಲ್ಲಿರುವವರಿಗೆ ತುರುಸು ಕಾರ್ಯ ಎದುರಾಗಲಿದೆ.

ಕುಂಭ: ನೆರೆಹೊರೆಯವರಲ್ಲಿ ವೃಥಾ ವೈಮನಸ್ಸು ಉಂಟಾಗುವ ಸಾಧ್ಯತೆ ಇದ್ದು ಜಾಗೃತರಾಗಿ ವ್ಯವಹರಿಸುವುದು ಉತ್ತಮ. ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಉತ್ತಮ ಕಾರ್ಯಗಳಲ್ಲಿ ತೊಡಗುವ ಸಾಧ್ಯತೆ.

ಮೀನ: ರಾಜಕಾರಣಿಗಳು, ಸಮಾಜದ ಧುರೀಣರು ಸ್ವಲ್ಪಮಟ್ಟಿನ ಅವಮಾನಕರ ಅಪವಾದವನ್ನು ಎದುರಿಸಬೇಕಾದೀತು. ನೆರೆಹೊರೆಯವರೊಂದಿಗಿನ ಬಾಂಧವ್ಯದಲ್ಲಿ ಬಿರುಕು ಕಾಣಿಸಿಕೊಳ್ಳುವ ಸಾಧ್ಯತೆ.

ನಿಮ್ಮ ಜನ್ಮದಿನ 26-ಡಿಸೆಂಬರ್ **ನಿಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವದಿಂದಾಗಿ ಬಹುಆಕರ್ಷಕ ವ್ಯಕ್ತಿಯಾಗಿ ಕಂಡುಬರುವಿರಿ. ಉತ್ತಮ ಮಾತುಗಾರಿಕೆಯಿಂದ ಇತರರನ್ನು ಸೂಜಿಗಲ್ಲಿನಂತೆ ಸೆಳೆಯುವ ನೀವು ಸಮಾಜವನ್ನು ಮುನ್ನಡೆಸುವ ಸಾಧ್ಯತೆ ಕಂಡುಬರುತ್ತಿದೆ. ನಿಮ್ಮ ನಡವಳಿಕೆಗೂ, ನಿಮ್ಮ ನಿಜ ವ್ಯಕ್ತಿತ್ವಕ್ಕೂ ಅಜಗಜಾಂತರ ವ್ಯತ್ಯಾಸವನ್ನು ಕಾಣಬಹುದು.**

ಪದಬಂಧ 4819

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಜಯವಿದ್ದರೂ ಇದು ಸೋಲು! (4)
3. ಹೊಡೆ ಅಥವಾ ಕುಟ್ಟು (3)
5.ಈತ ಲಗ್ನವಾಗುತ್ತಿರುವವ (4)
7.ಪ್ರತಿನಿಧಿ ಇಲ್ಲಿದ್ದಾನೆ (3)
8.ನೆಲೆಗೊಳಿಸುವುದು (5)
11.ಅನುಮೋದನೆ ಅಥವಾ ಒಪ್ಪಿಗೆ(3)
12.ಈತ ಹಂಚಿಕೆದಾರ (4)
14.ನಕಾಸೆ ಮಾಡಿದ ಆಭರಣ(3)
15.ಲೆಕ್ಕ ಬರೆಯುವವನು ಇಲ್ಲಿದ್ದಾನೆ (4)
13.ಆಸಕ್ತನಾದವನು ತರದೊಳಗಿದ್ದಾನೆ (3)

ಮೇಲಿಂದ ಕೆಳಕ್ಕೆ

1.ರಾಜನ ಗೃಹವಿದು (4)
2.ಮನುಷ್ಯನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (3)
4.ಜೋಪಡಿ ಇಲ್ಲಿ ಕಾಣುತ್ತಿದೆ (3)
6.ಈಕೆ ಪತಿವ್ರತೆ (3)
7.ರೂಢಿಯನ್ನು ಹೀಗೆನ್ನಿ (3)
8.ಗತಿಯಲ್ಲಿ ಕೊನೆಗೊಂಡಿರುವ ಏಳಿಗೆ (3)
9.ಪದ ಹೇಳಿ ಪಡೆದಿರುವ ಡಿಗ್ರಿ (3)
10.ಇದು ಕಳಂಕವಿಲ್ಲದ್ದು (4)
11.ಸರಕ್ಕನೆ ತಂದಿರುವ ಸಾಮಾನು (3)



4818ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಪ್ಪ 4.ಪದರ 5.ಯವನಿಕೆ 6.ತಾರಾಪುಂಜ 7.ನವ 9.ನಗ 13.ವಾತಾಯನ 14.ಮಧುಮಾಸ 15.ಚುಂಬನ

ಮೇಲಿಂದ ಕೆಳಕ್ಕೆ:
1.ತಾಪತ್ರಯ 2.ಕರತಾಡನ 3.ವನಿತೆ 5.ಯಜಮಾನ 8.ವನವಾಸ 10.ಗಗನಚುಂಬಿ 11.ನವನಟ 12.ಮಧುರ

ಸುಡೊಕು 5205

		7		6				2
	8		5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5204 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ:
ಸಂಜೆ 4 : ವೈದ್ಯಮಿತ್ರ
ಬೆಳಿಗ್ಗೆ 7 : ವಚನವಾಣಿ,
ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ,
ಬೆಳಿಗ್ಗೆ 9.30: ಕಥಾಸಾಗರ
Prajavani.net
Prajavani Prajavani

ಜನವರಿ ಮೊದಲ ವಾರದವರೆಗೆ ಭರ್ತಿಯಾಗಿರುವ ಹೋಟೆಲ್, ರೆಸಾರ್ಟ್, ಹೋಂ ಸ್ಟೇಗಳು

ಹೊಸವರ್ಷ ಸಂಭ್ರಮ: ಹೊರಜಿಲ್ಲೆಗೆ ದೌಡು

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ವರ್ಷಾಂತ್ಯವನ್ನು ಸಂಭ್ರಮದಿಂದ ಕಳೆಯಲು ಬೆಂಗಳೂರಿನ ಜನ ಬೇರೆ ಜಿಲ್ಲೆಗಳ ಪ್ರವಾಸಿ ತಾಣಗಳತ್ತ ಮುಖ ಮಾಡಿದ್ದಾರೆ. ಡಿ.25ರ ಕ್ರಿಸ್‌ಮಸ್‌ನಿಂದ 2022ರ ಜನವರಿ ಮೊದಲ ವಾರದ ಅವಧಿಗೆ ಈ ಜಿಲ್ಲೆಗಳಲ್ಲಿನ ಬಹುತೇಕ ರೆಸಾರ್ಟ್‌ಗಳು, ಹೋಟೆಲ್ ಹಾಗೂ ಹೋಂ ಸ್ಟೇಗಳು ಈಗಾಗಲೇ ಭರ್ತಿಯಾಗಿವೆ.

ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಮೈಸೂರು ಸೇರಿದಂತೆ ಪ್ರಮುಖ ಪ್ರವಾಸಿ ತಾಣಗಳಿಗೆ ಬೆಂಗಳೂರಿಗರು ತೆರಳುತ್ತಿದ್ದಾರೆ. ಪ್ರವಾಸಿಗರ ಸಂಖ್ಯೆ ಏರಿಕೆ ಕಾರಣ ಹೋಟೆಲ್, ರೆಸಾರ್ಟ್‌ಗಳಲ್ಲಿ ದರಗಳು ತುಸು ಏರಿಕೆಯಾಗಿವೆ ವಸತಿ ಗೃಹಗಳನ್ನು ಮುಂಗಡವಾಗಿ ಕಾಯ್ದಿರಿಸಲು ಕರೆ ಮಾಡುತ್ತಿರುವ ಪ್ರವಾಸಿಗರಿಗೆ, 'ಈ ವಾರ ಲಭ್ಯವಿಲ್ಲ. ಜನವರಿ ಮೊದಲ ವಾರದ ನಂತರ ಬನ್ನಿ' ಎಂಬ ರೆಸಾರ್ಟ್ ಮಾಲೀಕರ ಉತ್ತರ ನಿರಾಸೆ ಉಂಟುಮಾಡುತ್ತಿದೆ.

'ಪ್ರವಾಸಿಗರು ವರ್ಷಾಂತ್ಯಕ್ಕೆ ರೆಸಾರ್ಟ್‌ಗೆ ಬರಲು ನವೆಂಬರ್‌ನಲ್ಲೇ ಮುಂಗಡ ಕಾಯ್ದಿರಿಸಿದ್ದಾರೆ. ಈ ಪೈಕಿ ಬೆಂಗಳೂರಿನವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪ್ರವಾಸಿಗರು ನಿನ್ನೆಯಿಂದಲೇ ಬಂದು ತಂಗುತ್ತಿದ್ದಾರೆ' ಎಂದು ಸಕಲೇಶಪುರ ಬಳಿ ಇರುವ ರೆಸಾರ್ಟ್‌ವೊಂದರ ಸಿಬ್ಬಂದಿ ಹೇಳಿದರು.

'ಕ್ರಿಸ್‌ಮಸ್, ಹೊಸವರ್ಷದ ಸಂಭ್ರಮದ ಜೊತೆಗೆ ಚಳಿಗಾಲದ ವಾತಾವರಣ ಆನಂದಿಸಲು ಡಿಸೆಂಬರ್ ಕೊನೆಯ ವಾರದಲ್ಲಿ ಹೆಚ್ಚಾಗಿ ಪ್ರವಾಸ ಕೈಗೊಳ್ಳುತ್ತಾರೆ. ಡಿ.30 ಹಾಗೂ 31ಕ್ಕೆ ರೆಸಾರ್ಟ್‌ನಲ್ಲಿ ತಂಗಲು ಬೆಂಗಳೂರಿನವರು ಕರೆಗಳನ್ನು ಮಾಡುತ್ತಲೇ ಇದ್ದಾರೆ. ಕಾಯ್ದಿರಿಸಿದವರಿಗಷ್ಟೇ ಉಳಿದುಕೊಳ್ಳಲು ಅವಕಾಶ ನೀಡಲಾಗುತ್ತಿದೆ' ಎಂದರು.

'ಡಿಸೆಂಬರ್ ಮೊದಲ ವಾರದಿಂದಲೇ ಪ್ರವಾಸಿಗರು ಕೊಡಗಿನಲ್ಲಿ ಬೀಡುಬಿಟ್ಟಿದ್ದಾರೆ. ಜನವರಿ 2ರವರೆಗೆ ಇಲ್ಲಿರುವ ಬಹುತೇಕ ಹೋಂ ಸ್ಟೇಗಳು ಭರ್ತಿಯಾಗಿವೆ' ಎಂದು ಕೂರ್ಗ್ ಹೋಂ ಸ್ಟೇ ಅಸೋಸಿಯೇಷನ್‌ನ (ಕೆಎಚ್‌ಎಸ್‌ಎ) ಡಿಜಿಟಲ್ ಮಾರ್ಕೆಟಿಂಗ್ ವಿಭಾಗದ ನವೀನ್ ಪೂಣಚ್ಚ ಮಾಹಿತಿ ನೀಡಿದರು.

'ಸಂಘದ ವ್ಯಾಪ್ತಿಯಲ್ಲಿರುವ 188 ಹೋಂ ಸ್ಟೇಗಳೂ ಭರ್ತಿಯಾಗಿವೆ. ಒಂದು ತಿಂಗಳ ಹಿಂದೆಯೇ ಆನ್‌ಲೈನ್ ಮೂಲಕ ಕಾಯ್ದಿರಿಸಿದ್ದಾರೆ. ಇದರಲ್ಲಿ ಬೆಂಗಳೂರಿನವರೇ ಹೆಚ್ಚು' ಎಂದು ತಿಳಿಸಿದರು.

ವಸತಿಗೃಹ ವಾಸ್ತವ್ಯ ದರ ಏರಿಕೆ ಇಲ್ಲ

ಚಂದ್ರಶೇಖರ್ ಹೆಬ್ಬಾರ್

'ವರ್ಷದ ಬೇರೆ ಅವಧಿಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಪ್ರವಾಸ ಕೈಗೊಳ್ಳುವುದು ಅಧಿಕ. ಹೊಸವರ್ಷ ಸಂಭ್ರಮಿಸಲು ಜನ ಬೆಂಗಳೂರು ಬಿಟ್ಟು ಹೊರಬರುತ್ತಾರೆ. ಮಂತ್ರಾಲಯ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಸೇರಿದಂತೆ ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಲ್ಲಿನ ರೆಸಾರ್ಟ್ ಹಾಗೂ ಹೋಂ ಸ್ಟೇಗಳು ಭರ್ತಿಯಾಗಿವೆ. ಕೆಲವು ರೆಸಾರ್ಟ್‌ಗಳಲ್ಲಿ ಮಾಲೀಕರು ವಿಶೇಷ ರಿಯಾಯಿತಿ ನೀಡುತ್ತಿದ್ದಾರೆ. ಆದರೆ, ದರ ಏರಿಕೆ ಮಾಡಿಲ್ಲ' ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ತಿಳಿಸಿದರು.

ಕೆಮ್ಮಣ್ಣುಗುಂಡಿ ಜ.6ರವರೆಗೆ ಭರ್ತಿ

'ಇತ್ತೀಚಿನ ವರ್ಷಗಳಲ್ಲಿ ನಂದಿ ಬೆಟ್ಟದಲ್ಲಿ ಹೊಸ ವರ್ಷಾಚರಣೆಗೆ ಅವಕಾಶ ನೀಡಲಾಗುತ್ತಿಲ್ಲ. ಚಿಕ್ಕಬಳ್ಳಾಪುರ ಜಿಲ್ಲಾಡಳಿತವೇ ಈ ಕ್ರಮ ಕೈಗೊಂಡಿದ್ದು, ಈ ಬಾರಿಯೂ ಪ್ರವೇಶ ನಿರ್ಬಂಧಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿಯಲ್ಲಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿರುವ 19 ವಸತಿಗೃಹಗಳೂ ಜನವರಿ 6ರವರೆಗೆ ಭರ್ತಿಯಾಗಿವೆ' ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಎಂ.ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಡಿ.ಕೆ.ಶಿವಕುಮಾರ್ 'ಏಕಾಂಗಿ' ಸಭೆ ಸಿದ್ದರಾಮಯ್ಯ ಆಪ್ತರ ಅಸಮಾಧಾನ?

ಶಿವಕುಮಾರ್

ಪಾದಯಾತ್ರೆ ಮಾಡಿ ಸಿಎಂ ಆಗಬಹುದು ಎಂದು ಡಿಕೆಶಿ ಅಂದುಕೊಂಡಿದ್ದರೆ ಅದು ಬರೀ ಕನಸು. ಪಾದಯಾತ್ರೆಯ ಮೂಲಕ ಜನಬೆಂಬಲ ಗಿಟ್ಟಿಸಬಹುದು ಎಂಬುದು ಮೂರ್ಖತನ

ಎಸ್.ಟಿ.ಸೋಮಶೇಖರ್, ಸಚಿವ

ಬೆಂಗಳೂರು: ಮೇಕೆದಾಟು ಯೋಜನೆ ತ್ವರಿತಗೊಳಿಸಲು ಆಗ್ರಹಿಸಿ ಜ. 9ರಿಂದ 10 ದಿನ ಹಮ್ಮಿಕೊಳ್ಳಲಿರುವ ಪಾದಯಾತ್ರೆಯ ಭಾಗವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜಿಲ್ಲಾಮಟ್ಟದಲ್ಲಿ ಪಕ್ಷದ ಸ್ಥಳೀಯ ನಾಯಕರ ಜೊತೆ ಏಕಾಂಗಿಯಾಗಿ ಪೂರ್ವಭಾವಿ ಸಭೆ ನಡೆಸುತ್ತಿರುವುದು ರಾಜ್ಯ ಕಾಂಗ್ರೆಸ್‌ನಲ್ಲಿ ಚರ್ಚೆಗೆ ಗ್ರಾಸವಾಗಿದೆ.

'ಡಿ.ಕೆ.ಶಿವಕುಮಾರ್ ಅವರ ನಡೆ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಆಪ್ತ ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ. ಕೆಲವರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ದೂರು ನೀಡಿದ್ದಾರೆ. ಎಲ್ಲ ನಾಯಕರನ್ನು ಜೊತೆಯಾಗಿ ಕರೆದೊಯ್ಯುವಂತೆ ಸೂಚಿಸಬೇಕು ಎಂದು ಸಲಹೆ ನೀಡಿದ್ದಾರೆ' ಎಂದು ಹೇಳಲಾಗಿದೆ.

ಬೆಳಗಾವಿಯಲ್ಲಿ ನಡೆದ ವಿಧಾನಸಭೆ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸದೆ ಪಕ್ಷದ ನಾಯಕರ ಜೊತೆ ಸಭೆ ನಡೆಸಲು ಶಿವಕುಮಾರ್ ತೆರಳಿರುವುದಕ್ಕೂ ಕೆಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಧಿವೇಶನದ ಮಧ್ಯೆ (ಡಿ. 23) ಮೈಸೂರು– ಚಾಮರಾಜನಗರ ಭಾಗದ ನಾಯಕರ ಜೊತೆ ಸಭೆ ನಡೆಸಲು ಶಿವಕುಮಾರ್ ಮುಂದಾಗಿದ್ದ ಬಗ್ಗೆ ಸಿದ್ದರಾಮಯ್ಯ ನೇರವಾಗಿಯೇ ಬೇಸರ ವ್ಯಕ್ತಪಡಿಸಿದ್ದರು. 'ನಾನಿಲ್ಲದೆ ಮೈಸೂರು ಭಾಗದ ಸಭೆ ನಡೆಸಬೇಡಿ' ಎಂದು ಸೂಚಿಸಿದ್ದರು. 'ಜೊತೆಯಲ್ಲಿ ತೆರಳಿ ಸಭೆ ನಡೆಸದಿದ್ದರೆ ತಪ್ಪು ಸಂದೇಶ ರವಾನೆಯಾಗಲಿದೆ' ಎಂದೂ ಖಾರವಾಗಿಯೇ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

'ಡಾ.ಶಿಮೂಶ ಪ್ರಶಸ್ತಿ'ಗೆ ಮಲ್ಲಿಕಾ ಘಂಟಿ ಆಯ್ಕೆ

ಹಾವೇರಿ: ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ ಅವರು ಹಾವೇರಿ ಹೊಸಮಠದ 'ಡಾ. ಶಿಮೂಶ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

'ಡಿ.27ರಂದು ಸಂಜೆ 6ಕ್ಕೆ ಹೊಸಮಠದಲ್ಲಿ ನಡೆಯುವ ಶರಣ ಸಂಸ್ಕೃತಿ ಉತ್ಸವದಲ್ಲಿ ಚಿತ್ರದುರ್ಗದ ಬೃಹನ್ಮಠದ ಮುರುಘರಾಜೇಂದ್ರ ಸ್ವಾಮೀಜಿ, ಶೂನ್ಯಪೀಠದ ಅಧ್ಯಕ್ಷ ಡಾ.ಶಿವಮೂರ್ತಿ ಮುರುಘಾ ಶರಣರು ಪ್ರಶಸ್ತಿ ಪ್ರದಾನ ಮಾಡುವರು' ಎಂದು ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪ್ರಶಸ್ತಿಯು ₹ 50 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. 10 ಜನ ಸಾಧಕರಿಗೆ ಈ ಹಿಂದೆ ಪ್ರಶಸ್ತಿ ನೀಡಲಾಗಿದೆ. ಮೊದಲ ಬಾರಿಗೆ ಮಹಿಳಾ ಸಾಧಕಿಗೆ ನೀಡಲಾಗುತ್ತಿದೆ.' ಎಂದು ತಿಳಿಸಿದರು.

ಮುರುಘಾ ಶರಣರು, ಪುನೀತ್‌ಗೆ ಡಾ.ಎಚ್.ಎನ್ ಪ್ರಶಸ್ತಿ

ಮುರುಘಾ ಶರಣರು



ಪುನೀತ್

ದಾವಣಗೆರೆ: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ನೀಡುವ 'ಡಾ. ಎಚ್.ನರಸಿಂಹಯ್ಯ ಪ್ರಶಸ್ತಿ'ಗೆ ಈ ಸಾಲಿಗೆ ಚಿತ್ರದುರ್ಗದ ಮುರುಘಾಮಠದ ಡಾ.ಶಿವಮೂರ್ತಿ ಮುರುಘಾ ಶರಣರು ಹಾಗೂ ಚಿತ್ರನಟ ಪುನೀತ್ ರಾಜ್‌ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಮುರುಘಾ ಶರಣರ ವೈಚಾರಿಕ, ವೈಜ್ಞಾನಿಕ ಚಿಂತನೆ, ಜಾತಿ ನಿರ್ಮೂಲನೆಗೆ ಶ್ರಮಿಸುತ್ತಿರುವುದು ಹಾಗೂ ಪುನೀತ್ ಅವರ ಸಮಾಜಮುಖಿ ಕೆಲಸಗಳನ್ನು ಗುರುತಿಸಿ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಫಲಕ, ಸ್ಮರಣಿಕೆ ಹೊಂದಿದೆ.

'ಡಿ.29ರಂದು ಶಿವಮೊಗ್ಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡುವರು. ಚಿತ್ರ ನಟ ದೊಡ್ಡಣ್ಣ ಸೇರಿ 7 ಮಂದಿಗೆ ರಾಜ್ಯ ಮಟ್ಟದ ಸಾಧನಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು' ಎಂದು ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಡಾ. ಹುಲಿಕಲ್ ನಟರಾಜ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕ್ರಿಸ್‌ಮಸ್ ಬೆಂಗಳೂರಿನ ಶಿವಾಜಿನಗರದ ಬೆಸಿಲಿಕಾ ಚರ್ಚ್‌ನಲ್ಲಿ ಕ್ರಿಸ್‌ಮಸ್ ಅಂಗವಾಗಿ ಶನಿವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಹೊರ ಬಂದ ಭಕ್ತರು ಚರ್ಚ್‌ನ ಹೊರಗಡೆ ನಿಲ್ಲಿಸಿದ್ದ ಸಾಂಟಾ ಕ್ಲಾಸ್ ಬೊಂಬೆಗಳ ಬಳಿ ನಿಂತು ಛಾಯಾಚಿತ್ರ ತೆಗೆಸಿಕೊಂಡರು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಚಿತ್ರೋದ್ಯಮ: ನೈತಿಕ ಬೆಂಬಲ ಮಾತ್ರ

31ರ ಕರ್ನಾಟಕ ಬಂದ್ ಕರೆ: ಏನೂ ಪ್ರಯೋಜನವಿಲ್ಲ – ಎಚ್‌ಡಿ ಕುಮಾರಸ್ವಾಮಿ

ಬೆಂಗಳೂರು: 'ಬಲವಂತದ ಬಂದ್‌ಗೆ ನಮ್ಮ ವಿರೋಧವಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹೇಳಿದೆ.

ಬಂದ್ ಕರೆಗೆ ಸಂಬಂಧಿಸಿದಂತೆ ಮಂಡಳಿಯ ಉಪಾಧ್ಯಕ್ಷ ಉಮೇಶ್ ಬಣಕಾರ್, 'ಹೋರಾಟಗಾರರಿಗೆ ನೈತಿಕ ಬೆಂಬಲ ಇದೆ. ಆದರೆ, ಆ ದಿನ ಚಿತ್ರೋದ್ಯಮದ ಚಟುವಟಿಕೆಗಳು ಸ್ಥಗಿತಗೊಳ್ಳುವುದಿಲ್ಲ. ಬಲವಂತದ ಬಂದ್ ಸರಿಯಲ್ಲ' ಎಂದು ಸ್ಪಷ್ಟಪಡಿಸಿದರು.

'ಎಂಇಎಸ್ ಪುಂಡಾಟ ನಿಯಂತ್ರಣ, ಕನ್ನಡದ ಧ್ವಜ ಸುಟ್ಟವರ, ಮಹನೀಯರ ಪುತ್ಥಳಿಗೆ ಅವಮಾನಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯಿಸಿ ಡಿ.31ರಂದು ಮಂಡಳಿ ವತಿಯಿಂದ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು' ಎಂದು ಹೇಳಿದರು.

'ಬಂದ್ ಸಂಬಂಧಿಸಿದಂತೆ ಕರ್ನಾಟಕ ಚಲನ ಚಿತ್ರ ವಾಣಿಜ್ಯ ಮಂಡಳಿ ಏನು ನಿರ್ಧಾರ ತೆಗೆದುಕೊಳ್ಳುತ್ತದೋ ಆ ನಿರ್ಧಾರಕ್ಕೆ ಬದ್ಧ' ಎಂದು ನಟ ಶಿವರಾಜ್ ಕುಮಾರ್ ಹೇಳಿದರು.

ಶಿವರಾಜ್

'ನಾಡು, ನುಡಿ ಸಂಬಂಧಿಸಿದ ವಿಚಾರಕ್ಕೆ ನಾನು ಬದ್ಧನಿದ್ದೇನೆ. ಆದರೆ, ಈಗ ಸಮಸ್ಯೆಯನ್ನು ಬುದ್ಧಿವಂತಿಕೆಯಿಂದ ನಿರ್ವಹಿಸಬೇಕು. ಅದಕ್ಕೆ ಸಂಬಂಧಪಟ್ಟವರು (ರಾಜ್ಯ ಸರ್ಕಾರ) ನಿರ್ಧಾರ ತೆಗೆದುಕೊಂಡಿದ್ದಾರೆ. ಅದು ಸಂತಸ ತಂದಿದೆ' ಎಂದರು.

'ಬಂದ್ ಕರೆ ನೀಡಿದ ದಿನ ಕನ್ನಡದ ಮೂರು ಚಿತ್ರಗಳು ಬಿಡುಗಡೆಯಾಗುತ್ತಿವೆ. ಹೀಗೆ ಬಂದ್ ಮಾಡಿದರೆ ಕನ್ನಡಕ್ಕೆ ದ್ರೋಹ ಬಗೆದಂತಾಗುತ್ತದೆಯಲ್ಲವೇ' ಎಂದರು.

'ಬಂದ್ ಬೇಡ. ಸರ್ಕಾರ ಕ್ರಮ ಕೈಗೊಳ್ಳಲಿ'

ರಾಮನಗರ: 'ಎಲ್ಲದಕ್ಕೂ ಕರ್ನಾಟಕ ಬಂದ್ ಮಾಡುವುದರಿಂದ ಪ್ರಯೋಜನ ಇಲ್ಲ. ಬದಲಿಗೆ ಎಂಇಎಸ್ ಸೇರಿದಂತೆ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶನಿವಾರ ಹೇಳಿದರು.

ಚನ್ನಪಟ್ಟಣದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಬಂದ್‌ನಿಂದ ಮಹಾರಾಷ್ಟ್ರಕ್ಕೆ ತೊಂದರೆ ಇಲ್ಲ. ಆದರೆ, ಇಲ್ಲಿನ ವ್ಯಾಪಾರಿಗಳು, ಕಾರ್ಮಿಕರಿಗೆ ತೊಂದರೆ ಆಗಲಿದೆ. ಇದನ್ನು ಕರೆ ನೀಡಿದವರು ಯೋಚಿಸಬೇಕು' ಎಂದರು.

31ರ ಬಂದ್ ವಾಪಸಿಗೆ ಆಗ್ರಹ

ಬೆಂಗಳೂರು: 'ಕನ್ನಡಪರ ಸಂಘಟನೆಗಳು ಕರೆ ನೀಡಿರುವ ಡಿ. 31ರ ಬಂದ್ ಹಿಂತೆಗೆದುಕೊಳ್ಳಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶನಿವಾರ ಮನವಿ ಮಾಡಿದರು.

'ರಾಜ್ಯದ ನೆಲ, ಜಲ, ನುಡಿಯ ವಿಚಾರಗಳಲ್ಲಿ ರಾಜಿಯ ಪ್ರಶ್ನೆಯೇ ಇಲ್ಲ. ಕನ್ನಡಪರ ಸಂಘಟನೆಗಳ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಲಿದೆ. ಕನ್ನಡಪರ ಸಂಘಟನೆಗಳ ಜತೆ ಮಾತುಕತೆಗೆ ಸರ್ಕಾರ ಸಿದ್ಧವಿದೆ' ಎಂದರು.

ವಿದ್ಯಾರ್ಥಿವೇತನ ಸಿಗದೇ ಪರದಾಟ

ಒಂದನೇ ಪುಟದಿಂದ...

ಇದರ ಪರಿಣಾಮ 2020–21ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮೂಲಕ ಅರ್ಜಿ ಸಲ್ಲಿಸಿರುವ 66 ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವೇ ಬಿಡುಗಡೆಯಾಗಿಲ್ಲ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೂಲಕ ಅರ್ಜಿ ಸಲ್ಲಿಸಿರುವ ಸಾವಿರಾರು ವಿದ್ಯಾರ್ಥಿಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ.

ಸರ್ಕಾರದಿಂದ ಶುಲ್ಕ ಪಾವತಿಯಾಗದ ಕಾರಣ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡಲು ವಿಶ್ವವಿದ್ಯಾಲಯಗಳು ಹಿಂದೇಟು ಹಾಕುತ್ತಿವೆ. ಸರ್ಕಾರ ಪಾವತಿಸಬೇಕಿದ್ದ ಬಾಕಿ ಶುಲ್ಕವನ್ನು ಪೋಷಕರೇ ಪಾವತಿಸಿದರೆ ಅಂಕಪಟ್ಟಿ ನೀಡಲಾಗುತ್ತಿದೆ. ಈ ಮೊತ್ತ ಪಾವತಿಸಲಾಗದ ವಿದ್ಯಾರ್ಥಿಗಳು ಅಂಕಪಟ್ಟಿಯನ್ನೇ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಶಿಕ್ಷಣ ಮುಂದುವರಿಸಲು ಸಾಧ್ಯವಾಗದೆ ತೊಂದರೆಗೆ ಸಿಲುಕಿದ್ದಾರೆ.

'ವಿದ್ಯಾರ್ಥಿ ವೇತನ ಬಿಡುಗಡೆಗೆ ಕೋರಿ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗಳಿಗೆ ವಿದ್ಯಾರ್ಥಿಗಳು ಎಡತಾಕುತ್ತಿದ್ದಾರೆ. ಅಲ್ಲಿನ ಅಧಿಕಾರಿಗಳು ಇ–ಆಡಳಿತ ಇಲಾಖೆಯ ಕಡೆಗೆ ಬೊಟ್ಟು ಮಾಡುತ್ತಿದ್ದಾರೆ. ಸ್ನಾತಕೋತ್ತರ ಪದವಿ ಮುಗಿಸಿ ವರ್ಷವೇ ಕಳೆದರೂ ಅಂಕಪಟ್ಟಿ ಪಡೆಯಲಾಗಿಲ್ಲ. ಭವಿಷ್ಯವೇ ಅತಂತ್ರವಾಗಿದೆ' ಎಂದು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಲೋಕೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

10 ದಿನಗಳಲ್ಲಿ ಪರಿಹಾರ: ಸಚಿವ

'ಆಧಾರ್ ಗುರುತಿನ ಚೀಟಿ ಲಿಂಕ್ ಮಾಡದ ಮತ್ತು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಯ ವಿವರ ಸರಿ ಇಲ್ಲದ ಕಾರಣ ಸಮಸ್ಯೆ ಆಗಿತ್ತು. 8ರಿಂದ 10 ದಿನಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗುವುದು' ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಸ್ಪಷ್ಟಪಡಿಸಿದರು.

'ಇತ್ತೀಚೆಗೆ ವಿದ್ಯಾರ್ಥಿ ವೇತನ ಆಂದೋಲನವನ್ನೂ ನಡೆಸಲಾಗಿದೆ. ಶೇ 48ರಷ್ಟಿದ್ದ ವಿದ್ಯಾರ್ಥಿ ವೇತನ ಪಾವತಿ ಪ್ರಮಾಣ ಶೇ 86ಕ್ಕೆ ಏರಿದೆ. ಸೋಮವಾರ ಮತ್ತೊಂದು ಸಭೆ ನಡೆಸಲಾಗುತ್ತಿದೆ' ಎಂದರು.

ಡಾ.ಎಚ್.ಸಿ.ಮಹದೇವಪ್ಪ ಪತ್ರ

ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ ಸರಿಪಡಿಸುವಂತೆ ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಕೂಡ ಮುಖ್ಯಮಂತ್ರಿ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಪತ್ರ ಬರೆದಿದ್ದಾರೆ. ಅರ್ಜಿಗಳ ವಿಲೇವಾರಿ ಹೊಣೆಯನ್ನು ಹಿಂದಿನಂತೆ ಆಯಾ ಇಲಾಖೆಗಳಿಗೇ ವಹಿಸಿ ಎಂದಿದ್ದಾರೆ.

ಅಂಕಿ-ಅಂಶಗಳು

70 ಸ್ವಾಯತ್ತ ಸೇರಿ ಒಟ್ಟು ವಿಶ್ವವಿದ್ಯಾಲಯಗಳು

2.54 ಲಕ್ಷ ವಿದ್ಯಾರ್ಥಿ ವೇತನ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ

14,143 ಎಸ್‌ಎಸ್‌ಪಿ ಶುಲ್ಕದ ವಿವರ ಸಲ್ಲಿಸಬೇಕಿರುವ ಕಾಲೇಜುಗಳ ಸಂಖ್ಯೆ

₹4.06 ಕೋಟಿ ನಿಗದಿಪಡಿಸಿರುವ ಅನುದಾನ

3.20 ಲಕ್ಷ ಸಮಾಜ ಕಲ್ಯಾಣ ಇಲಾಖೆ ಮೂಲಕ 2020–21ರಲ್ಲಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು

₹2.53 ಕೋಟಿ ಬಿಡುಗಡೆ ಮಾಡಿರುವ ಅನುದಾನ

ಓಮೈಕ್ರಾನ್: ಇಂದು ಮುಖ್ಯಮಂತ್ರಿ ಸಭೆ

ಒಂದನೇ ಪುಟದಿಂದ...

ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಜೊತೆ ಭಾನುವಾರ ಬೆಳಿಗ್ಗೆ ಮಾತನಾಡಿದ ಮುಖ್ಯಮಂತ್ರಿ, 'ದೇಶದಲ್ಲಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮಹಾರಾಷ್ಟ್ರ, ಕೇರಳ ಹಾಗೂ ತಮಿಳುನಾಡಿನಲ್ಲಿ ಹೆಚ್ಚಾಗಿರುವುದು ರಾಜ್ಯದ ಆತಂಕ ಹೆಚ್ಚಿಸಿದೆ. ಈ ಬಗ್ಗೆ ತಜ್ಞರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದರು. ರಾಜ್ಯದಲ್ಲಿ ಓಮೈಕ್ರಾನ್ ಸ್ಥಳೀಯವಾಗಿ ಹರಡುತ್ತಿರುವ ಬಗ್ಗೆ ಈಗಾಗಲೇ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೀಗಾಗಿ, ತಜ್ಞರ ಜೊತೆ ಚರ್ಚಿಸಿದ ಬಳಿಕ ಕೆಲವು ಕಠಿಣ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವ ಸಾಧ್ಯತೆ ಇದೆ.

ರಾತ್ರಿ ಕರ್ಫ್ಯೂ ಮತ್ತೆ ಹೇರುವ ಬಗ್ಗೆ ಈ ಸಭೆಯಲ್ಲಿ ಚರ್ಚಿಸುವ ಸಾಧ್ಯತೆ ಇದೆ. ಅಲ್ಲದೆ, ಬಾರ್ ಮತ್ತು ರೆಸ್ಟೋರೆಂಟ್, ಪಬ್, ಹೋಟೆಲ್‌ಗಳಲ್ಲಿ ಒಟ್ಟು ಆಸನದ ಶೇ 50ರಷ್ಟು ಮಂದಿಗೆ ಮಾತ್ರ ಅವಕಾಶ ಕಲ್ಪಿಸುವ ನಿಯಮ ಜಾರಿ ಬಗ್ಗೆಯೂ ಸಭೆಯಲ್ಲಿ ತೀರ್ಮಾನ ಆಗಲಿದೆ ಎಂದು ಮೂಲಗಳು ತಿಳಿಸಿವೆ.

ಸಿ.ಎಂ ಬದಲಾವಣೆ ಕೇವಲ ವದಂತಿ: ನಳಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಯಕತ್ವ ಬದಲಾವಣೆಯಾಗಲಿದೆ ಎಂಬುದು ಕೇವಲ ವದಂತಿ. 2023ರ ವಿಧಾನಸಭೆ ಚುನಾವಣೆಯನ್ನು ಬೊಮ್ಮಾಯಿ ನೇತೃತ್ವದಲ್ಲೇ ಎದುರಿಸುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಶನಿವಾರ ಹೇಳಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ವರಿಷ್ಠರ ಮಟ್ಟದಲ್ಲಿ ಯಾವುದೇ ಚರ್ಚೆಯಾಗಿಲ್ಲ. ಯಾರೋ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಕಿವಿಗೊಡಬೇಡಿ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಾವುದೇ ಕಾರಣಕ್ಕೂ ಸಿ.ಎಂ ಬದಲಾವಣೆ ಮಾಡುವುದಿಲ್ಲ. ಈ ವಿಷಯ ಪಕ್ಷದ ವರಿಷ್ಠರ ಮುಂದಿಲ್ಲ. ವದಂತಿಯನ್ನು ಯಾರು ಹಬ್ಬಿಸುತ್ತಿದ್ದಾರೋ ಗೊತ್ತಿಲ್ಲ' ಎಂದು ಹೇಳಿದರು.

'ಸಚಿವ ಸಂಪುಟ ಪುನರ್‌ರಚನೆ ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟ ವಿಷಯ. ಪುನರ್ ರಚನೆ ಮಾಡುವುದಾದರೆ ನನ್ನ ಜತೆಗೆ ಚರ್ಚಿಸಲಿದ್ದಾರೆ. ಆ ದಿನ ನಿಮಗೆ ವಿಷಯ ತಿಳಿಸುತ್ತೇನೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಮತಾಂತರ ನಿಷೇಧ ಹಿನ್ನಡೆಯಾಗಿಲ್ಲ: ಸಿಎಂ

ಹುಬ್ಬಳ್ಳಿ: 'ಮತಾಂತರ ನಿಷೇಧ ಮಸೂದೆಗೆ ಹಿನ್ನಡೆಯಾಗಿಲ್ಲ. ಮೇಲ್ಮನೆಯಲ್ಲಿ ನಮಗೆ ಅಗತ್ಯ ಬೆಂಬಲವಿಲ್ಲ. ಹಾಗಾಗಿ, ಮಸೂದೆ ಮಂಡಿಸಲಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ' ಈ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲು ನಿರ್ಧರಿಸಿದ್ದೇವೆ' ಎಂದರು.

ಕಾಲಮಿತಿಯಲ್ಲಿ ನಡೆಯದ ಕೌನ್ಸೆಲಿಂಗ್ ಪ್ರಕ್ರಿಯೆ

ಎಂಡಿಎಸ್ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೀಟು ಹಂಚಿಕೆ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಕಾಲಮಿತಿಯಲ್ಲಿ ಪೂರ್ಣಗೊಳಿಸದ ಕಾರಣ ಸಾವಿರಕ್ಕೂ ಹೆಚ್ಚು ಸ್ನಾತಕೋತ್ತರ ದಂತ ವೈದ್ಯಕೀಯ (ಎಂಡಿಎಸ್) ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗಿದೆ.

ಕೋರ್ಸ್ ಪ್ರವೇಶದ ಕೊನೆ ದಿನವನ್ನು ವಿಸ್ತರಿಸಬೇಕೆಂಬ ರಾಜ್ಯ ಸರ್ಕಾರದ ಮನವಿಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಅಲ್ಲದೆ, ಎಂಡಿಎಸ್ ಕೋರ್ಸ್‌ಗೆ ಈಗಾಗಲೇ ಪ್ರವೇಶ ಪಡೆದವರ ದಾಖಲಾತಿಯನ್ನು ಪೂರ್ವಾನ್ವಯಗೊಳಿಸಲು ಕೂಡಾ ನಿರಾಕರಿಸಿದೆ.

ಎಂಡಿಎಸ್ ಪ್ರವೇಶಕ್ಕೆ ವಿಳಂಬವಾಗಿ ಕೌನ್ಸೆಲಿಂಗ್ ಆರಂಭವಾಗಿದ್ದು, ಇದಕ್ಕೆ ಹೆಚ್ಚಿನ ಸಮಯ ತಗುಲಿದೆ. ತಪ್ಪಿನ ಅರಿವಾಗುತ್ತಿದ್ದಂತೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದ ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆ, ಪ್ರವೇಶದ ಅಂತಿಮ ದಿನವನ್ನು ವಿಸ್ತರಿಸುವ ಮೂಲಕ ಕೊನೆಯ ದಿನದ ಬಳಿಕ ಮಾಡಿಕೊಂಡ ದಾಖಲಾತಿಗೆ ಮಂಜೂರಾತಿ ನೀಡಬೇಕು ಎಂದು ಮನವಿ ಸಲ್ಲಿಸಿತ್ತು.

ನ.26ರಂದು ರಾಜ್ಯ ಸರ್ಕಾರ ಮಾಡಿದ್ದ ಈ ಮನವಿಯನ್ನು ತಿರಸ್ಕರಿಸಿರುವ ಕೇಂದ್ರ ಸರ್ಕಾರ, 2021–22ನೇ ಸಾಲಿಗೆ ಎಂಡಿಎಸ್ ಪ್ರವೇಶ ದಿನವನ್ನು ಯಾವುದೇ ಕಾರಣಕ್ಕೂ ವಿಸ್ತರಿಸುವುದಿಲ್ಲ ಎಂದು ಡಿ. 21ರಂದು ಸ್ಪಷ್ಟಪಡಿಸಿದೆ. ಕೇಂದ್ರದ ಈ ನಿಲುವಿನಿಂದ ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

'ಎಂಡಿಎಸ್‌ಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ದಾಖಲಾತಿಗಳನ್ನು ದಂತ ವೈದ್ಯಕೀಯ ಕಾಲೇಜುಗಳು ನ. 20ರ ಒಳಗೆ ಭಾರತೀಯ ದಂತ ವೈದ್ಯಕೀಯ ಪರಿಷತ್‌ನ (ಡಿಸಿಐ) ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಆ ನಂತರ ಅಪ್‌ಲೋಡ್ ಮಾಡುವ ದಾಖಲೆಗಳನ್ನು ಪರಿಗಣಿಸುವುದಿಲ್ಲ' ಎಂದು ಕಾರ್ಯಕಾರಿ ಸಮಿತಿಯಲ್ಲಿ ನಿರ್ಧರಿಸಿರುವ ಬಗ್ಗೆ ಡಿಸಿಐ ಪ್ರಕಟಣೆ ಹೊರಡಿಸಿತ್ತು. ಈ ಬಗ್ಗೆ ರಾಜ್ಯ ಸರ್ಕಾರಕ್ಕೂ ಕೇಂದ್ರ ಮಾಹಿತಿ ನೀಡಿದೆ.

ಎಂಡಿಎಸ್ ವಿದ್ಯಾರ್ಥಿಗಳಿಗೆ ಆಗಿರುವ ಸಮಸ್ಯೆ ಬಗ್ಗೆ ಪ್ರತಿಕ್ರಿಯಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಅಧಿಕಾರಿಯೊಬ್ಬರು, 'ವೈದ್ಯಕೀಯ ಶಿಕ್ಷಣ ಇಲಾಖೆ ಸೂಚನೆಯಂತೆ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸುವುದಷ್ಟೆ ನಮ್ಮ ಕೆಲಸ' ಎಂದರು.

'ರಾಜ್ಯ ಸರ್ಕಾರದ ಮಟ್ಟದಲ್ಲಿ ದಂತ ವೈದ್ಯಕೀಯ ಕಾಲೇಜುಗಳು ಮತ್ತು ಸರ್ಕಾರದ ಮಧ್ಯೆ ಒಮ್ಮತ ಮೂಡಿ ಒಪ್ಪಂದ ಮಾಡಿಕೊಳ್ಳಲು ವಿಳಂಬ ಆಗಿದ್ದರಿಂದ ಎಂಡಿಎಸ್ ಕೌನ್ಸೆಲಿಂಗ್ ಪ್ರಕ್ರಿಯೆ ವಿಳಂಬವಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಡಿಸಿಐ ಹೊರಡಿಸಿರುವ ಅಧಿಸೂಚನೆಯಂತೆ, 2021–22ನೇ ಶೈಕ್ಷಣಿಕ ಸಾಲಿಗೆ ಎಂಡಿಎಸ್ ಪ್ರವೇಶ ನೋಂದಣಿಗೆ ನ.20 ಕೊನೆಯ ದಿನ. 'ನೀಟ್– ಎಂಡಿಎಸ್ 2021' ಪ್ರವೇಶ ಪರೀಕ್ಷೆ 2020ರ ಡಿ. 16ರಂದು ನಡೆದಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಕೌನ್ಸೆಲಿಂಗ್ ಪ್ರಕ್ರಿಯೆ 2021ರ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಂಡಿದೆ. ತಕ್ಷಣವೇ ಸರ್ಕಾರ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಬೇಕಿತ್ತು. ಆದರೆ ವಿಳಂಬವಾಗಿ, ಅಂದರೆ ಡಿ.5ರಂದು ಈ ಪ್ರಕ್ರಿಯೆ ನಡೆಸಿದೆ.

'ನಮ್ಮದಲ್ಲದ ತಪ್ಪಿಗೆ ಬಲಿಪಶು ಆಗಿದ್ದೇವೆ. ನಮ್ಮ ಭವಿಷ್ಯದ ಜೊತೆ ಸರ್ಕಾರ ಚೆಲ್ಲಾಟ ಆಡಿದೆ. ಪ್ರವೇಶಕ್ಕೆ ಡಿಸಿಐ ಅನುಮೋದನೆ ನೀಡದಿದ್ದರೆ ಶೈಕ್ಷಣಿಕ ವರ್ಷ ನಷ್ಟವಾಗಲಿದೆ' ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ. ಪ್ರತಿಕ್ರಿಯೆಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಲಭ್ಯರಾಗಲಿಲ್ಲ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಎಮ್. ನಾಗಪ್ಪ
ಕ್ಲಾಸ್1, ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್
337, ಸದಾಶಿವನಗರ,
ಮರಣ: 26-12-1991
ಗೌರವಾದಾರಗಳೊಂದಿಗೆ ಸ್ಮರಿಸುವ
ಕುಟುಂಬ ವರ್ಗದವರು.

16ನೇ ವಾರ್ಷಿಕ ಪುಣ್ಯಸ್ಮರಣೆ

ಶ್ರೀ ಸಿ. ಕೃಷ್ಣಪ್ಪ
ಕೃಷ್ಣ ರಾಜಪುರ
ಭಗವಂತನು ತಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಕೋರುವ
ಇಂತಿ ಮಕ್ಕಳು, ಅಳಿಯಂದಿರು, ಮತ್ತು ಕುಟುಂಬದವರು

mathru deva bhava
4ನೇ ವರ್ಷದ ಪುಣ್ಯಸ್ಮರಣೆ

ಪೂಜ್ಯ ಮಾತೃಶ್ರೀ ಆರ್.ಕೆ. ಕೃಷ್ಣಮ್ಮ ನವರು
(ದಿ|| ಎಸ್.ಎ. ಲಕ್ಷ್ಮಣ್ ರವರ ಧರ್ಮಪತ್ನಿ)
ದಿನಾಂಕ: 26-12-2017
ನಿಮ್ಮ ನೆನಪಲಿ ದಿನವ ಕಳೆಯುತಾ
ನಿಮ್ಮ ಆದರ್ಶಗಳನ್ನು ಸ್ಮರಿಸುತಾ
ನಿಮ್ಮ ಶ್ರೀರಕ್ಷೆಯ ಬಲದಿಂದ
ಬೆಳೆಯುತಿಹೆವು ನಾವು
ನಿಮ್ಮ ನಾಮ ಸ್ಮರಣೆಯಿಂದ

LOOKING TO BUILD, BUY OR SELL A PROPERTY
Please refer Classifieds on Sunday

ಮೊದಲನೇ ವರ್ಷದ ಪುಣ್ಯ ಸ್ಮರಣೆ

ಡಾ|| ಐಶ್ವರ್ಯ ಪಿ. ಗೌಡ
ಜನನ: 13.07.1995 ಮರಣ: 20.12.2020
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದಿದೆ. ಸದಾಕಾಲ ನಮ್ಮೆಲ್ಲರ ಜೊತೆಯಲ್ಲಿಯೇ ನೀವಿದ್ದೀರಾ ಎಂದೇ ಭಾವಿಸಿ ಬದುಕುತ್ತಿದ್ದೇವೆ. ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ ದು:ಖತಪ್ತರಾದ
ಇಂತಿ ದು:ಖತಪ್ತರು: ತಂದೆ, ತಾಯಿ, ಸಹೋದರ ಹಾಗೂ ಕುಟುಂಬವರ್ಗ

ಒಂಬತ್ತನೇ ವರ್ಷದ ಪುಣ್ಯಸ್ಮರಣೆ

ಎಲ್. ಕೃಷ್ಣಪ್ಪ, ರಾಂಪುರ
ಸಂಸ್ಥಾಪಕರು, ಪ್ರೆಸ್ಟೀಜ್ ಸಮೂಹ ವಿದ್ಯಾ ಸಂಸ್ಥೆಗಳು
ಪ್ರೆಸ್ಟೀಜ್ ಇಂಟರನ್ಯಾಷನಲ್ ಶಾಲೆ, ರಾಂಪುರ. ಪ್ರೆಸ್ಟೀಜ್ ಶಾಲೆ, ಹೆಣ್ಣೂರು ರಸ್ತೆ, ಗೆದ್ದಲಹಳ್ಳಿ ಕ್ಯಾಪಿಟಲ್ ಪಬ್ಲಿಕ್ ಶಾಲೆ, ಎ. ನಾರಾಯಣಪುರ. ಎಲ್. ಕೆ. ಬಿಲ್ಡರ್ಸ್, ರಾಂಪುರ.
ಇವರ ಒಂಬತ್ತನೇ ವರ್ಷದ ಆರಾಧನೆಯು ದಿನಾಂಕ 26-12-2021 ರಂದು ರಾಂಪುರ ಸ್ವಗೃಹದಲ್ಲಿ ನಡೆಯಲಿದೆ.
ದು:ಖತಪ್ತರು: ಪತ್ನಿ ವೆಂಕಟಲಕ್ಷ್ಮಮ್ಮ, ಕೆ. ಗೋವಿಂದಪ್ಪ, ಮತ್ತು ಕೆ. ಅಂಜನಪ್ಪ, ಕೆ. ರಮೇಶ್, ಪದ್ಮಾವತಿ, ಅಶ್ವಿನ್ ಕುಮಾರ್ ಮತ್ತು ಕುಟುಂಬದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

REQUIRED FOR ADDRESS VERIFICATION COMPANY
FIELD VERIFICATION EXECUTIVES REQUIRED FOR ALL OVER KARNATAKA
SALARY + ATTRACTIVE INCENTIVE
Full Time & Part Time Jobs available
ANDROID MOBILE MUST
DIGINITY ENTERPRISES PVT LTD
No.26, Oakland Apartment, Flat No.102, 1st Cross, Ulsoor Road, Near HDFC Bank, Bangalore - 42.
85508 88899
90879 55555

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/- 8884666597, 8884666594.

ತಕ್ಷಣ ಬೇಕಾಗಿದ್ದಾರೆ: ಕರ್ನಾಟಕದಾದ್ಯಂತ ಕಂಪನಿ, ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು. 10th, Degree. ವಸತಿಯೂಟದೊಂದಿಗೆ ಸಂಬಳ 17,800- 19,200. PH:8197389603

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/-(ಆನ್‌ಲೈನ್ ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕಟ್ಟಡ ಸಾಮಗ್ರಿ ಟೆಸ್ಟ್ ಲ್ಯಾಬ್ ನಲ್ಲಿ ಹೆಲ್ಪರ್ ಕೆಲಸಕ್ಕೆ ಐಟಿಐ ಅಥವಾ ಪಿಯುಸಿ ಪಾಸ್/ಫೇಲ್, ಹುಡುಗರು ತಕ್ಷಣ ಬೇಕಾಗಿದ್ದಾರೆ. ತರಬೇತಿ ಅವಧಿಯಲ್ಲಿ 10,000 ಮಾಸಿಕ ವೇತನ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ: 9844137668.

Cook

ಬೆಂಗಳೂರಿನಲ್ಲಿರುವ ಕ್ಯಾಟರಿಂಗ್ ಗೆ ಸೌತ್ ಇಂಡಿಯಾ ಕುಕ್ (ಅನುಭವವುಳ್ಳವರು), ಕೌಂಟರ್ ಸರ್ವಿಸ್ ಬಾಯ್ ಬೇಕಾಗಿದ್ದಾರೆ ಸಂಪರ್ಕಿಸಿ: 9632297098/ 9731452193.

Marketing & Sales

REQUIRE AN Experienced Sales Engineer & service engineer for Instrumentation Company-Bangalore Branch. Qualification: -BE-Inst. /Electronic/ E&TC. Require an Experienced Coordinator-Sales or Service (Qualification - Any Graduate) Send CV on 8291958083/ 8879773091 or email on hrd@technovalue.in/ushakapla@technovalue.in . Our Website - www.technovalue.in

iprocess
i-Process Services (India) Pvt. Ltd.
WE ARE HIRING
Sales Executives to Sell Debit / Credit Card Swipe Machine for leading Private Bank
300+ Vacancies in Bangalore-Immediate joining
* Any sales experience preferred.
* Fresh Graduates can also apply.
* Salary 1.25-2.50 Lacs/P.A + Incentives.
Walk-in with Appointment preferably 27th to 31st Dec. 2021, between 10 am to 5 pm
For Appointment Call Charan : 8050526223
Office address : Mittal Tower, 5th Floor, 510 B Wing, MG Road, 560001, Next to Trinity Metro Station.
To apply please scan this QR code
https://iprocesscareers.peoplestrong.com
Apply immediately (SMS/Whatsapp only)
9311340757

V&SML ಕಂಪನಿಗೆ ಮಾರ್ಕೆಟಿಂಗ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ರಾಜ್ಯಾದ್ಯಂತ ಬೇಕಾಗಿದ್ದಾರೆ ವಯೋಮಿತಿ 18 ರಿಂದ 30.ಸಂಬಳ 15,000/ರಿಂದ 30,000/.ಸಂಪರ್ಕಿಸಿ: 7338368136.

Wanted

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,00060,000. ಫೋ 9886639846, 7624918246.

Accounts & Finance

WANTED LADIES For Accounts (Married) B.Com with Tally Knowledge in&Around Jayanagar And JP-Nagar Contact: 9980921763/ 9632201671

ವ್ಯಾಪಾರ

Business to Business

Services

ನರ್ಸ್ ಯಾವುದೇ ಪದವಿ, ಹೋಮ್ ನರ್ಸಿಂಗ್, ಪೇಶಂಟ್ ಕೇರ್‌ಟೇಕರ್, ಹಿರಿಯನಾಗರಿಕರ ಕೇರ್‌ಟೇಕರ್ ಪು/ಮ ಬೇಕಾಗಿದ್ದಾರೆ. ವರ್ಷಾಹರಿ ಹೆಲ್ತ್ ಸರ್ವೀಸ್ ಬೆಂಗಳೂರು.:8792150209

Business Offers

Distributors

ಅಗತ್ಯವಿದೆ ಸುಗಂಧಭರಿತ ಅಗರಬತ್ತಿ ಡಿಸ್ಟ್ರಿಬ್ಯೂಟರ್ಸ್ / ಹೋಲ್ ಸೇಲರ್ಸ್‌ಉದ್ದೇಶ್ ಇಂಡಸ್ಟ್ರೀಸ್ 93, ವಿಆರ್ ಲೇಔಟ್, ಮತ್ತಿಕೆರೆ, ಬೆಂಗಳೂರು ಉತ್ತರ - 54 ಸಂಪರ್ಕಿಸಿ :6362680497

Finance

WE ARE READY TO INVEST LONG TERM PROJECTS ALL OVER THE WORLD: 08610936362/ 07708215904

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈವಾಹಿಕ

Brides Wanted

Hindu

ವಧು ಬೇಕಾಗಿದೆ
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ 35000 ಸಂಬಳ ವಿರುವ ಹಿಂದು ಪಂಗಡಕ್ಕೆ ಸೇರಿರುವ ಯುವಕನಿಗೆ ಮದುವೆಯಾಗಲು ತಂದೆ-ತಾಯಿ ಇಲ್ಲದ ಅಥವಾ ಯಾರು ಇಲ್ಲದ ಅನಾಥಳಾಗಿರುವ ವಧು ಇದ್ದರೆ ನೇರವಾಗಿ ಸಂಪರ್ಕಿಸಿ.
7676438399
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಶಿಕ್ಷಣ

Coaching Classes

ನೇರ ಪರೀಕ್ಷೆಗಳು
DIRECT EXAMS
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC,SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್(ರಿ)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
9740258276

ಭವಿಷ್ಯ

Astrology

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ವಶೀಕರಣ ಸ್ಪೆಶಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿ ಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯವಾದುದ್ದು ಇಲ್ಲಿ ಸಾಧ್ಯ 9535883556

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 9731810277 9901641752 9845114560 9886213331
Email: dhclassifieds@deccanherald.co.in

ಮೊದಲ ಓಮೈಕ್ರಾನ್ ಗುರುತಿಸಿದ್ದ ವೈದ್ಯೆ ಏಂಜೆಲಿಕ್ ಕೊಯೆಟ್ಜಿ ಅಭಿಪ್ರಾಯ

‘ಪ್ರಕರಣ ಹೆಚ್ಚಿದರೂ ತೀವ್ರತೆ ಕಡಿಮೆ’

ಕೋಲ್ಕತ್ತ (ಪಿಟಿಐ): ‘ಭಾರತದಲ್ಲಿ ಓಮೈಕ್ರಾನ್ ಸೇರಿದಂತೆ ಕೊರೊನಾ ವೈರಸ್ ಪ್ರಕರಣಗಳಲ್ಲಿ ಹಾಗೂ ಪಾಸಿಟಿವಿಟಿ ದರದಲ್ಲಿ ಹೆಚ್ಚಳ ಕಂಡುಬರಲಿದೆ. ಆದರೆ ದಕ್ಷಿಣ ಆಫ್ರಿಕಾದಲ್ಲಿ ಕಂಡುಬಂದ ಪ್ರಕರಣಗಳಿಗೆ ಹೋಲಿಸಿದರೆ, ಸೌಮ್ಯ ಸ್ವರೂಪದಲ್ಲಿ ಇರಲಿವೆ’ ಎಂದು ದಕ್ಷಿಣ ಆಫ್ರಿಕಾದಲ್ಲಿ ಮೊದಲ ಓಮೈಕ್ರಾನ್ ಗುರುತಿಸಿದ್ದ ವೈದ್ಯೆ ಏಂಜೆಲಿಕ್ ಕೊಯೆಟ್ಜಿ ಅವರು ಅಭಿಪ್ರಾಯಪಟ್ಟಿದ್ದಾರೆ.

ದಕ್ಷಿಣ ಆಫ್ರಿಕಾ ವೈದ್ಯಕೀಯ ಸಂಘದ ಅಧ್ಯಕ್ಷೆಯೂ ಆಗಿರುವ ಅವರು, ಓಮೈಕ್ರಾನ್ ಪ್ರಸರಣವನ್ನು ಈಗ ಲಭ್ಯವಿರುವ ಲಸಿಕೆಗಳು ನಿಯಂತ್ರಿಸಲಿವೆ ಎಂದು ಹೇಳಿದ್ದಾರೆ.

‘ಲಸಿಕೆ ಹಾಕಿಸಿಕೊಂಡ ವ್ಯಕ್ತಿ ಅಥವಾ ಈ ಮೊದಲೇ ಸೋಂಕಿಗೆ ಒಳಗಾಗಿದ್ದ ವ್ಯಕ್ತಿಯಿಂದ ಸೋಂಕು ಪಸರಿಸುವ ಪ್ರಮಾಣ ಕಡಿಮೆ ಇರುತ್ತದೆ. ಆದರೆ ಲಸಿಕೆ ಹಾಕಿಸಿಕೊಳ್ಳದ ವ್ಯಕ್ತಿಯಿಂದ ಸೋಂಕು ಹರಡುವ ಸಂಭಾವ್ಯತೆ ಪ್ರಮಾಣ ಶೇ 100ರಷ್ಟು ಇರುತ್ತದೆ’ ಎಂದಿದ್ದಾರೆ.

ಕೊರೊನಾ ವೈರಸ್ ತಳಿಗಳಲ್ಲಿ ಕಡಿಮೆ ತೀವ್ರತೆ ಹೊಂದಿರುವ ಓಮೈಕ್ರಾನ್ ಬಳಿಕ ಕೋವಿಡ್ ಸಾಂಕ್ರಾಮಿಕ ಅಂತ್ಯವಾಗಲಿದೆ ಎಂಬ ತಜ್ಞರ ಅಭಿಪ್ರಾಯವನ್ನು ಅವರು ಒಪ್ಪಿಲ್ಲ. ‘ಕೋವಿಡ್ ಸಾಂಕ್ರಾಮಿಕ ಇನ್ನೂ ಮುಗಿದಿಲ್ಲ. ಮುಂದಿನ ದಿನಗಳಲ್ಲಿ ಅದು ಸ್ಥಳೀಯವಾಗಿ ಕಂಡುಬರಲಿದೆ’ ಎಂದು ಹೇಳಿದ್ದಾರೆ.

‘ಓಮೈಕ್ರಾನ್ ಹೆಚ್ಚು ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದ್ದರೂ, ಅದು ಭಾರಿ ಅಪಾಯಕಾರಿ ಅಲ್ಲ. ಆಸ್ಪತ್ರೆಗೆ ಸೇರುವ ಗಂಭೀರ ಸ್ವರೂಪದ ಪ್ರಕರಣಗಳು ಕಡಿಮೆ ಇರುತ್ತವೆ. ಮಕ್ಕಳಿಗೂ ಇದು ಹರಡಬಲ್ಲದು. ಆದರೆ ಐದಾರು ದಿನಗಳಲ್ಲಿ ಅವರು ಚೇತರಿಸಿಕೊಳ್ಳುತ್ತಾರೆ’ ಎಂದು ಅವರು ವಿವರಿಸಿದ್ದಾರೆ.

> ಓಮೈಕ್ರಾನ್ ಮುಂದಿನ ದಿನಗಳಲ್ಲಿ ರೂಪಾಂತರ ಹೊಂದಬಹುದು. ಅದರ ಸ್ವರೂಪ ಮಾರಣಾಂತಿಕ ಆಗಬಹುದು, ಆಗದೆಯೂ ಇರಬಹುದು
> **ಏಂಜೆಲಿಕ್ ಕೊಯೆಟ್ಜಿ,** ಮೊದಲ ಓಮೈಕ್ರಾನ್ ಗುರುತಿಸಿದ್ದ ವೈದ್ಯೆ

> ಮಹಾರಾಷ್ಟ್ರದಲ್ಲಿ ವೈದ್ಯಕೀಯ ಆಮ್ಲಜನಕದ ಬೇಡಿಕೆ ನಿತ್ಯ 800 ಟನ್‌ಗೆ ತಲುಪುವವರೆಗೂ ರಾಜ್ಯದಲ್ಲಿ ಲಾಕ್‌ಡೌನ್ ಹೇರುವುದಿಲ್ಲ
> **ರಾಜೇಶ್ ಟೋಪೆ**
> ಮಹಾರಾಷ್ಟ್ರ ಆರೋಗ್ಯ ಸಚಿವ

ಅಸ್ಸಾಂನಲ್ಲಿ ರಾತ್ರಿ ಕರ್ಫ್ಯೂ ಜಾರಿ

ಗುವಾಹಟಿ: ಓಮೈಕ್ರಾನ್ ಪ್ರಸರಣ ಭೀತಿಯಿಂದ ಅಸ್ಸಾಂ ಸರ್ಕಾರವು ಭಾನುವಾರ ರಾತ್ರಿಯಿಂದ ರಾಜ್ಯದಲ್ಲಿ ರಾತ್ರಿ ಕರ್ಫೂ ವಿಧಿಸಲು ನಿರ್ಧರಿಸಿದೆ. ಆದರೆ ಹೊಸ ವರ್ಷಾಚರಣೆ ನಿಮಿತ್ತ, ಡಿಸೆಂಬರ್ 31ರಂದು ರಾತ್ರಿ ಕರ್ಫ್ಯೂ ಇರುವುದಿಲ್ಲ. ಪ್ರತಿನಿತ್ಯ ರಾತ್ರಿ 11.30ರಿಂದ ಬೆಳಗ್ಗೆ 6 ಗಂಟೆವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ.

ಮುಂಬೈ: ಹೊಸ ವರ್ಷಾಚರಣೆ ಔತಣಕೂಟ ನಿರ್ಬಂಧ

ಮುಂಬೈ: ಮಹಾರಾಷ್ಟ್ರದಲ್ಲಿ ಕೊರೊನಾ ವೈರಸ್ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದ್ದು, ಹೊಸ ವರ್ಷಾಚರಣೆ ನಿಮಿತ್ತ ಹಮ್ಮಿಕೊಳ್ಳುವ ಔತಣಕೂಟಗಳು ಹಾಗೂ ಜನಸಂದಣಿ ಸೇರುವುದನ್ನು ನಿರ್ಬಂಧಿಸಿ ಬೃಹನ್ಮುಂಬೈ ಮಹಾನಗರ ಪಾಲಿಕೆ ಆದೇಶ ಹೊರಡಿಸಿದೆ.

ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಒಳಾಂಗಣ ಮತ್ತು ಹೊರಾಂಗಣ ಪ್ರದೇಶಗಳಲ್ಲಿ ವರ್ಷಾಚರಣೆಗಾಗಿ ಜನರು ಸೇರುವಂತಿಲ್ಲ ಎಂದು ಆಯುಕ್ತ ಇಕ್ಬಾಲ್ ಸಿಂಗ್ ಚಾಹಲ್ ತಿಳಿಸಿದ್ದಾರೆ. ಡಿಸೆಂಬರ್ 25ರ ಮಧ್ಯರಾತ್ರಿಯಿಂದ ಈ ಆದೇಶ ಜಾರಿಗೆ ಬಂದಿದೆ. ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಖಾಸಗಿ ಒಡೆತನದ ಮೈದಾನಗಳಲ್ಲಿ ನಡೆಯುವ ಸಂಭ್ರಮಾಚರಣೆಗಳಿಗೆ ನಿರ್ಬಂಧ ಅನ್ವಯವಾಗಲಿದೆ. ರಾತ್ರಿ 9 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ಸಾರ್ವಜನಿಕ ಸ್ಥಳಗಳಲ್ಲಿ ಐದಕ್ಕಿಂತ ಹೆಚ್ಚು ಜನರು ಸೇರುವಂತಿಲ್ಲ ಎಂದು ಮಹಾರಾಷ್ಟ್ರ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿತ್ತು.

ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ

- ಮುಂಬೈನಲ್ಲಿ ಶನಿವಾರ 757 ಕೊರೊನಾ ವೈರಸ್ ಪ್ರಕರಣಗಳು ವರದಿಯಾಗಿದ್ದು, ಸತತ 5ನೇ ದಿನವೂ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದೆ. ನಗರದಲ್ಲಿ ಸೋಮವಾರ 204, ಮಂಗಳವಾರ 327, ಬುಧವಾರ 490, ಗುರುವಾರ 602, ಶುಕ್ರವಾರ 683 ಹೊಸ ಪ್ರಕರಣಗಳು ಕಂಡುಬಂದಿದ್ದವು.
- ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ 249 ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಸೋಂಕು ದೃಢಪಡುವ ಪ್ರಮಾಣವು ಶೇ 0.43ಕ್ಕೆ ಏರಿಕೆಯಾಗಿದೆ.
- ಶನಿವಾರದಿಂದ ಜನವರಿ 2ರವರೆಗೆ ಯಾವುದೇ ಸಾರ್ವಜನಿಕ ಸಮಾರಂಭ ಅಥವಾ ರ್‍ಯಾಲಿಗಳನ್ನು ನಿಷೇಧಿಸಿ ತೆಲಂಗಾಣ ಸರ್ಕಾರ ಆದೇಶ ಹೊರಡಿಸಿದೆ.

ಜನರಿಗೆ ಒಳ್ಳೆಯದಾಗುವ ರೀತಿಯ ನಿರ್ಧಾರಗಳೇ ಕೇಂದ್ರ ಸರ್ಕಾರದ ಹೆಗ್ಗುರುತು: ಶಾ

‘ಮೋದಿಯಿಂದಲೇ ಉತ್ತಮ ಆಡಳಿತ’

ನವದೆಹಲಿ (ಪಿಟಿಐ): ‘ಉತ್ತಮ ಆಡಳಿತಕ್ಕಾಗಿ ಜನರು ಹಲವಾರು ವರ್ಷಗಳಿಂದ ಕಾಯುತ್ತಿದ್ದರು. ಕಳೆದ ಏಳು ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಜನರಿಗೆ ಉತ್ತಮ ಆಡಳಿತ ನೀಡುತ್ತಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

‘ಉತ್ತಮ ಆಡಳಿತ ದಿನ’ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವಾದ ಡಿ. 25ರಂದು ‘ಉತ್ತಮ ಆಡಳಿತ ದಿನ’ ಎಂದು ಪ್ರತಿವರ್ಷ ಆಚರಿಸಲಾಗುತ್ತದೆ.

‘ನಮಗೆ ಸ್ವಾತಂತ್ರ್ಯ ದೊರಕಿ ಹಲವು ವರ್ಷಗಳಾದವು. ಆದರೆ ಯಾವಾಗ ಉತ್ತಮ ಆಡಳಿತ ದೊರಕುತ್ತದೆ ಎಂದು ಜನರು ಕೇಳುತ್ತಲೇ ಇದ್ದರು. ಉತ್ತಮ ಆಡಳಿತವನ್ನು ಕಾಣದ ಜನರಿಗೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲಿನ ನಂಬಿಕೆಯೇ ಹೊರಟು ಹೋಗಿತ್ತು. ಮೋದಿ ಅವರು ತಳಮಟ್ಟದಿಂದಲೂ ಉತ್ತಮ ಆಡಳಿತ ನೀಡುವ ಮೂಲಕ ಪ್ರಜಾಪ್ರಭುತ್ವದ ಮೇಲೆ ಜನರಿಗೆ ವಿಶ್ವಾಸ ಮರಳುವಂತೆ ಮಾಡಿದ್ದಾರೆ’ ಎಂದರು.

‘2014ಕ್ಕೂ ಮೊದಲು ದೇಶದಲ್ಲಿ ಹಲವು ಸರ್ಕಾರಗಳು ಆಡಳಿತ ನಡೆಸಿ ಹೋಗಿವೆ. ಆದರೆ ಮೋದಿ ಅವರು ಅಧಿಕಾರಕ್ಕೆ ಬಂದಾಗ, ಇವರ ಸರ್ಕಾರ ಕೇವಲ ಅಧಿಕಾರ ನಡೆಸಲು ಬಂದಿಲ್ಲ, ದೇಶವನ್ನು ಬದಲಾಯಿಸಲು ಬಂದಿದೆ ಎಂದು ಜನರು ಅರ್ಥ ಮಾಡಿಕೊಂಡರು‘ ಎಂದು ಶಾ ಹೇಳಿದರು.

‘ಈ ಮೊದಲು ಬಂದಿದ್ದ ಸರ್ಕಾರಗಳು ಮತ ಬ್ಯಾಂಕ್‌ಗಳನ್ನು ಗಮನದಲ್ಲಿರಿಸಿಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದವು. ಆದರೆ ಮೋದಿ ನೇತೃತ್ವದ ಸರ್ಕಾರವು ಜನರು ಇಷ್ಟವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಬದಲು, ಜನರಿಗೆ ಒಳ್ಳೆಯದಾಗುವ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡಿತು. ಇವೆರಡರ ನಡುವೆ ವ್ಯತ್ಯಾಸವಿದೆ. ಕೆಲ ನಿರ್ಧಾರಗಳಿಂದ ಜನಪ್ರಿಯತೆ ಸಿಗುತ್ತದೆ. ಆದರೆ ಅಂಥ ನಿರ್ಧಾರಗಳು ದೇಶಕ್ಕೆ ಸಮಸ್ಯೆ ತಂದೊಡ್ಡುತ್ತವೆ’ ಎಂದು ಅವರು ಹೇಳಿದರು.

ಏಳು ವರ್ಷಗಳಿಂದ ಕೇಂದ್ರ ಸರ್ಕಾರದ ವಿರುದ್ಧ ಯಾವುದೇ ಭ್ರಷ್ಟಾಚಾರ ಆರೋಪವಿಲ್ಲದಿರುವುದೇ ಉತ್ತಮ ಆಡಳಿತಕ್ಕೆ ನಿದರ್ಶನ. ಹಲವಾರು ದಶಕಗಳಿಂದ ಕಲ್ಯಾಣ ಕಾರ್ಯಕ್ರಮಗಳಿಂದ ವಂಚಿತರಾಗಿದ್ದ ಸುಮಾರು 60 ಕೋಟಿ ಜನರಿಗೆ ಅಭಿವೃದ್ಧಿಯ ಲಾಭ ಸಿಗುವಂತೆ ಮಾಡಲಾಯಿತು. ಬಡವರಿಗೆ ಮನೆಗಳು, ಶೌಚಾಲಯಗಳು, ವಿದ್ಯುತ್ ಸಂಪರ್ಕ ಮತ್ತು ಅಡುಗೆ ಅನಿಲ ಸೌಲಭ್ಯ ನೀಡಲಾಗಿದೆ ಎಂದು ವಿವರಿಸಿದರು.

ಪ್ರಧಾನಿಗೆ ಬರೀ ಮತಗಳ ಚಿಂತೆ–ಖರ್ಗೆ ಟೀಕೆ (ಕಲಬುರಗಿ ವರದಿ): ‘ಸಂಸತ್ ಅಧಿವೇಶನದ ವೇಳೆ ಪ್ರಧಾನಿ ನರೇಂದ್ರ ಮೋದಿ ಉತ್ತರ ಪ್ರದೇಶದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅವರಿಗೆ ಅಧಿವೇಶನದ ಚರ್ಚೆಗಳಿಗಿಂತ ಉತ್ತರ ಪ್ರದೇಶದಲ್ಲಿ ಪಕ್ಷಕ್ಕೆ ಮತಗಳನ್ನು ಕೊಡಿಸುವುದೇ ಚಿಂತೆಯಾಗಿದೆ’ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಜೇವರ್ಗಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ 2021

2020 ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು ಅವರಿಗೆ ₹1.5 ಕೋಟಿ ಮೊತ್ತದ ಚೆಕ್ ನೀಡಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ – ಪಿಟಿಐ ಚಿತ್ರ

ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಹಂಚಿಕೆ ಅಭಿಯಾನಕ್ಕೆ ಯೋಗಿ ಚಾಲನೆ

ಲಖನೌ (ಪಿಟಿಐ): ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಫೋನ್ ಮತ್ತು ಟ್ಯಾಬ್ಲೆಟ್‌ಗಳನ್ನು ವಿತರಿಸುವ ಅಭಿಯಾನಕ್ಕೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅವರು ಶನಿವಾರ ಚಾಲನೆ ನೀಡಿದರು.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ‘ಉತ್ತಮ ಆಡಳಿತ ದಿನ’ ಕಾರ್ಯಕ್ರಮದಲ್ಲಿ 60,000 ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಫೋನ್‌ಗಳು ಮತ್ತು ಟ್ಯಾಬ್ಲೆಟ್‌ಗಳನ್ನು ವಿತರಿಸಲಾಯಿತು.

‘ನಿಮ್ಮ ಚಿಂತನೆಗಳು ಚಿಕ್ಕದಾಗಿರಬಾರದು. ನೀವು ದೊಡ್ಡದಾಗಿ ಯೋಚಿಸಿದರೆ ಅದು ನಿಮ್ಮ ವ್ಯಕ್ತಿತ್ವಕ್ಕೆ ಹೊಸ ಆಯಾಮ ನೀಡುತ್ತದೆ. ಜೀವನದಲ್ಲಿ ಹತಾಶಭಾವ ಬರದಂತೆ ನೋಡಿಕೊಳ್ಳಬೇಕು’ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದ ಯೋಗಿ, ತಮ್ಮ ಐದು ವರ್ಷಗಳ ಆಡಳಿತದಲ್ಲಿ ರಾಜ್ಯದಲ್ಲಿ 4.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿರುವುದಾಗಿ ಹೇಳಿದರು.

ರೈತ ಸಂಘಟನೆಗಳಿಂದ ರಾಜಕೀಯ ಪಕ್ಷ

ಚಂಡೀಗಡ (ಪಿಟಿಐ): ಕೇಂದ್ರ ಸರ್ಕಾರಗಳ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡಿದ್ದ ಪಂಜಾಬ್‌ನ 22 ರೈತ ಸಂಘಟನೆಗಳು ‘ಸಂಯುಕ್ತ ಸಮಾಜ ಮೋರ್ಚಾ’ ಎಂಬ ಹೆಸರಿನ ರಾಜಕೀಯ ಪಕ್ಷವೊಂದನ್ನು ಸ್ಥಾಪಿಸಿವೆ.

ಮುಂಬರುವ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸ್ಪರ್ಧೆ ಮಾಡಲಿದೆ. ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ರೈತ ಮುಖಂಡ ಹರ್ಮೀತ್ ಸಿಂಗ್, ‘ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿಯೇ ಸಂಯುಕ್ತ ಸಮಾಜ ಮೋರ್ಚಾವನ್ನು ರಚಿಸಲಾಗಿದೆ’ ಎಂದರು. 22 ಸಂಘಟನೆಗಳ ಪ್ರತಿನಿಧಿಗಳು ಒಟ್ಟಾಗಿ ಈ ನಿರ್ಧಾರ ತೆಗೆದುಕೊಂಡಿವೆ ಎಂದು ಹೇಳಲಾಗಿದೆ.

ಟಿಎಂಸಿ ತೊರೆದ ಐವರು ನಾಯಕರು

ಮುಂಬರುವ ಗೋವಾ ವಿಧಾನಸಭೆ ಚುನಾವಣೆಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಭಾರಿ ಸಿದ್ಧತೆ ಮಾಡಿಕೊಳ್ಳುತ್ತಿರುವ ವೇಳೆಯೇ, ಪಕ್ಷದ ಐವರು ಪ್ರಾಥಮಿಕ ಸದಸ್ಯತ್ವ ತೊರೆದಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

‘ಟಿಎಂಸಿಗೆ ಗೋವಾ ಅರ್ಥ ಆಗಿಲ್ಲ. ಮತಕ್ಕಾಗಿ ಹಿಂದೂ ಮತ್ತು ಕ್ರಿಶ್ಚಿಯನ್ನರ ನಡುವೆ ಒಡಕು ಮೂಡಿಸಲು ಟಿಎಂಸಿ ಪ್ರಯತ್ನಿಸುತ್ತಿದೆ’ ಎಂದು ಸದಸ್ಯರು ಆರೋಪಿಸಿದ್ದಾರೆ.ಮಾಜಿ ಶಾಸಕ ಲಾವೂ ಮಾಮ್ಲತ್ದಾರ್ ಸೇರಿ ಹಲವು ನಾಯಕರು ಮೂರು ತಿಂಗಳ ಹಿಂದೆಯಷ್ಟೇ ಟಿಎಂಸಿ ಸೇರಿದ್ದರು.

‘ಗೋವಾಕ್ಕೆ ಉತ್ತಮ ದಿನಗಳನ್ನು ತರುವ ಭರವಸೆಯಲ್ಲಿ ನಾವು ಟಿಎಂಸಿ ಸೇರಿದ್ದೆವು. ಆದರೆ ಟಿಎಂಸಿ ಕೋಮು ಧ್ರುವೀಕರಣದಲ್ಲಿ ತೊಡಗಿದೆ. ಹಿಂದೂ ಮತಗಳನ್ನು ಮಹಾರಾಷ್ಟ್ರವಾದಿ ಗೋಮಾಂತಕ್ ಪಕ್ಷದ (ಎಂಜಿಪಿ) ಕಡೆಗೆ ಮತ್ತು ಕ್ಯಾಥೋಲಿಕ್ ಮತಗಳನ್ನು ಟಿಎಂಸಿ ಕಡೆಗೆ ತಿರುಗಿಸುವ ಪ್ರಯತ್ನದಲ್ಲಿ ಪಕ್ಷ ತೊಡಗಿದೆ. ನಮ್ಮ ರಾಜ್ಯದ ಜಾತ್ಯತೀತ ಸಂರಚನೆಯನ್ನು ಹಾಳು ಮಾಡಲು ನಾವು ಬಿಡುವುದಿಲ್ಲ’ ಎಂದು ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಗೋವಾದ ಎಲ್ಲಾ 40 ವಿಧಾನಸಭಾ ಕ್ಷೇತ್ರಗಳಲ್ಲೂ ಸ್ಪರ್ಧಿಸುವುದಾಗಿ ಟಿಎಂಸಿ ಘೋಷಿಸಿತ್ತು. ಡಿ.5ರಂದು ಎಂಜಿಪಿ ಜೊತೆ ಮೈತ್ರಿ ಮಾಡಿಕೊಂಡಿತ್ತು.

ಬಿಜೆಪಿ: ದೇಣಿಗೆ ಅಭಿಯಾನ ಆರಂಭ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಬಿಜೆಪಿ ವಿಶೇಷ ದೇಣಿಗೆ ಅಭಿಯಾನ ಆರಂಭಿಸಿದೆ. ‘ದೇಶಕ್ಕೆ ಮೊದಲ ಆದ್ಯತೆ ನೀಡುವ ಪಕ್ಷವನ್ನು ಸದೃಢಗೊಳಿಸಲು ದೇಣಿಗೆ ನೀಡುವಂತೆ’ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಕರೆ ನೀಡಿದ್ದಾರೆ.

ಈ ಸಂಬಂಧ ಟ್ವಿಟರ್‌ನಲ್ಲಿ ಬರೆದುಕೊಂಡಿರುವ ನಡ್ಡಾ, ‘ಅಟಲ್ ಜೀ ಅವರ ಜನ್ಮದಿನವಾದ ಡಿಸೆಂಬರ್ 25ರಿಂದ, ದೀನ್ ದಯಾಳ್ ಜೀ ಅವರ ಪುಣ್ಯತಿಥಿ 2022ರ ಫೆಬ್ರವರಿ 11ರವರೆಗೆ ಬಿಜೆಪಿಯು ವಿಶೇಷ ದೇಣಿಗೆ ಅಭಿಯಾನಕ್ಕೆ ಚಾಲನೆ ನೀಡುತ್ತಿದೆ. ನಿಮ್ಮ ಬೆಂಬಲವು, ಯಾವಾಗಲೂ ದೇಶಕ್ಕೆ ಮೊದಲ ಆದ್ಯತೆ ನೀಡುವ ಪಕ್ಷವನ್ನು ಸದೃಢಗೊಳಿಸಲಿದೆ’ ಎಂದು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ₹ 1,000 ದೇಣಿಗೆ ನೀಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸುಳ್ಳು ಸುದ್ದಿ ನಂಬಬೇಡಿ : ರಾಮ್‌ರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮ್‌ರಾಜ್ ಕಾಟನ್ ಕಂಪನಿಯ ಹೆಸರು ಕೆಡಿಸುವ ಉದ್ದೇಶದಿಂದ ಕೆಲವರು ವಾಟ್ಸ್‌ಆ್ಯಪ್ ಮೂಲಕ ಸುಳ್ಳು ಸುದ್ದಿಗಳನ್ನು ಹರಿಬಿಡುತ್ತಿದ್ದು, ಅವುಗಳನ್ನು ನಂಬದೇ ಇರುವಂತೆ ಗ್ರಾಹಕರಲ್ಲಿ ಅದು ಮನವಿ ಮಾಡಿಕೊಂಡಿದೆ.

ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಉಡುಗೊರೆಯಾಗಿ ₹ 20 ಸಾವಿರ ಸಿಗುತ್ತದೆ ಎಂದು ವಾಟ್ಸ್‌ಆ್ಯಪ್ ಮೂಲಕ ಕೆಲವು ಲಿಂಕ್‌ಗಳನ್ನು ಹರಿಬಿಡಲಾಗುತ್ತಿದೆ. ಅದನ್ನು ನಂಬುವುದಾಗಲಿ, ಬೇರೆಯವರೊಂದಿಗೆ ಹಂಚಿಕೊಳ್ಳುವುದಾಗಲಿ ಮಾಡಬೇಡಿ. ಅದಕ್ಕೂ ನಮಗೂ ಸಂಬಂಧ ಇಲ್ಲ ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದೆ.

ಲುಧಿಯಾನ: ಬಾಂಬ್ ಇಟ್ಟಿದ್ದು ಮಾಜಿ ಪೊಲೀಸ್!

ಚಂಡೀಗಡ (ಪಿಟಿಐ): 'ಲುಧಿಯಾನ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಸಂಭವಿಸಿದ ಸ್ಫೋಟ ಪ್ರಕರಣದಲ್ಲಿ ಮೃತಪಟ್ಟ ಮಾಜಿ ಹೆಡ್ ಕಾನ್‌ಸ್ಟೆಬಲ್ ಗಗನ್‌ದೀಪ್ ಸಿಂಗ್ (31) ಅವರೇ ಬಾಂಬ್ ಜೋಡಿಸಲು ಶೌಚಾಲಯಕ್ಕೆ ಹೋಗಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪಂಜಾಬ್ ಡಿಜಿಪಿ ಸಿದ್ಧಾರ್ಥ್ ಚಟ್ಟೋಪಾಧ್ಯಾಯ ತಿಳಿಸಿದರು.

'ಗಗನ್‌ದೀಪ್ 2019ರಲ್ಲಿಯೇ ಸೇವೆಯಿಂದ ವಜಾಗೊಂಡಿದ್ದರು. ಸ್ಫೋಟ ಸಂಭವಿಸಿದಾಗ ಶೌಚಾಲಯದಲ್ಲಿ ಇದ್ದಿದ್ದು ಅವರೊಬ್ಬರೆ. ಭಯೋತ್ಪಾದಕ ಸಂಘಟನೆಗಳೊಂದಿಗೆ ಮತ್ತು ಮಾದಕ ವಸ್ತುಗಳ ಸಾಗಣೆದಾರರ ಜತೆಗೆ ಸಂಪರ್ಕ ಹೊಂದಿದ್ದರು ಎಂಬುದು ಗೊತ್ತಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮುಂಬೈ ಧಾರಣೆ

ಶೇಂಗಾ

25-12-2021

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9850
ದಪ್ಪ ಗುಜರಾತ್(ಹೊಸ)	8900-8950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1310 (1280)
ಒಂದು ವಾರದ ಡೆಲಿವರಿ	1305 (1275)
ಸೋಯಾ ಕಚ್ಚಾ	1140 (1135)
ಪಾಮ್ ವಾರದ ಡೆಲಿವರಿ	1140 (1133)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,400 (48,150)
ಬೆಳ್ಳಿ ಕೆ.ಜಿ	62,000 (61,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'₹ 6.9 ಲಕ್ಷ ಕೋಟಿಗೆ ತಲುಪಲಿದೆ ದೇಶಿ ಎಲೆಕ್ಟ್ರಾನಿಕ್ಸ್ ಉದ್ಯಮ'

ನವದೆಹಲಿ (ಪಿಟಿಐ): ಸ್ವಾವಲಂಬಿ ಭಾರತ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಘೋಷಿಸಿರುವ ನೀತಿಯಿಂದಾಗಿ ದೇಶಿ ಎಲೆಕ್ಟ್ರಾನಿಕ್ಸ್ ತಯಾರಿಕಾ ಉದ್ಯಮವು ಮುಂದಿನ ಹಣಕಾಸು ವರ್ಷದಲ್ಲಿ ಶೇ 30ರಷ್ಟು ಬೆಳವಣಿಗೆ ಕಾಣಲಿದ್ದು, ಉದ್ಯಮದ ಮೌಲ್ಯವು ₹ 6.9 ಲಕ್ಷ ಕೋಟಿಗಳಿಗೆ ತಲುಪಲಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾರತದಿಂದ ಎಲೆಕ್ಟ್ರಾನಿಕ್ಸ್ ರಫ್ತು ಶೇ 50ರಷ್ಟು ಹೆಚ್ಚಿಸುವ ಗುರಿಯನ್ನು ಸಚಿವಾಲಯ ಹೊಂದಿದೆ. ಇದಕ್ಕಾಗಿ ಧರಿಸಬಲ್ಲ ಸಾಧನಗಳಿಗೆ ಉತ್ತೇಜಿಸಲು ಮತ್ತು ಐ.ಟಿ. ಹಾರ್ಡ್‌ವೇರ್ ತಯಾರಕರಿಗೆ ನೀಡುತ್ತಿರುವ ಪ್ರೋತ್ಸಾಹವನ್ನು ಹೆಚ್ಚಿಸಲು ₹ 22 ಸಾವಿರ ಕೋಟಿ ಮೊತ್ತದ ತಯಾರಿಕೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯನ್ನು ಪ್ರಸ್ತಾಪಿಸಿದೆ. ಜಾಗತಿಕ ಎಲೆಕ್ಟ್ರಾನಿಕ್ಸ್ ಪೂರೈಕೆ ವ್ಯವಸ್ಥೆಯಲ್ಲಿ ಉನ್ನತ ಸ್ಥಾನಕ್ಕೆ ಏರಲು ಕೇಂದ್ರ ಸರ್ಕಾರವು ಸತತ ಪ್ರಯತ್ನ ನಡೆಸುತ್ತಿದೆ. ಧರಿಸಬಹುದಾದ ವಸ್ತುಗಳು ಮತ್ತು ಐಟಿ ಹಾರ್ಡ್‌ವೇರ್‌ಗಾಗಿ ಹೊಸ ನೀತಿಗಳು ಮತ್ತು ಪ್ರೋತ್ಸಾಹಕ ಯೋಜನೆಗಳನ್ನು ತರುವ ನಿರೀಕ್ಷೆಯಿದೆ ಎಂದಿದ್ದಾರೆ.

ಚೀನಾದ ಕಂಪನಿಗಳು ಭಾರತದ ಮಾರುಕಟ್ಟೆ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮಾತ್ರವೇ ಗಮನ ಹರಿಸುತ್ತಿದ್ದು, ಪಿಎಲ್‌ಐ ಯೋಜನೆಯಲ್ಲಿ ಭಾಗವಹಿಸಿಲ್ಲ. ಭಾರತದ ಕಂಪನಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

'ಇಂಡಿಯಾ ಸೆಲ್ಯುಲರ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್' (ಐಸಿಇಎ) ಪ್ರಕಾರ, ಆ್ಯಪಲ್, ಫಾಕ್ಸ್‌ಕಾನ್, ವಿಸ್ಟ್ರಾನ್, ಲಾವಾ ಮತ್ತು ವಿವೊ ಮೊಬೈಲ್ ಫೋನ್ ಒಳಗೊಂಡಂತೆ ಅದರ ಸದಸ್ಯ ಕಂಪನಿಗಳ ಒಟ್ಟಾರೆ ತಯಾರಿಕಾ ಮೌಲ್ಯವು 2020-21ರಲ್ಲಿ ₹ 2.2 ಲಕ್ಷ ಕೋಟಿಗಳಿಗೆ ತಲುಪಿದೆ. ಇದು 2022ರ ಮಾರ್ಚ್ ವೇಳೆಗೆ ₹ 2.75 ಲಕ್ಷ ಕೋಟಿಗಳಿಗೆ ಏರಿಕೆ ಆಗುವ ನಿರೀಕ್ಷೆ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ದೋಣಿ ಮುಗುಚಿ 16 ಜನರ ಸಾವು

ಅಥೆನ್ಸ್ (ಎಎಫ್‌ಪಿ): ವಲಸಿಗರಿದ್ದ ದೋಣಿ ಮುಗುಚಿ ಕನಿಷ್ಠ 16 ಮಂದಿ ಮೃತಪಟ್ಟಿದ್ದಾರೆ. ಮೂರು ದಿನಗಳಿಂದ ಈ ಭಾಗದಲ್ಲಿ ಸಂಭವಿಸಿದ ಸರಣಿ ದೋಣಿಗಳ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 30ಕ್ಕೆ ಏರಿದೆ..

ಮಗುಚಿಕೊಂಡಿದ್ದ ದೋಣಿಯಲ್ಲಿದ್ದ 63 ಜನರನ್ನು ಇದುವರೆಗೂ ರಕ್ಷಿಸಲಾಗಿದೆ. ಬದುಕಿ ಉಳಿದವರ ಪ್ರಕಾರ, ಇಟಲಿ ಮೂಲದ ಬೃಹತ್ ದೋಣಿಯಲ್ಲಿ ಕನಿಷ್ಠ 80 ಜನರಿದ್ದರು.

ಕ್ರಿಸ್‌ಮಸ್ ಪ್ರಾರ್ಥನೆ ಪೋಪ್ ಫ್ರಾನ್ಸಿಸ್ ಭಾಗಿ

ರೋಮ್ (ಎಪಿ): ಪೋಪ್ ಫ್ರಾನ್ಸಿಸ್ ಅವರು ಕ್ರಿಸ್‌ಮಸ್ ಮುನ್ನಾದಿನವಾದ ಶುಕ್ರವಾರ ಇಲ್ಲಿನ ಸೇಂಟ್ ಪೀಟರ್ ಬೆಸಿಲಿಕಾದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. 2,000 ಮಂದಿ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.

ಪೋಪ್ ಅವರು ಚರ್ಚ್‌ಗೆ ಆಗಮಿಸುತ್ತಿದ್ದಂತೆಯೇ ಸಾಮೂಹಿಕ ಪ್ರಾರ್ಥನೆ ಶುರುವಾಯಿತು. ಪೋಪ್ ಅವರು ಕಾರ್ಯಕ್ರಮದುದ್ದಕ್ಕೂ ಮಾಸ್ಕ್ ಧರಿಸಿರಲಿಲ್ಲ. ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಜೀಸಸ್ ಅವರು ಸೂಕ್ತವಾದ ಕೊಟ್ಟಿಗೆಯೂ ಇಲ್ಲದ ಸ್ಥಿತಿಯಲ್ಲಿ ಬಡವರಾಗಿ ಜಗತ್ತಿಗೆ ಬಂದರು ಎಂದು ಹೇಳಿದ ಅವರು, ಜನತೆಗೆ ತಮ್ಮ ಮೇಲೆ ತಾವು ನಂಬಿಕೆ ಹೊಂದಿರಬೇಕು' ಎಂದರು.

ಅಂತರರಾಷ್ಟ್ರೀಯ ಗಮನಸೆಳೆದ ದ್ವೇಷ ಭಾಷಣ

ನ್ಯೂಯಾರ್ಕ್: ಭಾರತದ ಉತ್ತರಾಖಂಡದ ಹರಿದ್ವಾರದಲ್ಲಿ ನಡೆದಿದ್ದ 'ಧರ್ಮ ಸಂಸದ್'ನಲ್ಲಿ ಕೇಳಿಬಂದಿದ್ದ ಜನಾಂಗೀಯ ದ್ವೇಷ ಭಾಷಣಗಳು ಈಗ ಅಂತರರಾಷ್ಟ್ರೀಯ ಮಟ್ಟದ ಗಮನ ಸೆಳೆದಿದ್ದು, ನ್ಯೂಯಾರ್ಕ್ ಟೈಮ್ಸ್ ಈ ಕುರಿತು ವರದಿ ಮಾಡಿದೆ.

'ಸಂವಿಧಾನ ಬದ್ಧ ಜಾತ್ಯಾತೀತ ರಾಷ್ಟ್ರವನ್ನು ಹಿಂದೂ ರಾಷ್ಟ್ರವಾಗಿ ಮಾಡುತ್ತೇವೆ. ಅಗತ್ಯಬಿದ್ದರೆ ಇದಕ್ಕೆ ಪ್ರಾಣನೀಡಲು ಮತ್ತು ತೆಗೆಯಲೂ ಸಿದ್ಧರಿದ್ದೇವೆ ಎಂದು ಹಿಂದೂ ಕಾರ್ಯಕರ್ತರು ಮತ್ತು ಸನ್ಯಾಸಿಗಳು ಪ್ರತಿಜ್ಞೆ ಮಾಡಿದ್ದಾರೆ' ಎಂದು ವರದಿ ಹೇಳಿದೆ.

'ಆ ಸಮುದಾಯದ 20 ಲಕ್ಷ ಮಂದಿಯನ್ನು ಕೊಲ್ಲಲು ನಾವು ನೂರು ಮಂದಿ ಸಿದ್ಧರಿದ್ದರೆ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿಸಲು ಸಾಧ್ಯ' ಎಂದು ಹಿಂದೂ ಮಹಾಸಭಾ ನಾಯಕಿ ಪೂಜಾ ಶಕುನ್ ಪಾಂಡೆ ವೇದಿಕೆಯಲ್ಲಿ ಹೇಳಿದ್ದಾರೆ.

ಜಿಎಸ್‌ಟಿ ದರ ಶೇ 5ರಿಂದ ಶೇ 12ಕ್ಕೆ ಏರಿಕೆ ಪರಿಣಾಮ

ಜ.1ರಿಂದ ಪಾದರಕ್ಷೆ, ಬಟ್ಟೆ ದುಬಾರಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದರಕ್ಷೆ ಮತ್ತು ಜವಳಿ ಮೇಲಿನ ಜಿಎಸ್‌ಟಿ ದರವು ಜನವರಿ 1ರಿಂದ ಶೇ 12ಕ್ಕೆ ಏರಿಕೆ ಆಗಲಿದೆ. ಇದರಿಂದಾಗಿ ಪಾದರಕ್ಷೆ ಮತ್ತು ಬಟ್ಟೆಗಳ ಮಾರಾಟ ದರವೂ ಹೆಚ್ಚಾಗುವ ಸಾಧ್ಯತೆ ಇದೆ.

ಪಾದರಕ್ಷೆ ಮತ್ತು ಜವಳಿ ಮೇಲೆ ಶೇ 5 ರಷ್ಟು ಇದ್ದ ಜಿಎಸ್‌ಟಿ ದರವನ್ನು ಶೇ 12ಕ್ಕೆ ಹೆಚ್ಚಿಸುವ ಕುರಿತು ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಈಚೆಗಷ್ಟೇ ಅಧಿಸೂಚನೆ ಹೊರಡಿಸಿದೆ.

ಕೋವಿಡ್ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಒಳಗಾಗಿದ್ದ ಪಾದರಕ್ಷೆಗಳ ವ್ಯಾಪಾರ ಈಗಷ್ಟೇ ಚೇತರಿಕೆಯತ್ತ ಮುಖ ಮಾಡಿದೆ. ಆದರೆ, ಜಿಎಸ್‌ಟಿ ಹೆಚ್ಚಳದಿಂದ ವ್ಯಾಪಾರಕ್ಕೆ ಮತ್ತೆ ಹಿನ್ನಡೆ ಉಂಟಾಗಲಿದೆ. ₹ 1000ಕ್ಕಿಂತ ಕಡಿಮೆ ಬೆಲೆಯ ಪಾದರಕ್ಷೆಗಳನ್ನು ಖರೀದಿಸುವವರ ಪ್ರಮಾಣವೇ ಶೇ 75 ರಿಂದ ಶೇ 80ರಷ್ಟು ಇದ್ದು, ಇವರಿಗೆ ಹೊರೆಯಾಗಲಿದೆ ಎಂದು ಕರ್ನಾಟಕ ಫುಟ್‌ವೇರ್ ಹೋಲ್‌ಸೇಲರ್ಸ್ ಅಸೋಸಿಯೇಷನ್ ತಿಳಿಸಿದೆ.

ಸದ್ಯ ₹ 1000ಕ್ಕಿಂತ ಕಡಿಮೆ ಬೆಲೆಯ ಪಾದರಕ್ಷೆಗಳಿಗೆ ಶೇ 5ರಷ್ಟು ಹಾಗೂ ₹ 1000 ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ಪಾದರಕ್ಷೆಗಳಿಗೆ ಶೇ 12ರಷ್ಟು ಜಿಎಸ್‌ಟಿ ಇದೆ.

ದೇಶದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಸುವಲ್ಲಿ ಕೃಷಿ ವಲಯದ ನಂತರದ ಸ್ಥಾನ ಜವಳಿ ಉದ್ಯಮಕ್ಕಿದೆ. ಕೊರೊನಾ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಒಳಗಾಗಿರುವ ವಲಯಗಳಲ್ಲಿ ಜವಳಿ ವಲಯವೂ ಸೇರಿಕೊಂಡಿದೆ. ಜಿಎಸ್‌ಟಿ ಹೆಚ್ಚಳದಿಂದ ಬೇಡಿಕೆ ಇನ್ನಷ್ಟು ಕಡಿಮೆ ಆಗಿ ವ್ಯಾಪಾರಿಗಳು ಬಾಗಿಲು ಮುಚ್ಚಬೇಕಾದ ಪರಿಸ್ಥಿತಿ ನಿರ್ಮಾಣ ಆಗಲಿದೆ ಎಂದು ಚಿಕ್ಕಪೇಟೆಯಲ್ಲಿ ಜವಳಿ ವ್ಯಾಪಾರಿ ನಡೆಸುತ್ತಿರುವ ಟ್ರೇಡ್ ಆ್ಯಕ್ಟಿವಿಸ್ಟ್ ಸಜ್ಜನ್ ರಾಜ್ ಮೆಹ್ತಾ ಹೇಳಿದರು.

'ನಿರ್ಧಾರ ಹಿಂದಕ್ಕೆ ಪಡೆಯಿರಿ'

ಜವಳಿ ಉದ್ಯಮದ ಮೇಲಿನ ಜಿಎಸ್‌ಟಿ ಹೆಚ್ಚಿಸುವ ನಿರ್ಧಾರಕ್ಕೆ ಬೆಂಗಳೂರು ಸಗಟು ಬಟ್ಟೆ ವ್ಯಾಪಾರಿಗಳ ಸಂಘ ವಿರೋಧ ವ್ಯಕ್ತಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಸಂಘದ ಅಧ್ಯಕ್ಷ ಪ್ರಕಾಶ್ ಪಿರ್‌ಗಲ್, 'ತೆರಿಗೆಯನ್ನು ಏಕಾಏಕಿ ಶೇ 140ರಷ್ಟು ಹೆಚ್ಚಿಸಿ ಜವಳಿ ಉದ್ಯಮಕ್ಕೆ, ವ್ಯಾಪಾರಿಗಳಿಗೆ ಮತ್ತು ಜನತೆಗೆ ತೊಂದರೆ ನೀಡಲು ಸರ್ಕಾರ ಮುಂದಾಗಿದೆ. ದರ ಹೆಚ್ಚಳ ಕ್ರಮವನ್ನು ಹಿಂಪಡೆದು, ಈಗಿರುವ ದರವನ್ನೇ ಮುಂದುವರೆಸಬೇಕು' ಎಂದು ಒತ್ತಾಯಿಸಿದರು.

ಕೊರೊನಾ ಸಾಂಕ್ರಾಮಿಕದಿಂದಾಗಿ ಎರಡು ವರ್ಷದಿಂದ ಜವಳಿ ವಹಿವಾಟು ಶೇ 50ಕ್ಕೆ ಕುಸಿದಿದೆ. ಕಚ್ಚಾವಸ್ತುಗಳ ದರ ಏರಿಕೆಯೂ ಉದ್ದಿಮೆಗೆ ಹೊಡೆತ ನೀಡಿದೆ. ಈ ಸ್ಥಿತಿಯಲ್ಲಿ ತೆರಿಗೆ ಹೆಚ್ಚಿಸಿದರೆ ವ್ಯಾಪಾರ ಪೂರ್ಣ ನೆಲಕಚ್ಚಲಿದೆ. ಉದ್ದಿಮೆಗಳನ್ನು ಮುಚ್ಚುವ ಸಂದರ್ಭ ಎದುರಾಗಿ, ಲಕ್ಷಾಂತರ ನೌಕರರು ಉದ್ಯೋಗ ಕಳೆದುಕೊಳ್ಳುವ ಸಾಧ್ಯತೆ ಇದೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಬಾಹ್ಯಾಕಾಶ ದೂರದರ್ಶಕ 'ಜೇಮ್ಸ್ ವೆಬ್' ಉಡಾವಣೆ

ಕುರು (ಫ್ರೆಂಚ್ ಗಯಾನಾ) (ಎಎಫ್‌ಪಿ): ವಿಶ್ವದ ಅತ್ಯಂತ ಶಕ್ತಿಶಾಲಿ ಬಾಹ್ಯಾಕಾಶ ದೂರದರ್ಶಕ ಎನ್ನಲಾಗಿರುವ ನಾಸಾದ 'ಜೇಮ್ಸ್ ವೆಬ್' ದೂರದರ್ಶಕವನ್ನು ಫ್ರೆಂಚ್ ಗಯಾನಾದ ಕುರು ಉಪಗ್ರಹ ಉಡಾವಣಾ ಕೇಂದ್ರದಿಂದ ಶನಿವಾರ ಉಡಾಯಿಸಲಾಯಿತು.

ಇದು ಭೂಮಿಯಿಂದ 15 ಲಕ್ಷ ಕಿ.ಮೀ (9,30,000 ಮೈಲು) ದೂರದ ಕಕ್ಷೆ ಸೇರುವ ಗುರಿ ಹೊಂದಿದೆ. ಈ ದೂರದರ್ಶಕವು ಬಲಿಷ್ಠ 'ಏರಿಯನ್ 5' ರಾಕೆಟ್‌ನೊಂದಿಗೆ ಪ್ರಯಾಣ ಬೆಳೆಸಿದ್ದು, ಒಂದು ತಿಂಗಳಲ್ಲಿ ತನ್ನ ಗಮ್ಯ ಸ್ಥಾನ ತಲುಪಲಿದೆ. ಹಬಲ್ ದೂರದರ್ಶಕಕ್ಕಿಂತ ಹಲವು ಪಟ್ಟು ಶಕ್ತಿಶಾಲಿಯಾಗಿರುವ ಇದು, ವಿಶ್ವ ಹೇಗೆ ಉಗಮವಾಯಿತು ಎಂಬುದನ್ನು ತಿಳಿಯಲು ನೆರವಾಗಲಿದೆ. ನಾವು ಈವರೆಗೆ ನೋಡಿರುವ ಗೆಲಾಕ್ಸಿಗಳಿಗಿಂತಲೂ ಬಹುದೂರವಿರುವ ಗೆಲಾಕ್ಸಿಗಳನ್ನು ಇದು ಸೆರೆ ಹಿಡಿಯುವ ಸಾಮರ್ಥ್ಯ ಹೊಂದಿದೆ.

'ಜೇಮ್ಸ್ ವೆಬ್' ಅನ್ನು ಫ್ರೆಂಚ್ ಗಯಾನಾದ ಕುರು ಉಪಗ್ರಹ ಉಡಾವಣಾ ಕೇಂದ್ರದಿಂದ ಶನಿವಾರ ಉಡಾಯಿಸಲಾಯಿತು — ಎಎಫ್‌ಪಿ ಚಿತ್ರ

ರಾಮನಗರ ರೇಷ್ಮೆ

ಮಿಶ್ರತಳಿ	₹223-702
ದ್ವಿತಳಿ	₹222-828

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಮೂಡಿಗೆರೆ ಕಾಫಿ

(50 ಕೆಜಿಗೆ)

ಎಪಿ	₹15500
ಎಸಿ	₹7000
ಆರ್‌ಪಿ	₹6300
ಆರ್‌ಸಿ	₹3900

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1300 (1270)
ಸೋಯಾ (ರಿಫೈನ್ಡ್)	₹1180 (1177)
ಸೂರ್ಯಕಾಂತಿ (ರಿಫೈನ್ಡ್)	₹1250 (1250)
ಪಾಮೋಲಿನ್	₹1142 (1135)

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪುರಸಭಾ ಕಾರ್ಯಾಲಯ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.

Phone: 08199-230221, E-mail: tmchosdurga@yahoo.com
Helpline 080-23108108, website: www.hosadurgatown.gov.in

ಕ್ರಮಾಂಕ: ಪುಸಹೊ/ಆ.ಶಾ./ಸಿಆರ್-94/2021-22 ದಿನಾಂಕ: 23.12.2021

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೊಳಪಟ್ಟು ಅರ್ಜಿ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ-2000ರ ಪ್ರಕಾರ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಸೇವೆಗಳಿಗೆ ಅರ್ಹ Firm/Organization/NGO/Consultany/Contractor ರವರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ದಿನಾಂಕ: 07.01.2022ರ ಸಂಜೆ 05:30 ಗಂಟೆಯವರೆಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnatka.gov.inನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.hosadurgatown.gov.in ಮತ್ತು http://eproc.karnatka.gov.in ಹಾಗೂ ಕಛೇರಿ ಸೂಚನಾ ಫಲಕದಲ್ಲಿ ಹಾಕಲಾಗಿರುತ್ತದೆ ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ವಿವರ: Supply of Laboursfor Processing and Disposal Facility (Landfill Site) on outsource basis to TMC, Hosadurga Indent No.: TMC/HSD/HEALTH SECTION/LAB-94/2021-22 ಅಂದಾಜು ಮೊತ್ತ: ರೂ. 19,58,500/-. ಇಎಂಡಿ ಮೊತ್ತ: ರೂ. 48962.50/- (ವಿನಾಯಿತಿ ಕೋರಿದ್ದಲ್ಲಿ ವಿನಾಯಿತಿ ಪತ್ರ ಲಗತ್ತಿಸುವುದು). ನಿಗದಿಪಡಿಸಿದ ಕಾಲಾವಧಿ: ವಾರ್ಷಿಕ. ಭಾಗವಹಿಸುವವರ ವಿವರ: Firm/Organization/NGO/Consultany/Contractor. ಷರತ್ತುಗಳು: ಸದರಿ ಟೆಂಡರ್ ಬಗ್ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnatka.gov.in) ಸಂಪರ್ಕಿಸಬಹುದಾಗಿದೆ.

ಸಹಿ/- ಮುಖ್ಯಾಧಿಕಾರಿ,
ಪುರಸಭೆ, ಹೊಸದುರ್ಗ.

RO No. 673: DIPR/CTA/MCA/2021-22

OFFICE OF ASSISTANT PROVIDENT FUND COMMISSIONER/ RECOVERY OFFICER
EMPLOYEES PROVIDENT FUND ORGANISATION
REGIONAL OFFICE, BENGALURU (KORAMANGALA),
ANNAPOORNESHWARI COMPLEX, NO.37/1, 6th MAIN, SINGASANDRA, BANGALORE-560068.
Email Id: ro.koramangala@epfindia.gov.in

Whereas the recovery proceedings in accordance with the provisions of Section 8B to Section 8G of the Employees' Provident Funds and Miscellaneous Provisions Act, 1952, against the establishment **M/s DESIGN APPARELS PVT. LTD.** are going before the undersigned for non-payment of statutory dues.

And, despite the fact that the department has been unable to serve notice(s) on the below-said establishment and/or the employer. Therefore, this notice is hereby published that the below said employer is advised to appear before the undersigned on or before December 31st, 2021, at the address mentioned above.

Name, Address of the Establishment & PF Code Number	Name & Address of the Employer / Partner/ Director / Occupier
M/s DESIGN APPARELS PVT LTD, #180/4, T Govindappa Complex, Whitefield Main Road, B Narayanpura, Doorvani Nagar Post, Bengaluru - 560 016. PYBOM/34197	**Shri Prabhakar V Shetty,** Director, S/o Vittal Shetty, #156, Ramamurthy Nagar, Ambedkar Nagar, 1st Main Road, 5th Cross, Bengaluru East, Bengaluru - 560 016.

Any person having information about the whereabouts of the establishment and/or employer of the establishment mentioned above may transmit the information by post or by email or in person to the Employees' Provident Fund Organisation at the address mentioned above, on or before December 31st, 2021.

Sd/- [NAVEEN EMMANUEL]
Assistant PF Commissioner & Recovery Officer
RO, Bengaluru (Koramangala).

ಕುಸಿದು ಬಿದ್ದು ಹಾಕಿಪಟು ಸಾವು

ನಾಪೋಕ್ಲು (ಕೊಡಗು): ಸಮೀಪದ ಮೂರ್ನಾಡು ಗ್ರಾಮದ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ ಕೊಡವ ಕುಟುಂಬಗಳ ಚೌರೀರ ಕಪ್ ಹಾಕಿ ಟೂರ್ನಿಯಲ್ಲಿ ಪಂದ್ಯ ನಡೆಯುತ್ತಿದ್ದಾಗಲೇ ಹಾಕಿ ಆಟಗಾರ ಸೋಮಣ್ಣ (23) ಹೃದಯಾಘಾತದಿಂದ ಕುಸಿದು ಬಿದ್ದು ಮೃತಪಟ್ಟರು.

ಸೋಮಣ್ಣ

ಅವರು ಬಲಮುರಿ ಗ್ರಾಮದ ತೊತ್ತಿಯಂಡ ವಿಠಲ್ ದೇವಯ್ಯ ಅವರ ಪುತ್ರ. ಬಟ್ಟಿರ ಹಾಗೂ ತೊತ್ತಿಯಂಡ ತಂಡಗಳ ನಡುವೆ ನಡೆಯುತ್ತಿದ್ದ ಪಂದ್ಯದ ವೇಳೆ ಈ ಅವಘಡ ನಡೆಯಿತು.

ಏಷ್ಯಾ ಕಪ್: ಪಾಕ್ ತಂಡಕ್ಕೆ ಜಯ

ದುಬೈ (ಪಿಟಿಐ): ಜೀಶನ್ ಜಮೀರ್ (60ಕ್ಕೆ5) ಬೌಲಿಂಗ್ ಮತ್ತು ಮೊಹಮ್ಮದ್ ಶೆಹಜಾದ್ (81; 105ಎ) ಉತ್ತಮ ಬ್ಯಾಟಿಂಗ್ ಬಲದಿಂದ ಪಾಕಿಸ್ತಾನ ತಂಡ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತದ ಎದುರು 2 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಭಾರತ: 49 ಓವರ್‌ಗಳಲ್ಲಿ 237 (ಹರ್ನೂರ್ ಸಿಂಗ್ 46, ಆರಾಧ್ಯ ಯಾದವ್ 50, ರಾಜ್ ಬಾವಾ 25, ಕೌಶಲ್ ತಾಂಬೆ 32, ರಾಜವರ್ಧನ್ ಹಂಗರ್ಗೇಕರ್ 33; ಜೀಶನ್ ಜಮೀರ್ 60ಕ್ಕೆ5, ಅವಾಸ್ ಅಲಿ 43ಕ್ಕೆ2), **ಪಾಕಿಸ್ತಾನ:** 50 ಓವರ್‌ಗಳಲ್ಲಿ 8ಕ್ಕೆ 240 (ಮೊಹಮ್ಮದ್ ಶೆಹಜಾದ್ 81, ಖಾಸೀಂ ಅಕ್ರಂ 22, ಇರ್ಫಾನ್ ಖಾನ್ 32, ರಿಜ್ವಾನ್ ಮೆಹಮೂದ್ 29, ಅಹಮದ್ ಖಾನ್ 29, ರಾಜ್ ಭಾವಾ 56ಕ್ಕೆ4) ಫಲಿತಾಂಶ: ಪಾಕಿಸ್ತಾನ 19 ವರ್ಷದೊಳಗಿನವರ ತಂಡಕ್ಕೆ 2 ವಿಕೆಟ್ ಜಯ.

ಇಲಿಂಗ್ವರ್ಥ್ ನಿಧನ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ರೇ ಇಲಿಂಗ್ವರ್ಥ್ (89) ಶನಿವಾರ ನಿಧನರಾದರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರನ್ನು ರೇಡಿಯೊಥೆರಪಿಗೆ ಒಳಪಡಿಸಲಾಗಿತ್ತು. 1958ರಿಂದ 1973ರ ಅವಧಿಯಲ್ಲಿ 61 ಟೆಸ್ಟ್ ಪಂದ್ಯಗಳನ್ನು ಆಡಿದ್ದ ಅವರು 31 ಪಂದ್ಯಗಳಲ್ಲಿ ನಾಯಕನಾಗಿದ್ದರು.

ರೇ ಇಲಿಂಗ್ವರ್ಥ್

ಪ್ರೊ ಕಬಡ್ಡಿ: ಪ್ರದೀಪ್ ಮಿಂಚು

ಬೆಂಗಳೂರು: ಪ್ರೊ ಕಬಡ್ಡಿ ಟೂರ್ನಿಯಲ್ಲಿ ಶನಿವಾರ ನಡೆದ ಮೂರೂ ಪಂದ್ಯಗಳಲ್ಲಿ ರೋಚಕ ಫಲಿತಾಂಶ ಹೊರಹೊಮ್ಮಿತು. ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಲೀಗ್‌ನ ಮೊದಲ ಪಂದ್ಯದಲ್ಲಿ ಯು.ಪಿ ಯೋಧಾ ತಂಡ 36-35ರಿಂದ ಪಟ್ನಾ ಪೈರೆಟ್ಸ್ ವಿರುದ್ಧ ಜಯಿಸಿತು.

ಎರಡನೇ ಪಂದ್ಯದಲ್ಲಿ ಪುಣೇರಿ ಪಲ್ಟನ್ 34-33ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು. ಮೂರನೇ ಪಂದ್ಯ ಕೂಡ ಅಂತಿಮ ಕ್ಷಣದ ವರೆಗೂ ಕುತೂಹಲ ಉಳಿಸಿಕೊಂಡಿತು. 40-38ರಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಹರಿಯಾಣ ಸ್ಟೀಲರ್ಸ್ ಎದುರು ಗೆಲುವು ಸಾಧಿಸಿತು.

ಮೊದಲ ಪಂದ್ಯದಲ್ಲಿ ಯುಪಿ ಯೋಧಾ ಮತ್ತು ಪಟ್ನಾ ಪೈರೆಟ್ಸ್ ತಂಡಗಳು ಆರಂಭದಿಂದ ಕೊನೆಯ ವರೆಗೂ ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು.

ಅರ್ಧವಿರಾಮದ ವೇಳೆಗೆ ಪಟ್ನಾ ತಂಡವು 20-17ರ ಮುನ್ನಡೆಯಲ್ಲಿತ್ತು. ವಿರಾಮದ ನಂತರ ಪ್ರದೀಪ್ ನರ್ವಾಲ್ ಆರ್ಭಟ ಹೆಚ್ಚಿತು. ಅದರಿಂದಾಗಿ ಪಂದ್ಯವು ರೋಚಕತೆಯ ತುತ್ತತುದಿಗೆ ಮುಟ್ಟಿತು. ರೇಡರ್ ಪ್ರದೀಪ್ 12 ಅಂಕಗಳನ್ನು ಗಳಿಸಿದರು. ಅದರಲ್ಲಿ ಮೂರು ಬೋನಸ್ ಅಂಕಗಳು ಸೇರಿವೆ. ರಕ್ಷಣಾ ವಿಭಾಗದಲ್ಲಿ ಮಿಂಚಿದ ಸುಮಿತ್ ತಂಡಕ್ಕೆ ಆರು ಅಂಕಗಳ ಕಾಣಿಕೆ ನೀಡಿದರು.

ಎರಡನೇ ಪಂದ್ಯದಲ್ಲಿ ಅಸ್ಲಂ ಇನಾಂದಾರ್ ಎಂಟು ಅಂಕ ಮತ್ತು ಅಭಿನೇಶ್ ನಾದರಾಜನ್ ಐದು ಅಂಕಗಳನ್ನು ಗಳಿಸಿ ಪುಣೇರಿಗೆ ಬಲ ತುಂಬಿದರು. ಸಮಬಲದ ಪೈಪೋಟಿಯೊಡ್ಡಿದ ಟೈಟನ್ಸ್ ತಂಡದ ಸಿದ್ಧಾರ್ಥ್ ದೇಸಾಯಿ 15 ಅಂಕಗಳನ್ನು ಗಳಿಸುವ ಮೂಲಕ ಮಿಂಚಿದರು. ಅವರ ಚುರುಕಿನ ದಾಳಿಯಿಂದಾಗಿ ಒಂದು ಹಂತದಲ್ಲಿ ತಂಡವು ವಿಜಯದತ್ತ ವಾಲಿತ್ತು. ಆದರೆ ಪುಣೇರಿಯ ಆಲ್‌ರೌಂಡ್ ಆಟಕ್ಕೆ ಜಯ ಒಲಿಯಿತು.

ಅರ್ಜುನ್ ದೇಶ್ವಾಲ್ ಆಟದ ಸೊಗಸು: 11 ಟಚ್ ಪಾಯಿಂಟ್ ಸೇರಿದಂತೆ ಒಟ್ಟು 18 ಪಾಯಿಂಟ್ ಕಲೆ ಹಾಕಿದ ಅರ್ಜುನ್ ದೇಶ್ವಾಲ್ ಮತ್ತು ಒಂದು ಬೋನಸ್ ಪಾಯಿಂಟ್‌ನೊಂದಿಗೆ 10 ಪಾಯಿಂಟ್ ಗಳಿಸಿದ ದೀಪಕ್ ಹೂಡಾ ಅವರ ಸೊಗಸಾದ ಆಟದ ಬಲದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ಜಯ ಗಳಿಸಿತು. ಹರಿಯಾಣ ಪರ ವಿಕಾಸ್ ಖಂಡೋಲ 14 ಪಾಯಿಂಟ್ ಗಳಿಸಿದರು.

vivo PRO KABADDI

ಇಂದಿನ ಪಂದ್ಯ (ರಾತ್ರಿ)

ಗುಜರಾತ್ ಜೈಂಟ್ಸ್ Vs ದಬಂಗ್ ಡೆಲ್ಲಿ — 7.30
ಬೆಂಗಳೂರು ಬುಲ್ಸ್ Vs ಬೆಂಗಾಲ್ ವಾರಿಯರ್ಸ್ — 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಯುಪಿ ಯೋಧಾ ಮತ್ತು ಪಟ್ನಾ ಪೈರೆಟ್ಸ್ ತಂಡಗಳ ನಡುವಣ ಹಣಾಹಣಿ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	2	2	-	-	10
ಬೆಂಗಾಲ್ ವಾರಿಯರ್ಸ್	2	2	-	-	10
ಯು ಮುಂಬಾ	2	1	1	-	6
ಗುಜರಾತ್ ಜೈಂಟ್ಸ್	2	1	1	-	6
ಪಟ್ನಾ ಪೈರೇಟ್ಸ್	2	1	1	-	6
ಯು.ಪಿ.ಯೋಧಾ	2	1	1		6
ಜೈಪುರ ಪಿಂಕ್ ಪ್ಯಾಂಥರ್ಸ್	2	1	1		6
ಬೆಂಗಳೂರು ಬುಲ್ಸ್	2	1	1		5
ಪುಣೇರಿ ಪಲ್ಟನ್	2	1	1		5
ತೆಲುಗು ಟೈಟನ್ಸ್	2	-	1	1	4
ತಮಿಳ್ ತಲೈವಾಸ್	2	-	1	1	3
ಹರಿಯಾಣ ಸ್ಟೀಲರ್ಸ್	2	-	2	-	2

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

ಎನ್‌ಎಫ್‌ಟಿ ಹರಾಜು: ವಾರ್ನರ್ ಜೆರ್ಸಿಗೆ ಭಾರಿ ಬೆಲೆ

ವಿಶ್ವಕಪ್ ವಿಜೇತ ಬ್ಯಾಟ್‌ಗೆ ₹ 19 ಲಕ್ಷ

ನವದೆಹಲಿ (ಪಿಟಿಐ): 2011ರಲ್ಲಿ ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರರು ಹಸ್ತಾಕ್ಷರ ಮಾಡಿದ್ದ ಬ್ಯಾಟ್ ನಾನ್ ಫಂಗಿಬಲ್ ಟೋಕನ್ (ಎನ್‌ಎಫ್‌ಟಿ) ಹರಾಜಿನಲ್ಲಿ ₹ 19 ಲಕ್ಷಕ್ಕೆ ಮಾರಾಟವಾಗಿದೆ. 2016ರಲ್ಲಿ ಐಪಿಎಲ್ ಪ್ರಶಸ್ತಿ ಗೆದ್ದಿದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಡೇವಿಡ್ ವಾರ್ನರ್ ಸಹಿ ಮಾಡಿದ್ದ ಪೋಷಾಕು ₹ 22 ಲಕ್ಷ ಮೌಲ್ಯ ಗಳಿಸಿದೆ.

ದುಬೈನಲ್ಲಿ ಶುಕ್ರವಾರ ಈ ಹರಾಜು ಪ್ರಕ್ರಿಯೆಯನ್ನು ಕ್ರಿಕ್‌ಫ್ಲಿಕ್ಸ್ ಮತ್ತು ರೆವ್‌ಸ್ಪೋರ್ಟ್ಸ್ ಹಾಗೂ ಫ್ಯಾನೆಟಿಕ್ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಇದಕ್ಕೆ ಉತ್ತಮ ಸ್ಪಂದನೆ ದೊರೆಯಿತು. ಕ್ರೀಡಾ ಸಲಕರಣೆಗಳು, ಕಲಾತ್ಮಕ ಮತ್ತು ಡಿಜಿಟಲ್ ಕಾಣಿಕೆಗಳನ್ನು ಹರಾಜಿಗಿಡಲಾಯಿತು. ಒಂದೇ ದಿನ ₹ 2.50 ಕೋಟಿ ಸಂಗ್ರಹವಾಯಿತು.

ಮಹೇಂದ್ರಸಿಂಗ್ ಧೋನಿ

ಡೇವಿಡ್ ವಾರ್ನರ್

ಹತ್ತು ವರ್ಷಗಳ ಹಿಂದೆ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಭಾರತ ತಂಡವು ವಿಶ್ವಕಪ್ ಜಯಿಸಿತ್ತು. ಸಚಿನ್ ತೆಂಡೂಲ್ಕರ್ ಅವರ 200ನೇ ಟೆಸ್ಟ್ ಪಂದ್ಯದ ಡಿಜಿಟಲ್ ಹಕ್ಕುಗಳನ್ನು ಮುಂಬೈನ ಅಮಲ್ ಖಾನ್ ಎಂಬುವವರು ₹ 30.01 ಲಕ್ಷಕ್ಕೆ ಖರೀದಿಸಿದರು.

ಡಾನ್ ಬ್ರಾಡ್ಮನ್ ಸಹಿ ಇರುವ ಎನ್‌ಎಫ್‌ಟಿ ಸ್ಟ್ಯಾಂಪ್ ₹ 19.95 ಲಕ್ಷಕ್ಕೆ ಮಾರಾಟವಾಯಿತು. ಹಿನ್ನೆಲೆ ಗಾಯಕಿ ಲತಾ ಮಂಗೇಶ್ಕರ್ ಅವರು ನಡೆಸಿಕೊಟ್ಟಿದ್ದ 1983ರ ವಿಶ್ವಕಪ್ ವಿಜೇತ ಭಾರತ ತಂಡದ ಗೌರವಾರ್ಥದ ಸಂಗೀತ ಕಾರ್ಯಕ್ರಮದ ಧ್ವನಿಮುದ್ರಣಗಳು ₹ 15,75,740 ಗೆ ಮಾರಾಟವಾದವು.

ಇದಲ್ಲದೇ ಭಾರತ ಟೆಸ್ಟ್ ತಂಡದ ಮೊದಲ ನಾಯಕ ಕರ್ನಲ್ ಸಿ.ಕೆ. ನಾಯ್ಡು ಅವರ ಸ್ಮರಣಿಕೆಗಳು (₹ 5.62ಲಕ್ಷ) ಮತ್ತು ಬ್ಯಾಂಕ್ ಖಾತೆ ಪುಸ್ತಕ, ಪಾಸ್‌ಪೋರ್ಟ್ (₹ 73,529), ಮಹಿಳಾ ಕ್ರಿಕೆಟ್ ತಂಡದ ಬೌಲರ್ ಜೂಲನ್ ಗೋಸ್ವಾಮಿ ಅವರು 2017ರ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಧರಿಸಿದ್ದ ಜೆರ್ಸಿ (₹ 7.50ಲಕ್ಷ) ಮಾರಾಟವಾದವು. ದಿವಂಗತ ಬಾಳಾಸಾಹೇಬ ಠಾಕ್ರೆಯವರ ಕಾರ್ಟೂನುಗಳು ಈ ಪ್ರಕ್ರಿಯೆಯಲ್ಲಿದ್ದವು.

ವಾಲಿಬಾಲ್ ಟೂರ್ನಿ ಕರ್ಪಗಂ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಕರ್ಪಗಂ ವಿಶ್ವವಿದ್ಯಾಲಯ ತಂಡ ಶನಿವಾರ ಆರಂಭಗೊಂಡ ವಾಜಪೇಯಿ ಕಪ್ ವಾಲಿಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಶಂಕರ ಮಠ ಸಮೀಪದ ವಿವೇಕಾನಂದ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಮೂಡಬಿದಿರೆ ಆಳ್ವಾಸ್ ಸಂಸ್ಥೆಯ ತಂಡವನ್ನು ಕರ್ಪಗಂ 3-2ರಲ್ಲಿ ಮಣಿಸಿತು.

ಮೊದಲ ಸೆಟ್‌ನಲ್ಲಿ 25-20ರ ಮುನ್ನಡೆ ಗಳಿಸಿದ ಕರ್ಪಗಂ ತಂಡಕ್ಕೆ ಆಳ್ವಾಸ್ ತಂಡ ಮುಂದಿನ ಎರಡು ಸೆಟ್‌ಗಳಲ್ಲಿ (26-24, 25-21) ತಿರುಗೇಟು ನೀಡಿತು. ನಾಲ್ಕನೇ ಸೆಟ್‌ನಲ್ಲಿ 25-20ರ ಜಯ ಸಾಧಿಸಿದ ಕರ್ಪಗಂ 19-17ರಲ್ಲಿ ನಿರ್ಣಾಯಕ ಸೆಟ್ (15 ಪಾಯಿಂಟ್‌ಗಳ ಸೆಟ್) ಗೆದ್ದುಕೊಂಡಿತು.

ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮೈಸೂರು, ಭಾರತ ಸರ್ಕಾರ - (CIPET-CSTS)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ

ಉಚಿತ ತರಬೇತಿ, ಊಟ, ವಸತಿ ಹಾಗೂ ಉದ್ಯೋಗಾವಕಾಶಕ್ಕೆ ನೆರವು

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಯೋಜನೆಯಡಿ ಎಲ್ಲಾ ವರ್ಗದ 10th / PUC / ITI / JOC / DIPLOMA / BE/ Any Degree (pass/fail) ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿ ಯುವಕ, ಯುವತಿಯರಿಗೆ ಮೈಸೂರಿನಲ್ಲಿ ವಿವಿಧ ವೃತ್ತಿಪರ ಯೋಜನೆಯಡಿ 03/06 ತಿಂಗಳ ಅವಧಿಯ ಪಾಲಿಮರ್ ವಸ್ತುಗಳ ತಯಾರಿಕಾ ತಂತ್ರಜ್ಞಾನದ ತರಬೇತಿಯನ್ನು ಉಚಿತ ವಸತಿ, ಊಟ ಹಾಗೂ ಉದ್ಯೋಗಾವಕಾಶಕ್ಕೆ ನೆರವು ನೀಡಲಾಗುವುದು. ತರಬೇತಿ ಪಡೆಯಲು ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ SSLC ಅಂಕಪಟ್ಟಿ, ಜಾತಿ, ಆದಾಯ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ನೊಂದಿಗೆ ನೇರವಾಗಿ ಬಂದು ಪ್ರವೇಶಾತಿ ಪಡೆಯಬಹುದು. ವಿಳಾಸ: CIPET, 437/ಎ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೈಸೂರು-570 016. ಹೆಚ್ಚಿನ ಮಾಹಿತಿಗಾಗಿ ಕೆಳಗಿನ ದೂರವಾಣಿ ಸಂಖ್ಯೆಗೆ ಕರೆ ಮಾಡಿ.

93807 56024, 90666 48466, 97890 10015

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಬೆಂಗಳೂರು-560027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 06 ದಿನಾಂಕ: 21-12-2021

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಪೂರ್ವ ಅರ್ಹತೆ ಮತ್ತು ವಾಣಿಜ್ಯ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @ 17.00 ಗಂಟೆ
ಜಿ-39/21-22	ರಬ್ಬರ್ ಗ್ಲೇಜಿಂಗ್ ವಿತ್ ಇನ್ಸರ್ಟ್ಸ್ (ಇಪಿಡಿಎಂ ರಬ್ಬರ್) ಖರೀದಿ	2.20	28-01-2022
ಜಿ-40/21-22	ಟೈರ್ ಟ್ಯೂಬ್, ಫ್ಲಾಪ್ ಸೆಟ್‌ಗಳು, ಟ್ಯೂಬ್‌ಲೆಸ್ ರೇಡಿಯಲ್ ಟೈರ್ & ಹೆಚ್ಚುವರಿ ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳು ಬೆಲೆ ವ್ಯತ್ಯಾಸದ ಷರತ್ತುಗಳೊಂದಿಗೆ ಒಂದು ವರ್ಷದ ಬಳಕೆಯ ಅವಧಿಗೆ.	150.00	21-01-2022
ಜಿ-41/21-22	ಸಿಂಥೆಟಿಕ್ ರಬ್ಬರ್ ಅಡೆಸಿವ್ ಖರೀದಿ	0.50	28-01-2022
ಜಿ-42/21-22	ಡೆನ್ಸಿಫೈಡ್ ವುಡನ್ ಫ್ಲೋರ್ ಬೋರ್ಡ್‌ಗಳ ಖರೀದಿ	2.00	28-01-2022
ಜಿ-43/21-22	ಕಾಟನ್ ವೇಸ್ಟ್‌ಗಳ ಖರೀದಿ	2.00	28-01-2022
ಜಿ-44/21-22	ಎಂ.ಎಸ್. ಆ್ಯಂಗಲ್ಸ್ ಮತ್ತು ಫ್ಲಾಟ್‌ಗಳ ಖರೀದಿ	1.80	28-01-2022
ಜಿ-45/21-22	ಎಂಗೇಜಿಂಗ್ ಆ್ಯನ್ ಏಜೆನ್ಸಿ ಫಾರ್ ಪ್ರೊವೈಡಿಂಗ್ ಕಾರ್ಟಿಂಗ್ ಮತ್ತು ಕ್ಲಿಯರಿಂಗ್ ಸರ್ವೀಸಸ್	0.40	21-01-2022
ಜಿ-46/21-22	ಸಪ್ಲೈ. ಇನ್‌ಸ್ಟಾಲೇಶನ್ ಮತ್ತು ಕಮಿಶನಿಂಗ್ ಆಫ್ ಪ್ಲೇಟ್ ಎಕ್ಸ್‌ಪೋಸಿಂಗ್ ಮೆಷಿನ್ & ಕೊಲೇಟರ್ ಮೆಷಿನ್ ಆನ್ ಟರ್ನ್‌ಕೀ ಆಧಾರದ ಮೇಲೆ	0.06	21-01-2022
ಎ-18/21-22	ರೇಡಿಯೇಟರ್ ಅಸೆಂಬ್ಲಿಗಳು ಮತ್ತು ಕೋರ್‌ಗಳ ಖರೀದಿ	6.00	28-01-2022
ಎ-19/21-22	ಎನ್ ಆರ್ ಸಿ ಇಂಜಿನ್ ಸ್ಪೇರ್ಸ್ ಖರೀದಿ	6.00	28-01-2022
ಎ-20/21-22	ಎಫ್‌ಐಪಿ ಸ್ಪೇರ್ಸ್‌ಗಳ ಖರೀದಿ	25.00	28-01-2022
ಎ-21/21-22	ಹೆಡ್ ಲ್ಯಾಂಪ್ ಅಸೆಂಬ್ಲಿಗಳು ಮತ್ತು ಪರಿಕರಗಳ ಖರೀದಿ	6.50	28-01-2022
ಎ-22/21-22	ಎನ್ ಆರ್ ಸಿ ಚಾಸಿಸ್ ಸ್ಪೇರ್ಸ್ ಖರೀದಿ	2.00	28-01-2022
ಎ-23/21-22	ಗ್ಯಾಸ್ಕೆಟ್‌ಗಳ ಖರೀದಿ	3.00	28-01-2011

ಮುಂದುವರೆದು. ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ: 080-22230960, 080-22234115 ಗೆ ಕರೆಮಾಡಿ ಅಥವಾ eprocurementhelpdesk@gmail.com ಗೆ ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/-
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾ.ಸಾ.ಸಂ.ಇ/ಬೆಂ.ನಗರ/2539/ಆಕಾರ್/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಷಾದ ವಿನೋದ ವಿಸ್ಮಯ

ಗ್ರಾಫಿಕ್ಸ್: ಭಾವು ಪತ್ತಾರ್

ಹಮೀದ್ ಕೆ.

2021 ಕಾಲಿಡುವ ಮುನ್ನವೇ ಅಂದರೆ, 2020ರ ನವೆಂಬರ್ 27ರಂದು ದೆಹಲಿಯಲ್ಲಿ ಪ್ರತಿಭಟನೆ ಆರಂಭಿಸಿದ್ದ ರೈತರು ಹೊಸ ವರ್ಷ ಕಾಲಿಡುವ ಹೊತ್ತಿಗೆ ದೆಹಲಿಯ ಸಿಂಘು, ಗಾಜಿಪುರ ಮತ್ತು ಟಿಕ್ರಿ ಗಡಿಗಳಲ್ಲಿ ಡೇರೆಗಳನ್ನು ಹಾಕಿ ಬೀಡು ಬಿಟ್ಟಿದ್ದರು. ರೈತರೊಂದಿಗೆ ಸಮಾಲೋಚನೆ ನಡೆಸದೆಯೇ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಕೃಷಿ ಕ್ಷೇತ್ರ ಸುಧಾರಣೆಯ ಉದ್ದೇಶದ ಮೂರು ಕಾಯ್ದೆಗಳನ್ನು ರದ್ದುಪಡಿಸಲು ರೈತರು ಪಟ್ಟು ಹಿಡಿದಿದ್ದರು. ಹೊಸ ವರ್ಷ ಇನ್ನೇನು ಕಣ್ಣು ಬಿಟ್ಟಿತು ಎಂಬಷ್ಟರಲ್ಲಿ, ಜನವರಿ 4ರಂದು ರೈತರು ಮತ್ತು ಕೇಂದ್ರದ ನಡುವೆ ಏಳನೇ ಸುತ್ತಿನ ಮಾತುಕತೆ ನಡೆದಿತ್ತು. ಸರ್ಕಾರದ ಠೇಂಕಾರ ಹಾಗೆಯೇ ಮುಂದುವರಿದಿತ್ತು.

> ಕಾಲಚಕ್ರ ಮತ್ತೊಂದು ಸುತ್ತು ತಿರುಗಿದೆ. 2021ಕ್ಕೆ ನಿಟ್ಟುಸಿರಿನ ವಿದಾಯವನ್ನೂ 2022ಕ್ಕೆ ನಿರೀಕ್ಷೆಯ ಸ್ವಾಗತವನ್ನೂ ಕೋರುವ ಸಮಯ ಬಂದಿದೆ. ಅದಕ್ಕೂ ಮೊದಲಿನ ಹಿನ್ನೋಟದಲ್ಲಿ... ನಾವು ವಿದಾಯ ಹೇಳಿ ಮುಂದೆ ಸಾಗಿದ ಹಿಂದಿನ ವರ್ಷಗಳಂತೆ 2021ರಲ್ಲಿ ಕೂಡ ವಿನೋದ, ವಿಸ್ಮಯ, ವಿಷಾದ, ವಿವೇಕದ ಹಲವು ಚಿತ್ರಗಳಿವೆ. ಆದರೆ, ಒಂದು ವಿಷಾದವೆಂದರೆ, ಹಿನ್ನೋಟದ ತಕ್ಕಡಿಯಲ್ಲಿ ವಿನೋದ ವಿಸ್ಮಯಗಳಿಗಿಂತ ವಿಷಾದದ ತೂಕವೇ ಜಾಸ್ತಿ ಇದೆ...

ರಾಜಧಾನಿಗೆ ಪ್ರವೇಶ ನಿರಾಕರಿಸಿ ರೈತರನ್ನು ಗಡಿಗಳಲ್ಲಿಯೇ ಉಳಿಯುವಂತೆ ಸರ್ಕಾರವು ಮಾಡಿತ್ತು. ಕಾಯ್ದೆಗಳ ಜಾರಿಗೆ ಸುಪ್ರೀಂ ಕೋರ್ಟ್ ಜನವರಿ 12ರಂದು ತಡೆ ಕೊಟ್ಟರೂ ಅನ್ನದಾತ ಪ್ರತಿಭಟನೆ ಕೈಬಿಡದೇ ಇರಲು ನಿರ್ಧರಿಸಿದ್ದ. ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ರ್‍ಯಾಲಿ ನಡೆಸಲು ಬಯಸಿದ್ದ ರೈತರಿಗೆ ಪೊಲೀಸರು ನಿಗದಿತ ಮಾರ್ಗಗಳನ್ನು ಕೊಟ್ಟಿದ್ದರು. ಆದರೆ, ಜಾಥಾದಲ್ಲಿದ್ದ ಕೆಲವರು ಮಾರ್ಗ ತಪ್ಪಿಸಿ, ಕೆಂಪು ಕೋಟೆಗೆ ನುಗ್ಗಿ ದಾಂದಲೆ ಆಯಿತು. ಪ್ರತಿಭಟನೆಯೆಂದರೆ ಹೀಗಿರಬೇಕು ಎಂಬ ರೀತಿಯಲ್ಲಿ ನಡೆಯುತ್ತಿದ್ದ ಚಳವಳಿಗೆ ಇದೊಂದು ಕರಿಚುಕ್ಕೆ. ನುಗ್ಗಿದವರು ರೈತರೇ ಅಥವಾ ಹೊರಗಿನ ಕಿಡಿಗೇಡಿಗಳೇ ಎಂಬುದು ಇನ್ನೂ ಸ್ಪಷ್ಟವಿಲ್ಲ. ಆದರೆ, ಅಂದು ಕೆಂಪು ಕೋಟೆಯ ಮೇಲೆ ಏರಿ, ಧಾರ್ಮಿಕ ಧ್ವಜವನ್ನು ಅಲ್ಲಿ ಹಾರಿಸಿದ್ದು, ವಾಹನಗಳಿಗೆ ಬೆಂಕಿ ಕೊಟ್ಟಿದ್ದು ಮುಂತಾದ್ದರಿಂದಾಗಿ ರೈತರ ಮೇಲೆ ದೇಶದೆಲ್ಲೆಡೆ ಇದ್ದ ಅನುಕಂಪಕ್ಕೆ ಕುಂದು ಬಂದಿದ್ದಂತೂ ಹೌದು. ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರು ದಿಕ್ಕೆಟ್ಟು ನಿಂತ ಕ್ಷಣ ಅದು. ಇನ್ನೇನು ಊರುಗಳಿಗೆ ಹೊರಡಬೇಕು ಎಂಬ ಭಾವ ಅವರ ಮನಸ್ಸುಗಳಲ್ಲಿ ಮಿಂಚಿ ಮರೆಯಾಗುತ್ತಿತ್ತು.

ಗಾಜಿಪುರ ಗಡಿಯಲ್ಲಿ ಕೇಂದ್ರ ಸರ್ಕಾರ ಭಾರಿ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿತ್ತು. ರೈತರನ್ನು ಬಲವಂತವಾಗಿಯೇ ಅಲ್ಲಿಂದ ಎಬ್ಬಿಸಲು ಸರ್ಕಾರ ಸಜ್ಜಾಗಿದೆ ಎಂಬ ವದಂತಿಗಳಿದ್ದವು. ಪ್ರತಿಭಟನೆ ಮುಂದುವರಿಸಲು ನೆರವಾಗಿ ಎಂದು ರೈತ ನಾಯಕ ರಾಕೇಶ್ ಟಿಕಾಯತ್ ಅವರು ಕಣ್ಣೀರಿಟ್ಟು ಕೈಮುಗಿದು ಮಾಡಿದ ಮನವಿಯ ವಿಡಿಯೊ ಜನವರಿ 28ರಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಅದುವರೆಗೆ, ಪಂಜಾಬ್ ಮತ್ತು ಹರಿಯಾಣದ ರೈತರು ಪ್ರತಿಭಟನೆಯ ಮುಂಚೂಣಿಯಲ್ಲಿದ್ದರು. ಟಿಕಾಯತ್ ವಿಡಿಯೊ ಬಳಿಕ, ಉತ್ತರ ಪ್ರದೇಶದ ಪಶ್ಚಿಮ ಭಾಗದ ರೈತರು ಸಾಗರದೋಪಾದಿಯಲ್ಲಿ ಪ್ರತಿಭಟನೆಗೆ ಬಂದು ಸೇರಿಕೊಂಡರು. ರೈತರ ಪ್ರತಿಭಟನೆಯು ಇನ್ನೂ ಹೆಚ್ಚು ಬಲ ತುಂಬಿಕೊಂಡಿತು. ದಿನದಿಂದ ದಿನಕ್ಕೆ ಶಕ್ತಿ ವೃದ್ಧಿಸುತ್ತಲೇ ಹೋದ ಪ್ರತಿಭಟನೆಯು ಬಲಶಾಲಿ ಕೇಂದ್ರ ಸರ್ಕಾರವನ್ನು ಮಂಡಿಯೂರಿಸಿದ ವಿಸ್ಮಯಕ್ಕೆ ಸಾಕ್ಷಿಯಾಯಿತು. ವರ್ಷ ಕೊನೆಯಾಗುವ ಹೊತ್ತಿಗೆ ಕೇಂದ್ರವು ಕಾಯ್ದೆಗಳನ್ನು ಹಿಂದಕ್ಕೆ ಪಡೆಯಿತು.

ಈ ನಡುವಲ್ಲಿ ಮನ ಕಲಕುವ ಹಲವು ವಿದ್ಯಮಾನಗಳು ನಡೆದವು. ಆಡಳಿತ ಪಕ್ಷವು ರೈತರನ್ನು ಶತ್ರುಗಳಂತೆ ಕಂಡಿತು. ಪ್ರತಿಭಟನೆ ನಡೆಸುತ್ತಿದ್ದವರು ಖಲಿಸ್ತಾನಿಗಳು, ಉಗ್ರರು, ಪುಂಡರು ಎಂದೆಲ್ಲ ಆಡಳಿತ ಪಕ್ಷದ ಮುಖಂಡರು ಅಂದರು. ಅವರ ಮೇಲೆ ಹಲವು ಹತ್ತು ಪ್ರಕರಣಗಳನ್ನು ದಾಖಲಿಸಿ, ಹಣಿಯುವ ಯತ್ನ ನಡೆಯಿತು. ಟೂಲ್‌ಕಿಟ್ ಪ್ರಕರಣದಲ್ಲಿ ಬೆಂಗಳೂರಿನ ಯುವತಿ ದಿಶಾ ರವಿ ಅವರನ್ನು ಅತ್ಯಾತುರದಲ್ಲಿ ಬಂಧಿಸಿದ ಪ್ರಸಂಗವೂ ನಡೆಯಿತು. ಒಂದು ವರ್ಷ ನಡೆದ ಪ್ರತಿಭಟನೆಯಲ್ಲಿ ಸತ್ತವರು 750ಕ್ಕೂ ಹೆಚ್ಚು ರೈತರು ಎಂಬುದು ಪ್ರತಿಭಟನೆಯ ಕಣ್ಣೀರಿನ ಕತೆ. ಅಕ್ಟೋಬರ್ 3ರಂದು ಉತ್ತರ ಪ್ರದೇಶದ ಲಖಿಂಪುರ ಖೇರಿ ಎಂಬಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ವಾಹನ ಹರಿಸಿ ನಾಲ್ವರ ಹತ್ಯೆ ಮಾಡಿದ್ದು ಅಧಿಕಾರದ ಅಹಂಕಾರದ ಕತೆ. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಈ ಪ್ರಕರಣದ ಪ್ರಮುಖ ಆರೋಪಿ. ರೈತರನ್ನು ಸರ್ಕಾರ ನಡೆಸಿಕೊಂಡ ಬಗೆಯನ್ನು ಸುಪ್ರೀಂ ಕೋರ್ಟ್ ಉದ್ದಕ್ಕೂ ತರಾಟೆಗೆ ತೆಗೆದುಕೊಂಡಿತ್ತು ಎಂಬುದು ಸಮಾಧಾನಕರ ಅಂಶ.

ಇಡೀ ವರ್ಷವನ್ನು ನೋವಿನಲ್ಲಿ ಅದ್ದಿ ಇರಿಸಿದ್ದು ಕೊರೊನಾ ಎಂಬ ವೈರಾಣು. 2020ರಲ್ಲಿಯೇ ದೇಶವನ್ನು ಕೊರೊನಾ ಹೈರಾಣಾಗಿಸಿತ್ತು. 2021ರ ಮೊದಲ ದಿನ ದೇಶದಲ್ಲಿ ಸುಮಾರು 19 ಸಾವಿರ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದವು. ಹಿಂದಿನ ವರ್ಷ ಲಕ್ಷದ ಸಮೀಪ ತಲುಪಿದ್ದ ಪ್ರಕರಣಗಳ ಸಂಖ್ಯೆ ಇಳಿಕೆಯ ಹಾದಿಯಲ್ಲಿತ್ತು. ಫೆಬ್ರುವರಿ 9ರಂದು ಸುಮಾರು 9 ಸಾವಿರ ಹೊಸ ಪ್ರಕರಣಗಳು ವರದಿಯಾಗಿದ್ದವು. ಪ್ರಕರಣಗಳ ಸಂಖ್ಯೆಯು ಇಳಿಕೆಯ ಹಾದಿಗೆ ಹೊರಳಿ, ಜನರಲ್ಲಿ ಅಲ್ಪ ನೆಮ್ಮದಿ ಮೂಡಿಸಿದ್ದು ಹೌದು. ಆದರೆ ಅದು ಅಲ್ಪ ಕಾಲದ್ದಷ್ಟೇ ಆಗಿತ್ತು. ಪ್ರಕರಣಗಳ ಸಂಖ್ಯೆ ಇಳಿಕೆಯನ್ನು ಕಂಡು ಮೈಮರೆತ ಜನರು, ಜಾತ್ರೆ, ಮದುವೆಯಲ್ಲಿ ಅಂತರ ಮರೆತು ಸಂಭ್ರಮಪಟ್ಟರು. ರಾಜಕೀಯ ಪಕ್ಷಗಳು ದೊಡ್ಡ ದೊಡ್ಡ ಸಮಾವೇಶಗಳನ್ನು ನಡೆಸಿ ಮತ ಯಾಚನೆ ನಡೆಸಿದವು. ಮಾಸ್ಕ್, ಸ್ಯಾನಿಟೈಸರ್, ಅಂತರ ಕಾಯ್ದುಕೊಳ್ಳುವ ಶಿಸ್ತು ಮರೆಯಲು ಕಾಲವಾಗಿಲ್ಲ ಎಂಬುದು ಜನರಿಗೆ ನೆನಪಾಗಲೇ ಇಲ್ಲ. ನೆನಪಿಸಬೇಕಾದ ರಾಜಕೀಯ ನಾಯಕರೇ ಜನರನ್ನು ಗುಂಪುಗೂಡಿಸಿ ರ್‍ಯಾಲಿಗಳನ್ನು ನಡೆಸಿದರು. ಮನೆಯೊಳಗೇ ಇದ್ದ ಮಾರಿ ಬೃಹದಾಕಾರ ಬೆಳೆಯಿತು. ಅಲ್ಲೆಲ್ಲೋ ಕೋವಿಡ್ ಅಂತೆ ಅನ್ನೋದು ಹೋಗಿ, ಅಲ್ಲಿ, ಇಲ್ಲಿ, ಪಕ್ಕದ ಮನೆಯಲ್ಲಿ, ನಮ್ಮದೇ ಮನೆಯಲ್ಲಿ ಸಾವಿನ ರುದ್ರ ನರ್ತನ ನಡೆಯಿತು.

ಕೋವಿಡ್ ತಡೆಯುವುದಕ್ಕಾಗಿ, ಬ್ರಿಟನ್‌ನ ಆಸ್ಟ್ರಾ ಜೆನೆಕಾ-ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ್ದ ಕೋವಿಶೀಲ್ಡ್ ಮತ್ತು ಭಾರತ್ ಬಯೊಟೆಕ್ ದೇಶೀಯವಾಗಿ ಅಭಿವೃದ್ಧಿಪಡಿಸಿದ್ದ ಕೋವ್ಯಾಕ್ಸಿನ್‌ನ ಬಳಕೆಗೆ ಭಾರತವು ಜನವರಿಯಲ್ಲಿಯೇ ಒಪ್ಪಿಗೆ ಕೊಟ್ಟಿತ್ತು. ಜನವರಿ 16ರಂದೇ ಲಸಿಕೆ ಅಭಿಯಾನಕ್ಕೆ ಚಾಲನೆಯನ್ನೂ ಕೊಡಲಾಗಿತ್ತು. ಆದರೆ, 130 ಕೋಟಿಗೂ ಹೆಚ್ಚು ಜನರಿರುವ ದೇಶದಲ್ಲಿ ತಯಾರಾಗುತ್ತಿದ್ದ ಲಸಿಕೆ ಸಂಖ್ಯೆಯು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯ ಮಟ್ಟದಲ್ಲಿಯೂ ಇರಲಿಲ್ಲ. ಜತೆಗೆ, ಲಸಿಕೆಯ ಬಗ್ಗೆ ಹತ್ತಾರು ರೀತಿಯ ಅಪನಂಬಿಕೆ, ಅಂಜಿಕೆಗಳು ಹರಡಿದ್ದವು. ಮೇ 8ರಂದು ಪ್ರಕರಣಗಳ ಸಂಖ್ಯೆ ನಾಲ್ಕು ಲಕ್ಷ ಮೀರಿತ್ತು. ಆಸ್ಪತ್ರೆಗಳಲ್ಲಿ ಹಾಸಿಗೆ ಖಾಲಿ ಇರಲಿಲ್ಲ, ಔಷಧ ಸಿಗುತ್ತಿರಲಿಲ್ಲ. ತಮ್ಮವರಿಗಾಗಿ ಜನರು ಆಮ್ಲಜನಕ ಸಿಲಿಂಡರ್ ಹಿಂದೆ ಓಡಾಡಿದ ಪರಿ ಮಾತ್ರ ಕಠಿಣ ಹೃದಯಿಗಳನ್ನೂ ಕಣ್ಣೀರಾಗಿಸಿತ್ತು. ಉತ್ತರ ಪ್ರದೇಶದಲ್ಲಿ ಗಂಗೆಯಲ್ಲಿ ತೇಲಿ ಬಂದ ಅರೆಬೆಂದ ಹೆಣಗಳು ಬೇರೆಯದೇ ಕತೆ ಹೇಳಿದರೆ, ಆಡಳಿತಾರೂಢರು ಕೋವಿಡ್ ಸಾವಿನ ಸಂಖ್ಯೆಯನ್ನು ಮುಚ್ಚಿಟ್ಟರು. ಅದೊಂದು ಹಂತ ಮುಗಿಯಿತೇನೂ ಎಂಬಷ್ಟರಲ್ಲಿ ವರ್ಷದ ಕೊನೆಯ ಹೊತ್ತಿಗೆ ಕೊಲೆಗಡುಕ ವೈರಾಣು ಓಮೈಕ್ರಾನ್ ಎಂಬ ಮತ್ತೊಂದು ರೂಪ ತಾಳಿ ಬೆದರಿಸಲು ಸಜ್ಜಾಗಿ ನಿಂತಿದೆ. ಈಗ, ಶೇ 40ಕ್ಕೂ ಹೆಚ್ಚು ಜನರಿಗೆ ಲಸಿಕೆಯ ಎರಡೂ ಡೋಸ್, ಶೇ 60ಕ್ಕೂ ಹೆಚ್ಚು ಜನರಿಗೆ ಲಸಿಕೆಯ ಒಂದು ಡೋಸ್ ನೀಡಲಾಗಿದೆ. ಹೊಸ ವರ್ಷದಲ್ಲಿ, ಕೋವಿಡ್‌ನಿಂದ ತಪ್ಪಿಸಿಕೊಳ್ಳಲು ಸಾಗಬೇಕಿರುವ ಹಾದಿ ಬಹಳ ದೂರವಿದೆ.

2021ರಲ್ಲಿ ಕೇರಳ, ತಮಿಳುನಾಡು, ಪುದುಚೇರಿ, ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆದ ಚುನಾವಣೆಗಳು ಬೇರೆಯದ್ದೇ ಕತೆ ಹೇಳಿದ್ದವು. ಪಶ್ಚಿಮ ಬಂಗಾಳದಲ್ಲಿ ಬಾವುಟ ಹಾರಿಸಬೇಕು ಎಂಬ ಬಿಜೆಪಿಯ ಹಂಬಲವು ಆ ರಾಜ್ಯವನ್ನು ಯುದ್ಧಭೂಮಿಯನ್ನಾಗಿಸಿತು. ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಬೀದಿ ಕಾಳಗ ನಿತ್ಯದ ದಿನಚರಿಯಾಗಿತ್ತು. ಟಿಎಂಸಿ ಮಹತ್ವದ ಮುಖಂಡರಲ್ಲಿ ಹಲವರನ್ನು ಸಾಮ–ದಾನ–ಭೇದ–ದಂಡದ ಮಂತ್ರ ಬಳಸಿ ಬಿಜೆಪಿಗೆ ಸೇರಿಸಿಕೊಳ್ಳಲಾಗಿತ್ತು ಎಂಬುದು ಗಂಭೀರ ಆರೋಪ. ಅಂತಹುದೇ ಕಾರ್ಯತಂತ್ರವನ್ನು ಪುದುಚೇರಿಯಲ್ಲಿಯೂ ಅನುಸರಿಸಲಾಗಿತ್ತು. ಮೆಟ್ರೊ ತಂತ್ರಜ್ಞ ಶ್ರೀಧರನ್ ಸೇರಿದಂತೆ ಹಲವರನ್ನು ಕೇರಳದಲ್ಲಿ ಬಿಜೆಪಿಗೆ ಸೇರಿಸಿಕೊಳ್ಳಲಾಗಿತ್ತು. ಧಾರ್ಮಿಕ ಭಾವನೆ ಕೆರಳಿಸುವ ಕೆಲಸ ಎಲ್ಲ ರಾಜ್ಯಗಳಲ್ಲಿಯೂ ಎಗ್ಗಿಲ್ಲದ ನಡೆದಿತ್ತು. ಫಲಿತಾಂಶವು ಭಿನ್ನ ಕತೆಯನ್ನು ಹೇಳಿತು. ಪಶ್ಚಿಮ ಬಂಗಾಳದಲ್ಲಿ ಗೆದ್ದೇ ಬಿಟ್ಟೆವು ಎಂದು ಬೀಗುತ್ತಿದ್ದ ಬಿಜೆಪಿಗೆ 75 ಕ್ಷೇತ್ರಗಳು ದಕ್ಕಿದವು. ಪ್ರಮುಖ ವಿರೋಧ ಪಕ್ಷವಾಗಿ ಬಿಜೆಪಿ ಹೊಮ್ಮಿತು. ಇದು ಕಡಿಮೆ ಸಾಧನೆ ಏನಲ್ಲ, ಆದರೆ, ಬಿಜೆಪಿಯ ಹೂಡಿಕೆಗೆ ಇದು ಅಲ್ಪ ಪ್ರತಿಫಲ ಎನ್ನದೆ ವಿಧಿಯಿಲ್ಲ. ಅಸ್ಸಾಂ ಅನ್ನು ಬಿಜೆಪಿ ಉಳಿಸಿಕೊಂಡಿತು. ತಮಿಳುನಾಡಿನ ಜನರು ನಿರೀಕ್ಷೆಯಂತೆ ಡಿಎಂಕೆಯನ್ನು ಅಧಿಕಾರಕ್ಕೆ ತಂದರು. ಕೇರಳದ ಜನರು ಅನಿರೀಕ್ಷಿತ ಫಲಿತಾಂಶ ಕೊಟ್ಟರು. ಕೋವಿಡ್, ಪ್ರವಾಹ ನಿರ್ವಹಣೆಯಲ್ಲಿ ತೋರಿದ್ದ ದಕ್ಷತೆ, ಸರ್ಕಾರಕ್ಕೆ ಇದ್ದ ಜನಪರ ಕಾಳಜಿಗೆ ಮನ್ನಣೆ ಕೊಟ್ಟರು. ಪರ್ಯಾಯ ಆಡಳಿತದ ರೂಢಿ ತಪ್ಪಿಸಿ, ಆಡಳಿತದಲ್ಲಿದ್ದ ಸಿಪಿಎಂಗೆ ಹಿಂದೆಂದಿಗಿಂತಲೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಕೊಟ್ಟರು. ಬಿಜೆಪಿಗೆ ಇದ್ದ ಒಂದು ಕ್ಷೇತ್ರವನ್ನೂ ಕಿತ್ತುಕೊಂಡರು.

ಕೋವಿಡ್ ಮತ್ತು ಅದನ್ನು ತಡೆಯುವುದಕ್ಕೆ ಹೇರಲಾದ ಲಾಕ್‌ಡೌನ್ ಕೋಟ್ಯಂತರ ಜನರ ಜೀವನೋಪಾಯಕ್ಕೆ ಕುತ್ತು ತಂದಿತು. ಹಲವರ ಉದ್ಯೋಗ ಹೋಯಿತು, ಇನ್ನುಳಿದವರ ಸಂಬಳಕ್ಕೆ ಕತ್ತರಿ ಬಿತ್ತು.

9ನೇ ಪುಟಕ್ಕೆ...

ಆಘಾತದಲ್ಲೇ ಏಗಿದ ವರ್ಷ

ವೈ.ಗ. ಜಗದೀಶ್

ಕೋವಿಡ್ ಮೊದಲ ಅಲೆಯ ಬರಸಿಡಿಲಿನಿಂದ ಉಡುಗಿಹೋಗಿ ಉಳಿದ ಜೀವವನ್ನು ಅಂಗೈಯಲ್ಲಿಟ್ಟುಕೊಂಡು ಬದುಕು ಕಟ್ಟಿಕೊಳ್ಳಲು ಕೊಸರಾಡುತ್ತಿದ್ದ ಮಂದಿಗೆ 2021 ಸುಖವನ್ನೇನೂ ತರಲಿಲ್ಲ. ಕನಸುಗಳೇ ಇಲ್ಲದ ದಾರಿಯಲ್ಲಿ ನಡೆಯುತ್ತಿದ್ದವರಿಗೆ ಒಂದೆಡೆ ಕೋವಿಡ್ ಎರಡನೇ ಅಲೆ, ಮತ್ತೊಂದೆಡೆ ಮಹಾಮಳೆ ತಂದಿತ್ತ ಸರಣಿ ಆಘಾತ ಮೇಲಿಂದ ಮೇಲೆ ಅಪ್ಪಳಿಸಿದವು. ಮಣ್ಣುಟ್ಟ ಪುಟ್ಟಬಿತ್ತದಿಂದ ಆಗಷ್ಟೇ ಚಿಗುರೊಡೆದು ಪುಟಿಯುತ್ತಿದ್ದ ಎಳೆ ಸುಳಿಯಂತಹ ಬದುಕಿನ ಮೇಲೆ ಹೆಮ್ಮರ, ರಾಕ್ಷಸ ಬಂಡೆಗಳು ಉರುಳಿಬಿದ್ದಂತಾಗಿ ಕೊನರು ಕಮರಿಹೋಯಿತು. ಆಘಾತಗಳಲ್ಲೇ ಏಗಿ, ನಿಟ್ಟುಸಿರು ಬಿಡುವಷ್ಟರಲ್ಲಿ ಮತ್ತೊಮ್ಮೆ ಓಮೈಕ್ರಾನ್ ಎಂಬ ಪೆಡಂಭೂತ ಹೊಸವರ್ಷಾಚರಣೆಯನ್ನು ಎದುರುಗೊಳ್ಳಲು ಮನೆಬಾಗಿಲಿಗೆ ಬಂದು ನಿಂತಿದೆ. ಹೊಸವರ್ಷದ ಹೊಸ್ತಿಲಿನಲ್ಲಿ ನಿಂತು ಹಿಂದಿನ ದಿನಗಳ ಕಹಿಘಾತ, ಮಗುಚಿಬಿದ್ದ ಜೀವನ, ಭವಿಷ್ಯದ ಭರವಸೆಗಳೇ ಇಲ್ಲದಂತೆ ಕಳೆದುಹೋದ ಕಾಲದ ಹೆಜ್ಜೆಗುರುತುಗಳನ್ನು ದಾಖಲಿಸುವ ಹೊತ್ತಿದು...

ಸಜ್ಜನರ ಅಕಾಲಿಕ ದುರ್ಮರಣ ಕಂಡು ಕನ್ನಡ ನಾಡು ಶೋಕಸಾಗರದಲ್ಲಿ ಮುಳುಗಿ ಪರಿತಪಿಸಿದರೆ, ರಾಜಕೀಯ ಏಳು ಬೀಳುಗಳು ನಾಡಿನ ಅಭಿವೃದ್ಧಿಯ ದಿಕ್ಕನ್ನೇ ಹಿಮ್ಮುಖವಾಗಿ ಚಲಿಸುವಂತೆ ಮಾಡಿದವು. ಡಿಜಿಟಲ್ ಕಾಲದ ಹಣವೆಂದೇ ಪರಿಚಿತವಾಗಿರುವ ಬಿಟ್ ಕಾಯಿನ್ ರಾಜ್ಯ ರಾಜಕಾರಣದ ಮೇಲೆ ಕರಾಳ ಛಾಯೆಯನ್ನು ಚಾಚಿ ಆಳುವವರನ್ನು ದಂಗುಬಡಿಸಿತು. ಜತೆಗೆ ಭ್ರಷ್ಟಾಚಾರದ ನವರೂಪವನ್ನು ಜನರಿಗೆ ಪರಿಚಯಿಸಿತು. ಆಡಳಿತ ವ್ಯವಸ್ಥೆಯೊಳಗೆ ತನ್ನ ಬೇರನ್ನು ಮತ್ತಷ್ಟು ಆಳ-ಅಗಲವಾಗಿ ವಿಸ್ತರಿಸಿರುವ ಭ್ರಷ್ಟಾಚಾರದ ಬ್ರಹ್ಮಾಂಡವನ್ನು ಆದಾಯ ತೆರಿಗೆ ಹಾಗೂ ಭ್ರಷ್ಟಾಚಾರ ನಿಗ್ರಹ ದಳದ ದಾಳಿಗಳು ತೆರೆದು ತೋರಿಸಿದವು.



ಸಾವಿನ ಮನೆಯ ಬಾಗಿಲು

ಕೋವಿಡ್ ಮೊದಲ ಅಲೆ ಅನಿರೀಕ್ಷಿತ ಆಘಾತವನ್ನು ಆಳುವ ಸರ್ಕಾರಕ್ಕೂ, ಜನರಿಗೂ ತಂದಿತು. ಇಡೀ ವ್ಯವಸ್ಥೆಯನ್ನೇ ಮರ್ಮರ ಮಾಡಿದ ಕೋವಿಡ್ ಅನ್ನು ಎದುರಿಸಲು ಯಾರೂ ಸಜ್ಜಾಗಿರಲಿಲ್ಲ. ಅಂತಹ ಹೊತ್ತಿನಲ್ಲಿ ಘಟಿಸಿದ ಜೀವಹಾನಿ ಅಪಾರ.

ಮೊದಲ ಅಲೆ ಮುಗಿಯುತ್ತಿದ್ದಂತೆ ಎರಡನೇ ಅಲೆ ವಕ್ಕರಿಸುತ್ತದೆ ಎಂದು ಆರೋಗ್ಯ ಕ್ಷೇತ್ರದ ತಜ್ಞರು ಎಚ್ಚರಿಸುತ್ತಲೇ ಇದ್ದರು. ಮೊದಲ ಅಲೆಯಲ್ಲಿ ಸಿದ್ಧತೆ ಇಲ್ಲದೇ ಎಡವಿ, ಜನರ ಜೀವವನ್ನು ಬಲಿಗೊಟ್ಟ ಬಗ್ಗೆ ಸರ್ಕಾರಕ್ಕೆ ಅರಿವಿತ್ತು. ಔಷಧ– ಚಿಕಿತ್ಸೆಗೆ ಬೇಕಾದ ಪರಿಕರ, ಪರೀಕ್ಷೆಗೆ ಬೇಕಾದ ಸಾಧನಗಳ ಖರೀದಿಯಲ್ಲಾಗುವ ‘ಲಾಭದ ವಹಿವಾಟಿ’ನ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದ ಆಳುವವರು, ಅಧಿಕಾರಿಗಳು ಎರಡನೇ ಅಲೆಯನ್ನು ಎದುರಿಸಲು ಅಣಿಗೊಳ್ಳಲೇ ಇಲ್ಲ. ಕೋವಿಡ್‌ಗೆ ತುತ್ತಾದವರು ಚಿಕಿತ್ಸೆ, ವೆಂಟಿಲೇಟರ್, ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೇ ದೀಪಕ್ಕೆ ಸಿಕ್ಕ ಚಿಟ್ಟೆಗಳಂತೆ ನರಳುತ್ತಲೇ ಪ್ರಾಣಬಿಟ್ಟರು. ಸರ್ಕಾರ ಕೊಟ್ಟ ಲೆಕ್ಕದಂತೆ ಮೊದಲ ಅಲೆಯಲ್ಲಿ 12,090 ಜನ ತಮ್ಮ ಪ್ರಾಣ ಕಳೆದುಕೊಂಡರೆ, ಎರಡನೇ ಅಲೆಯಲ್ಲಿ 26,205 ಜೀವತೆತ್ತರು. ಈವರೆಗೆ ಕೋವಿಡ್‌ನಿಂದ 38,295 ಜನ ಅಸುನೀಗಿದ್ದಾರೆ. ಆದರೆ, ಲೆಕ್ಕಕ್ಕೇ ಸಿಗದವರು ಇದರು ಮೂರು ಪಟ್ಟು ಇದ್ದಿರಬಹುದು. ಸರ್ಕಾರ ಸರಿಯಾಗಿ ಕರ್ತವ್ಯ ನಿರ್ವಹಿಸಿದ್ದರೆ ಇವರಲ್ಲಿ ಅರ್ಧದಷ್ಟು ಜನರ ಜೀವವಾದರೂ ಉಳಿಯುತ್ತಿತ್ತು.

ಇವೆಲ್ಲವೂ ಮುಗಿದು ಜೀವನ ಸರಿದಾರಿಗೆ ಮರಳುತ್ತಿರುವ ಸಮಯದಲ್ಲೇ ಓಮೈಕ್ರಾನ್ ಎಂಬ ರೂಪಾಂತರಿ ವೈರಾಣು ದಾಂಗುಡಿ ಇಟ್ಟಿದೆ. ದೇಶದಲ್ಲೇ ಮೊದಲ ಎರಡು ಪ್ರಕರಣ ಬೆಂಗಳೂರಿನಲ್ಲಿ ಪತ್ತೆಯಾಗಿವೆ.

ಬದುಕು ಮುಳುಗಿಸಿದ ಮಳೆ

ಕೋವಿಡ್ ಆಘಾತದ ಕರಿನೆರಳಿನಲ್ಲೇ ಶುರುವಾದ ಮಹಾಮಳೆಯ ಆರ್ಭಟ ರೈತ ಸಂಕುಲವನ್ನೇ ಹಿಪ್ಪೆ ಮಾಡಿತು. ಎರಡು ತಿಂಗಳಲ್ಲಿ ವಾಡಿಕೆ ಪ್ರಕಾರ 166 ಮಿ.ಮೀ ಮಳೆ ಆಗಬೇಕಿತ್ತು. ಆದರೆ, 307 ಮಿ.ಮೀ ಮಳೆ ಆಗಿಬಿಟ್ಟಿತು. ಮಳೆಯನ್ನೇ ಕಾಣದ ಬಯಲುಸೀಮೆಯಲ್ಲಿ ಸುರಿದ ಮಳೆಯಿಂದಾಗಿ ಕೆರೆಕಟ್ಟೆಗಳು ತುಂಬಿದ ಸಂತಸ ಒಂದೆಡೆಗೆ ಇದ್ದರೆ, 14.42 ಲಕ್ಷ ರೈತರು ಉತ್ತಿಬಿತ್ತಿ ಬೆಳೆದಿದ್ದ ಅಂದಾಜು 4 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದ ಫಸಲು ನೀರು ಪಾಲಾಯಿತು. ಭತ್ತ, ತೊಗರಿ, ರಾಗಿ, ಮೆಕ್ಕೆಜೋಳ, ಶೇಂಗಾ, ದ್ರಾಕ್ಷಿ ಹೀಗೆ ಎಲ್ಲವೂ ಕರಗಿಹೋದವು.

11ನೇ ಪುಟಕ್ಕೆ...

ಇದೋ ಸಾಹಿತ್ಯ ಫಸಲು

ಸಾಹಿತ್ಯದ ಪಾಲಿಗೆ 2021 ತುಂಬಾ ಮಹತ್ವದ ವರ್ಷ. ಕಳೆದ 12 ತಿಂಗಳ ಅವಧಿಯಲ್ಲಿ ಸಾಹಿತ್ಯ ವಲಯ ಬಲು ಸಮೃದ್ಧವಾದ ಫಸಲನ್ನೇ ತೆಗೆದಿದೆ. ಗಮನಾರ್ಹವಾದ ಕಾದಂಬರಿ, ಕಥಾ ಸಂಕಲನಗಳ ಒಕ್ಕಲೂ ಆಗಿದೆ. ಅನ್ಯ ಭಾಷೆಗಳ ತುಂಬಾ ಮಹತ್ವದ ಕೃತಿಗಳು ಕನ್ನಡಕ್ಕೆ ಬಂದಿವೆ. ಈ ಪುಸ್ತಕಗಳ ರಾಶಿಯಲ್ಲಿ ಓದುಗರನ್ನು ಗಮನ ಸೆಳೆದ ಕೃತಿಗಳು ಯಾವುವು? ನಾಡಿನ 20 ಜನ ಸಾಹಿತ್ಯಾಸಕ್ತರ ಮುಂದೆ ಈ ಪ್ರಶ್ನೆ ಇಟ್ಟಾಗ ಬಂದ ಉತ್ತರಗಳಲ್ಲಿ ಹೆಚ್ಚು ಪ್ರಸ್ತಾಪಿತವಾದ ಕೃತಿಗಳ ವಿವರ ಇಲ್ಲಿದೆ. ಅಂದಹಾಗೆ, ಇದೇನು ರ್‍ಯಾಂಕಿಂಗ್ ಅಲ್ಲ. ಹೆಚ್ಚು ಚರ್ಚಿತವಾದ ಕೃತಿಗಳ ಪಟ್ಟಿಯಷ್ಟೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇವೆ. ಸಾಹಿತ್ಯಾಸಕ್ತರು ನೀಡಿದ ವಿವರವಾದ ಪಟ್ಟಿ ಮುಂದಿನ ಪುಟಗಳಲ್ಲಿದೆ.

ಕೃತಿ	ಪ್ರಕಾರ	ಲೇಖಕ
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ಸಿಮೊನ್‌ದ ಬೋವಾ	ಮಾತು ಕಥನ	ಅನುವಾದ:ವಿಕ್ರಮ ವಿಸಾಜಿ
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ಕವಿಜೋಡಿಯ ಆತ್ಮಗೀತ	ಕಥಾ ಕಾವ್ಯ	ನಟರಾಜ್ ಹುಳಿಯಾರ್
ಹೋಗಿಬನ್ನಿ ಋತುಗಳೇ	ಕವನ ಸಂಕಲನ	ಎಚ್.ಎಸ್. ಶಿವಪ್ರಕಾಶ
ಚಹರೆಗಳೆಂದರೆ ಗಾಯಗಳೂ ಹೌದು	ಸಮುದಾಯ ಕಥನ	ಎ.ಎಸ್.ಪ್ರಭಾಕರ
ವೈಷ್ಣವ ಜನತೋ	ಕಾದಂಬರಿ	ಲೋಕೇಶ ಅಗಸನಕಟ್ಟೆ
ಯಾವ ಶಹರು ಯಾವ ಬೆಳಕು	ಕವನ ಸಂಕಲನ	ಎಚ್. ಎಸ್. ಶಿವಪ್ರಕಾಶ
ವಿಚಿತ್ರಸೇನನ ವೈಖರಿ	ಕವನ ಸಂಕಲನ	ಜಯಂತ ಕಾಯ್ಕಿಣಿ
ಚಾಂದಬೀ ಸರಕಾರ	ಕಾದಂಬರಿ	ಚಂದ್ರಶೇಖರ ಕಂಬಾರ
ಯಕ್ಷಿಣಿ ಕನ್ನಡಿ	ಕವನ ಸಂಕಲನ	ಜ.ನಾ.ತೇಜಶ್ರೀ
ಬ್ರಹ್ಮಯಾನ	ವೇದಾಂತ ಕಾವ್ಯ	ಮಲ್ಲೇಪುರಂ ಜಿ. ವೆಂಕಟೇಶ
ಅಂಗುಲಿಹುಳುವಿನ ಇಂಚುಪಟ್ಟಿ	ವಿಮರ್ಶೆ	ಆರ್.ತಾರಿಣಿ ಶುಭದಾಯಿನಿ
ಹಾವಳಿ	ಕಾದಂಬರಿ	ಮಲ್ಲಿಕಾರ್ಜುನ ಹಿರೇಮಠ
ಭಿನ್ನ ಅಭಿಪ್ರಾಯ	ಆತ್ಮಕತೆ	ವೈ.ವಿ. ರೆಡ್ಡಿ ನಿರೂಪಣೆ-ಎಂ.ಎಸ್. ಶ್ರೀರಾಮ್
ಧರ್ಮಯುದ್ಧ	ಕಾದಂಬರಿ	ನಾ.ಮೊಗಸಾಲೆ
ಸೋಲಿಗ ಚಿತ್ರಗಳು	ಅಧ್ಯಯನ ಕೃತಿ	ಜಿ.ಎಸ್.ಜಯದೇವ



ಕರಾಳತೆ ಮರೆಸಿದ ಚಿನ್ನದ ಹೊಳಪು

2021 ಭಾರತದ ಕ್ರೀಡಾರಂಗಕ್ಕೆ ಅತಿ ಹೆಚ್ಚು ಯಶಸ್ಸು ತಂದುಕೊಟ್ಟ ವರ್ಷ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಏಳು ಪದಕ, ಪ್ಯಾರಾಲಿಂಪಿಕ್ಸ್‌ನಲ್ಲಿ ದಿಗ್ವಿಜಯ, ಟೆಸ್ಟ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ ಜಯಭೇರಿ, ಅಂತರರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಪದಕ ಬೇಟೆ... ಜೊತೆಗೆ ಒಂದಿಷ್ಟು ವಿವಾದ, ಚರ್ಚೆಗಳೂ ಸೇರಿದವು.

ಚಿನ್ನದ ಹುಡುಗ ನೀರಜ್ ಚೋಪ್ರಾ

ಮೀರಾಬಾಯಿ ಚಾನು

ಪಿ.ವಿ.ಸಿಂಧು

ಗಿರೀಶ ದೊಡ್ಡಮನಿ

ಆಗಸ್ಟ್ ಏಳು..

2021ನೇ ಇಸವಿಯ ಕರಾಳ ನೆನಪುಗಳೆಲ್ಲವನ್ನೂ ಮರೆಸಿ ಹರ್ಷದ ಹೊನಲು ಉಕ್ಕಿದ ದಿನವದು. ಅಂದು ಟೋಕಿಯೊದ ಒಲಿಂಪಿಕ್ಸ್ ಅಂಗಳದಲ್ಲಿ ಭಾರತದ ನೀರಜ್ ಚೋಪ್ರಾ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಗಳಿಸಿದ್ದೇ ಸಂಭ್ರಮ ಗರಿಗೆದರಲು ಕಾರಣವಾಯಿತು. ಭಾರತದ ಟ್ರ್ಯಾಕ್ ಮತ್ತು ಫೀಲ್ಡ್ ಇತಿಹಾಸದಲ್ಲಿ ಒಲಿದ ಮೊತ್ತಮೊದಲ ಒಲಿಂಪಿಕ್ಸ್ ಚಿನ್ನ ಅದು.

ಕೋವಿಡ್ ಎರಡನೇ ಅಲೆಯಲ್ಲಿ ತತ್ತರಿಸಿದ್ದ ಮನಗಳಿಗೆ ನೀರಜ್ ಸಾಧನೆ ತಂಪೆರೆದಿದ್ದು ಸುಳ್ಳಲ್ಲ. ಅವರಷ್ಟೇ ಅಲ್ಲ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಭಾರತದ ಪ್ರತಿ ಅಥ್ಲೀಟ್ ಕೂಡ ಈ ಬಾರಿ ದೇಶವಾಸಿಗಳಲ್ಲಿ ಹೊಸ ಭರವಸೆ ತುಂಬಿದರು. ಒಟ್ಟು ಏಳು ಪದಕ ಗೆದ್ದ ಭಾರತ ತಂಡವು ಶ್ರೇಷ್ಠ ಸಾಧನೆ ಮಾಡಿತು. ಕಳೆದೆರಡು ವರ್ಷಗಳಿಂದ ಕೊರೊನಾ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಸೂಕ್ತ ಅಭ್ಯಾಸ ಮಾಡಲಾಗದಿದ್ದರೂ ಇಂತಹದೊಂದು ಸಾಧನೆ ಮೂಡಿಬಂದಿದ್ದು ಆಶಾದಾಯಕ ಬೆಳವಣಿಗೆ.

ಮಹಿಳೆಯರ ಬ್ಯಾಡ್ಮಿಂಟನ್‌ನಲ್ಲಿ ಕಂಚಿನ ಪದಕ ಕೊರಳಿಗೇರಿಸಿಕೊಂಡವರು ಪಿ.ವಿ. ಸಿಂಧು. ಸತತ ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದ ಸಾಧಕಿ ಅವರು. ಕೂಟದ ಮೊದಲ ದಿನವೇ ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಜಯಿಸಿದ ಮಣಿಪುರದ ಕಣ್ಮಣಿ ಮೀರಾಬಾಯಿ ಚಾನು, ಬಡತನ, ಸೌಲಭ್ಯಗಳ ಕೊರತೆಗಳಿದ್ದರೂ ಛಲದಿಂದ ಸಾಧನೆ ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು. ತಮ್ಮ ಹಳ್ಳಿಯಿಂದ ಪಟ್ಟಣಕ್ಕೆ ಹೋಗಿ ಅಭ್ಯಾಸ ಮಾಡಲು ನೆರವಾಗಿದ್ದ ಲಾರಿ ಚಾಲಕರನ್ನು ಕರೆದು ಉಡುಗೊರೆ, ಔತಣ ನೀಡಿ ಕೃತಜ್ಞತೆ ಸಲ್ಲಿಸಿದ ಅವರ ನಡೆ ಜನಮನ ಗೆದ್ದಿತು.

ಅಸ್ಸಾಂ ಹುಡುಗಿ ಲವ್ಲಿನಾ ಬೊರ್ಗೊಹೈನ್ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಗೆದ್ದು ರಾತ್ರಿ ಬೆಳಗಾಗುವುದರೊಳಗೆ ತಾರೆಯಾಗಿ ಬೆಳಗಿದರು. ಪುರುಷರ ಕುಸ್ತಿಯ 57 ಕೆ.ಜಿ. ವಿಭಾಗದಲ್ಲಿ ರವಿಕುಮಾರ್ ದಹಿಯಾ ಬೆಳ್ಳಿ, 65 ಕೆ.ಜಿ. ವಿಭಾಗದಲ್ಲಿ ಬಜರಂಗ್ ಪೂನಿಯಾ ಕಂಚಿನ ಪದಕ ಕೊರಳಿಗೇರಿಸಿಕೊಂಡರು.

41 ವರ್ಷಗಳಿಂದ ಪದಕ ಬರ ಎದುರಿಸಿದ್ದ ಭಾರತದ ಹಾಕಿ ತಂಡವು ಈ ಬಾರಿ ಗುರಿ ತಪ್ಪಲಿಲ್ಲ. ಮನಪ್ರೀತ್ ಸಿಂಗ್ ನಾಯಕತ್ವದ ಬಳಗವು ಕಂಚಿನ ಪದಕ ಜಯಿಸುವಲ್ಲಿ ಯಶಸ್ವಿಯಾಯಿತು. ಮಹಿಳಾ ವಿಭಾಗದಲ್ಲಿ 'ಕಪ್ಪುಕುದುರೆ'ಯಾಗಿ ಕಣಕ್ಕಿಳಿದಿದ್ದ ರಾಣಿ ರಾಂಪಾಲ್ ಬಳಗವು ಕೂದಲೆಳೆಯ ಅಂತರದಲ್ಲಿ ಪದಕ ತಪ್ಪಿಸಿಕೊಂಡಿತು. ಆದರೆ, ಈ ಹುಡುಗಿಯರು ಆಡಿದ ರೀತಿಗೆ ಜಗವೇ ನಿಬ್ಬೆರಗಾಯಿತು. ವಿಶ್ವದ ಉದ್ದಗಲಕ್ಕೂ ಪ್ರಶಂಸೆಯ ಸುರಿಮಳೆಯಾಯಿತು. ಮಹಿಳಾ ಹಾಕಿಯ ಹೊಸ ಪರ್ವ ಆರಂಭವಾಯಿತು.

ಈ ಒಲಿಂಪಿಕ್ಸ್‌ನ ಮತ್ತೊಂದು ವಿಶೇಷವೆಂದರೆ, ಗಾಲ್ಫ್ ಪಂದ್ಯವನ್ನು ನೋಡಲು ದೇಶದ ಬಹಳಷ್ಟು ಕ್ರೀಡಾಪ್ರೇಮಿಗಳು ಬೆಳಗಿನ ಜಾವವೇ ಎದ್ದು ಟಿವಿ ಮುಂದೆ ಕುಳಿತಿದ್ದು! ಅದಕ್ಕೆ ಕಾರಣರಾಗಿದ್ದು ಬೆಂಗಳೂರಿನ ಅದಿತಿ ಅಶೋಕ್. ಮಹಿಳೆಯರ ಗಾಲ್ಫ್‌ನಲ್ಲಿ ಈ ಆಟಗಾರ್ತಿಯು ಅಲ್ಪ ಅಂತರದಲ್ಲಿ ಪದಕ ಕೈತಪ್ಪಿಸಿಕೊಂಡರು. ನಾಲ್ಕನೇ ಸ್ಥಾನ ಪಡೆದರು. ಬೆಂಗಳೂರಿನ ಶ್ರೀಹರಿ ನಟರಾಜ್ ಈಜಿನಲ್ಲಿ ಗಮನ ಸೆಳೆದರು. ಫೆನ್ಸಿಂಗ್‌ನಲ್ಲಿ ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದ ಭವಾನಿದೇವಿ, ಸೇಲಿಂಗ್‌ನಲ್ಲಿ ಅರ್ಹತೆ ಗಿಟ್ಟಿಸಿದ ನೇತ್ರಾ ಕುಮನನ್, ಈಕ್ವೆಸ್ಟ್ರಿಯನ್‌ನಲ್ಲಿ ಭರವಸೆ ಮೂಡಿಸಿದ ಫವಾದ್ ಮಿರ್ಜಾ ಮತ್ತಿತರರು ಗಮನ ಸೆಳೆದರು.

ಒಲಿಂಪಿಕ್ಸ್ ಬಿಟ್ಟರೆ, ನೈರೋಬಿಯಲ್ಲಿ ನಡೆದ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಭಾರತದ ಶೈಲಿ ಸಿಂಗ್ ಮತ್ತು ಅಮಿತ್ ಕ್ರಮವಾಗಿ ಲಾಂಗ್ ಜಂಪ್ ಹಾಗೂ 10 ಸಾವಿರ ಮೀಟರ್ ನಡಿಗೆಯಲ್ಲಿ ಬೆಳ್ಳಿ ಗೆದ್ದರು. ಕನ್ನಡತಿ ಪ್ರಿಯಾ ಮೋಹನ್ ಅವರಿದ್ದ ತಂಡವು 4X400 ಮೀ ಮಿಶ್ರ ರಿಲೆಯಲ್ಲಿ ಕಂಚು ಜಯಿಸಿತು.

ಕ್ರಿಕೆಟ್ ಏರುಮುಖ; ಕೊಹ್ಲಿ ಇಳಿಮುಖ!

ಭಾರತದ ಕ್ರಿಕೆಟ್ ಕ್ಷೇತ್ರ ಎರಡು ವೈರುಧ್ಯಗಳಿಗೆ ಸಾಕ್ಷಿಯಾದ ವರ್ಷ ಇದು. ಆಸ್ಟ್ರೇಲಿಯಾ, ಇಂಗ್ಲೆಂಡ್‌ನಲ್ಲಿ ಟೆಸ್ಟ್ ವಿಜಯ ಸಾಧಿಸಿದ್ದು ಹೆಗ್ಗಳಿಕೆ. ಆದರೆ, ನಾಯಕ ವಿರಾಟ್ ಕೊಹ್ಲಿ ವೃತ್ತಿ ಜೀವನವು ಇಳಿಜಾರಿನಲ್ಲಿ ಸಾಗಿದ್ದು ಕೂಡ ವಿಪರ್ಯಾಸ. ಟಿ20 ವಿಶ್ವಕಪ್ ನಂತರ ಟಿ20 ಕ್ರಿಕೆಟ್ ತಂಡದ ನಾಯಕತ್ವವನ್ನು ಅವರು ಬಿಟ್ಟುಕೊಟ್ಟರು. ಏಕದಿನ ತಂಡದ ನಾಯಕತ್ವದಿಂದ ಬಿಸಿಸಿಐ ಅವರನ್ನು ಕೆಳಗಿಳಿಸಿತು. ಇದೀಗ ಅವರು ಟೆಸ್ಟ್ ತಂಡಕ್ಕೆ ಮಾತ್ರ ನಾಯಕರಾಗಿದ್ದಾರೆ. ಸೀಮಿತ ಓವರ್‌ಗಳ ಕ್ರಿಕೆಟ್ ತಂಡಕ್ಕೆ ರೋಹಿತ್ ಶರ್ಮಾ ನಾಯಕರಾಗಿದ್ದಾರೆ.

ಈ ವರ್ಷದ ಮೊದಲ ತಿಂಗಳಲ್ಲಿಯೇ ಬ್ರಿಸ್ಬೇನ್‌ನ ಗಾಬಾದಲ್ಲಿ ಐತಿಹಾಸಿಕ ಟೆಸ್ಟ್ ವಿಜಯ ಸಾಧಿಸಿದ ಭಾರತ ಸಂಭ್ರಮಿಸಿತು. ಆಸ್ಟ್ರೇಲಿಯಾಕ್ಕೆ ಅದರ ನೆಲದಲ್ಲಿಯೇ ಸರಣಿ ಸೋಲುಣಿಸಿತ್ತು. ಆದರೆ ಆ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಸೇರಿದಂತೆ ಪ್ರಮುಖ ಆಟಗಾರರ ಅನುಪಸ್ಥಿತಿ ಇತ್ತು. ವಾಷಿಂಗ್ಟನ್ ಸುಂದರ್, ಮೊಹಮ್ಮದ್ ಸಿರಾಜ್, ರಿಷಭ್ ಪಂತ್ ಅವರಂತಹ ಯುವ ಆಟಗಾರರು ಅಜಿಂಕ್ಯ ರಹಾನೆ ನಾಯಕತ್ವದಲ್ಲಿ ಮಾಡಿದ ಸಾಧನೆ ಅದು.

ಫೆಬ್ರುವರಿಯಲ್ಲಿ ಅಹಮದಾಬಾದ್‌ನಲ್ಲಿ ಉದ್ಘಾಟನೆಗೊಂಡ ಬೃಹತ್ ಕ್ರೀಡಾಂಗಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ನಾಮಕರಣ ಮಾಡಿದ್ದು ಭಾರೀ ವಿವಾದಕ್ಕೆ ಕಾರಣವಾಯಿತು. ಆದರೆ, ಇದೇ ಅಂಗಳದಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಭಾರತ ಭರ್ಜರಿ ಜಯ ಸಾಧಿಸಿ ದಾಖಲೆ ಬರೆಯಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಭಾರತದಲ್ಲಿಯೇ ಆಯೋಜಿಸಲಾಗಿತ್ತು. ಆದರೆ, ಮೊದಲ ಹಂತದ ಪಂದ್ಯಗಳು ಮುಗಿಯುವಷ್ಟರಲ್ಲಿ ಕೆಲವು ಆಟಗಾರರು ಕೋವಿಡ್‌ಗೆ ತುತ್ತಾದರು. ಅದರಿಂದಾಗಿ ಟೂರ್ನಿಯ ಉಳಿದ ಪಂದ್ಯಗಳನ್ನು ಮುಂದೂಡಲಾಯಿತು.

ಜೂನ್‌ನಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ಭಾರತ ನಿರಾಶೆ ಅನುಭವಿಸಿತು. ಕಳೆದ ಅಕ್ಟೋಬರ್‌ನಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಉಳಿದ ಟೂರ್ನಿ ಆಯೋಜನೆಗೊಂಡಿತು. ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಚಾಂಪಿಯನ್ ಆಯಿತು. ತದನಂತರದ ಟಿ20 ವಿಶ್ವಕಪ್‌ನಲ್ಲಿ ಭಾರತ ಪಾಕಿಸ್ತಾನದ ಎದುರು ಸೋತಿತು. ವಿಶ್ವಕಪ್ ಮಟ್ಟದ ಟೂರ್ನಿಗಳಲ್ಲಿ ಪಾಕ್ ಎದುರು ಭಾರತ ಅನುಭವಿಸಿದ ಮೊದಲ ಸೋಲಿದು. ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ಗೆದ್ದ ಆಸ್ಟ್ರೇಲಿಯಾ ಚಾಂಪಿಯನ್ ಆಯಿತು.

ಭಾರತ ತಂಡದ ಮುಖ್ಯಕೋಚ್ ಆಗಿ ರಾಹುಲ್ ದ್ರಾವಿಡ್ ನೇಮಕವಾಗಿದ್ದಾರೆ. ಇದೀಗ ತಂಡವು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿದೆ.

ರಾಹುಲ್ ದ್ರಾವಿಡ್ ಮತ್ತು ವಿರಾಟ್ ಕೊಹ್ಲಿ

ಪ್ಯಾರಾಲಿಂಪಿಕ್ಸ್‌ನಲ್ಲಿ 'ಸುಹಾಸ'

ವಿಕ್ರಂ ಕಾಂತಿಕೆರೆ

ಈ ವರ್ಷ ಭಾರತದ ಕ್ರೀಡಾಕ್ಷೇತ್ರಕ್ಕೆ ಪ್ಯಾರಾಲಿಂಪಿಯನ್ನರೂ ಕಳೆ ತುಂಬಿದ್ದಾರೆ. ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ದಾಖಲೆ ಸಂಖ್ಯೆಯ 19 ಪದಕಗಳು ಭಾರತಕ್ಕೆ ಬಂದವು. ಈ ಸಾಧನೆಗಳೊಂದಿಗೆ ಕನ್ನಡಿಗರ ಸಂಭ್ರಮ ಹೆಚ್ಚಿಸಿದವರು ಬ್ಯಾಡ್ಮಿಂಟನ್‌ನ ಎಸ್‌ಎಲ್-4 ವಿಭಾಗದಲ್ಲಿ ಬೆಳ್ಳಿ ಗೆದ್ದ ಸುಹಾಸ್ ಯತಿರಾಜ್.

ಐದು ಚಿನ್ನದೊಂದಿಗೆ 19 ಪದಕ ಗಳಿಸಿದ ಭಾರತ ಒಟ್ಟಾರೆ 24ನೇ ಸ್ಥಾನದಲ್ಲಿ ಮಿಂಚಿತು. ಈ ಹಿಂದೆ, 2016ರಲ್ಲಿ ಎರಡು ಚಿನ್ನ ಗೆದ್ದಿರುವುದು ಭಾರತದ ಗರಿಷ್ಠ ಸಾಧನೆಯಾಗಿತ್ತು. ಆ ವರ್ಷ ಒಟ್ಟು ನಾಲ್ಕು ಪದಕಗಳು ಭಾರತದ ಪಾಲಾಗಿದ್ದವು. 1984ರಲ್ಲೂ ನಾಲ್ಕು ಪದಕ (ತಲಾ ಎರಡು ಬೆಳ್ಳಿ, ಎರಡು ಕಂಚು) ಗಳಿಸಿ 'ಶ್ರೇಷ್ಠ' ಸಾಧನೆ ಮಾಡಿತ್ತು. ಈ ಬಾರಿ ಎಂಟು ಬೆಳ್ಳಿ ಮತ್ತು ಆರು ಕಂಚಿನ ಪದಕಗಳೂ ಭಾರತದ ಕ್ರೀಡಾಪಟುಗಳ ಕೊರಳನ್ನು ಅಲಂಕರಿಸಿದ್ದವು.

ಜೀವನ 'ಕುಸ್ತಿ'ಯಲ್ಲಿ ಖಳ ಸುಶೀಲ್

ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಕುಸ್ತಿ ಕಣದ ನಾಯಕ ನಿಜಜೀವನದಲ್ಲಿ 'ಖಳ'ನಾಗಿ ಭಾರತ ಕ್ರೀಡಾಕ್ಷೇತ್ರಕ್ಕೆ ಕೆಟ್ಟ ಹೆಸರು ತಂದರು. ಮಾಜಿ ಜೂನಿಯರ್ ಕುಸ್ತಿ ಚಾಂಪಿಯನ್ ಸಾಗರ್ ಅವರನ್ನು ಮೇ ತಿಂಗಳಲ್ಲಿ ಥಳಿಸಿ ಕೊಂದ ಪ್ರಕರಣದಲ್ಲಿ ಅದೇ ತಿಂಗಳಾಂತ್ಯದಲ್ಲಿ ಸುಶೀಲ್ ಬಂಧನವಾಗಿತ್ತು. ಜೂನ್ ಎರಡರಿಂದ ಸುಶೀಲ್ ಜೈಲಿನಲ್ಲಿದ್ದಾರೆ.

ವಿಶ್ವ ಬ್ಯಾಡ್ಮಿಂಟನ್‌ನಲ್ಲಿ 'ಡಬಲ್' ಸಾಧನೆ

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕಗಳು ಬಂದದ್ದು ವರ್ಷದ ಕೊನೆಯಲ್ಲಿ ಖುಷಿಗೆ ಕಾರಣವಾಯಿತು. ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಕೊರೊನಾದಿಂದಾಗಿ ಸಂಕಷ್ಟಕ್ಕೆ ಒಳಗಾಗಿದ್ದ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಇದು ಬೆಳಕಿಂಡಿಯಾಗಿ ಮೂಡಿತು.

ಲಕ್ಷ್ಯ ಸೇನ್
ಕಿದಂಬಿ ಶ್ರೀಕಾಂತ್
ಸುಹಾಸ್ ಯತಿರಾಜ್

ವಿಷಾದ, ವಿನೋದ, ವಿಸ್ಮಯ

8ನೇ ಪುಟದಿಂದ...

ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಘಟಕಗಳಲ್ಲಿ ಎಷ್ಟು ಮುಚ್ಚಿ ಹೋದವು ಎಂಬುದರ ಲೆಕ್ಕವೇ ಸಿಗದು ಅನ್ನುವ ಪರಿಸ್ಥಿತಿ ಇದೆ. ಹೋಟೆಲ್, ಟ್ರಾವೆಲ್ಸ್, ಪ್ರವಾಸೋದ್ಯಮದಿಂದ ತೊಡಗಿ ಹೆಚ್ಚಿನ ಉದ್ಯಮಗಳು ಹೊಡೆತ ತಿಂದವು. ಬಟ್ಟೆ, ಚಪ್ಪಲಿ ಅಥವಾ ಅಂತಹ ಇನ್ನೇನೋ ವಸ್ತುವನ್ನು ಯಾವಾಗ ಖರೀದಿಸಿದ್ದು ಎಂಬುದನ್ನು ನೀವು ನೆನಪಿಸಿಕೊಳ್ಳಿ, ಸುತ್ತಮುತ್ತಲಿನವರನ್ನೂ ಕೇಳಿ. ಅದಕ್ಕೆ ಸಿಕ್ಕ ಉತ್ತರದಲ್ಲಿ ಆರ್ಥಿಕತೆಗೆ ಎಷ್ಟು ದೊಡ್ಡ ಏಟು ಬಿದ್ದಿದೆ ಎಂಬುದು ತಿಳಿಯುತ್ತದೆ.

ವರ್ಷಾರಂಭದಿಂದ ಕೊನೆಯ ವರೆಗೂ ಬೆಲೆ ಏರಿಕೆಯ ಬಗ್ಗೆ ಗೊಣಗದೇ ಇರುವವರ ಸಂಖ್ಯೆ ಬೆರಳೆಣಿಕೆಯಷ್ಟೇ ಇರಬಹುದೇನೋ. ಮನೆ ಬಳಕೆಯ ವಸ್ತುಗಳೇ ಇರಲಿ, ನಿರ್ಮಾಣ ಕಾಮಗಾರಿಗೆ ಬಳಸುವ ಸಿಮೆಂಟ್, ಉಕ್ಕುವಿನಂತಹ ವಸ್ತುಗಳೇ ಇರಲಿ ಎಲ್ಲದರ ಬೆಲೆಯೂ ಗಗನದಲ್ಲಿಯೇ ಸ್ಥಾಯಿಯಾಗಿ ಇಡೀ ವರ್ಷ ನಿಂತಿತ್ತು. ಖಾದ್ಯ ತೈಲದ ದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 60ರಷ್ಟು ಏರಿದೆ ಎಂಬುದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವೇ ನೀಡಿದ ಮಾಹಿತಿ. ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ಇಲ್ಲದ ಸಮಯದಲ್ಲಿ ಪೆಟ್ರೋಲ್, ಡೀಸೆಲ್ ದರ ನಿರಂತರವಾಗಿ ಏರುತ್ತಲೇ ಇದ್ದದ್ದು ಜನರನ್ನು ಹೊರತುಪಡಿಸಿ ಬೇರೆ ಎಲ್ಲದರ ಬೆಲೆ ಯಾರ ಕೈಗೂ ಎಟುಕದಂತೆ ಮಾಡಿತು. ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕ್ರಮವಾಗಿ ₹5 ಮತ್ತು ₹10ರಷ್ಟು ನವೆಂಬರ್ ಆರಂಭದಲ್ಲಿ ಇಳಿಸಿತು. ಕೇಂದ್ರದ ಸಲಹೆಯಂತೆ ಕೆಲವು ರಾಜ್ಯಗಳೂ ತೈಲದ ಮೇಲಿನ ವ್ಯಾಟ್ ಇಳಿಸಿದವು. ಆದರೆ, ಇದು ದೊಡ್ಡ ನಿರಾಳವನ್ನೇನೂ ತರಲಿಲ್ಲ. ಪೆಟ್ರೋಲ್ ದರ ಈಗಲೂ ₹100ರ ಆಚೆಯೇ ಇದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ನಮ್ಮ ಪ್ರಜಾಪ್ರಭುತ್ವದ ಮಹತ್ವದ ಘಟ್ಟ. ಆಗಸ್ಟ್ 15ರಂದು ಅಮೃತ ಮಹೋತ್ಸವ ಸಂಭ್ರಮಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ಕೊಟ್ಟಿದ್ದರು. ಆದರೆ, ಭಾರತವು ಪೂರ್ಣ ಮುಕ್ತ ದೇಶವಲ್ಲ, 'ಭಾಗಶಃ ಮುಕ್ತ' ಎಂದು ಫ್ರೀಡಂ ಇನ್ ದ ವರ್ಲ್ಡ್ ಸಮೀಕ್ಷೆಯು ಹೇಳಿದೆ. ಮಾಧ್ಯಮ ಸ್ವಾತಂತ್ರ್ಯದ ಸೂಚ್ಯಂಕದಲ್ಲಿ 179 ದೇಶಗಳಲ್ಲಿ ಭಾರತದ್ದು 142ನೇ ಸ್ಥಾನ. ಮಾಧ್ಯಮ ಮೇಲಿನ ಹಿಡಿತವನ್ನು ನರೇಂದ್ರ ಮೋದಿ ಅವರು ಇನ್ನಷ್ಟು ಬಿಗಿಗೊಳಿಸಿದ್ದಾರೆ ಎಂದು ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ವರದಿಯಲ್ಲಿ ಹೇಳಲಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ಇದು ಅತಿ ಕಹಿ ಸಂಗತಿಯೇ ಹೌದು.

ವರ್ಷ ಕೊನೆಯಾಗುವ ಹೊತ್ತಿಗೆ, ತಮಿಳುನಾಡಿನ ನೀಲಗಿರಿ ಜಿಲ್ಲೆಯಲ್ಲಿ ಸೇನಾ ಹೆಲಿಕಾಪ್ಟರ್ ಪತನಗೊಂಡ ದುರಂತದ ಸುದ್ದಿ ಬಂತು. ಭಾರತದ ಸೇನಾ ಪಡೆಗಳ ಮೊದಲ ಮುಖ್ಯಸ್ಥ ಜ. ಬಿಪಿನ್ ರಾವತ್ ಹಾಗೂ ಅವರ ಪತ್ನಿ ಸೇರಿ 14 ಮಂದಿ ಅವಘಡದಲ್ಲಿ ಬೆಂದು ಹೋದದ್ದು ಸ್ಮೃತಿ ಪಟಲದಿಂದ ಬೇಗನೆ ಮರೆಯಾಗದು.

ಮುಂದಿನ ವರ್ಷದ ಆರಂಭದಲ್ಲಿ ಉತ್ತರ ಪ್ರದೇಶ ಸೇರಿ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ಇದೆ. ಉತ್ತರ ಪ್ರದೇಶವೇ ಎಲ್ಲರ ಗಮನ ಕೇಂದ್ರ. ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್–ಡಿಸೆಂಬರ್‌ನಲ್ಲಿ ಉತ್ತರ ಪ್ರದೇಶದಲ್ಲಿಯೇ ಹೆಚ್ಚು ಇದ್ದರು. ಕಾಶಿ ವಿಶ್ವನಾಥ ಧಾಮದ ಉದ್ಘಾಟನೆ ಕಾರ್ಯಕ್ರಮವು ಸೌಂದರ್ಯ ಸ್ಪರ್ಧೆಯ ರೀತಿಯಲ್ಲಿ ಮಾಧ್ಯಮಗಳಲ್ಲಿ ಬಿತ್ತರವಾಯಿತು. ಹೆದ್ದಾರಿ, ವಿಮಾನ ನಿಲ್ದಾಣ, ಮಹಿಳಾ ಗುಂಪುಗಳಿಗೆ ಹಣ ವಿತರಣೆ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳ ಶಂಕು ಸ್ಥಾಪನೆ, ಚಾಲನೆ ಹೀಗೆ ಕಾರ್ಯಕ್ರಮ ಯಾವುದೇ ಇರಲಿ. ಸರ್ಕಾರಿ ಕಾರ್ಯಕ್ರಮದಲ್ಲಿ ವಿರೋಧ ಪಕ್ಷಗಳನ್ನು ಜರೆಯಲು, ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಕೋರಲು ಪ್ರಧಾನಿ ಯಾವ ಹಿಂದೇಟೂ ತೋರಲಿಲ್ಲ. ಬಿಜೆಪಿ ಮಾತ್ರವಲ್ಲ ಯಾವ ಪಕ್ಷವೂ ಮುತ್ಸದ್ದಿತನ ತೋರಲಿಲ್ಲ ಎಂಬುದು ಬೇಸರದ ಸಂಗತಿ. ಧಾರ್ಮಿಕ, ಜಾತಿ ನೆಲೆಯಲ್ಲಿ ಧ್ರುವೀಕರಣ ನಿರ್ಲಜ್ಜನವಾಗಿ ನಡೆಯಿತು. ಮುಂದಿನ ವರ್ಷ ಇದು ಇನ್ನಷ್ಟು ಅತಿರೇಕಕ್ಕೆ ಹೋಗಲಿದೆ ಎಂಬ ವಿಷಾದದೊಂದಿಗೆ ಈ ವರ್ಷವನ್ನು ಮುಗಿಸಬೇಕಿದೆ. ಮತದಾರ ಎಲ್ಲರಿಗಿಂತಲೂ ವಿವೇಕಿ ಎಂಬುದು ಹೊಸ ವರ್ಷಕ್ಕೆ ಸಮಾಧಾನ ತರಬಹುದಾದ ಸಂಗತಿ.

ಮರುಕಳಿಸುವುದೇ ಹಳೇ ಸಂಭ್ರಮ!

ಕೋವಿಡ್ ಕರಿನೆರಳಿನಲ್ಲೇ ಮತ್ತೊಂದು ಹೊಸ ವರ್ಷವನ್ನು ಸ್ವಾಗತಿಸಲು ಇಡೀ ವಿಶ್ವವೇ ಸಜ್ಜಾಗಿದೆ.

ಕಥೆ

ಜ್ಯೋತಿ ಅವರ
ನಿನಗಾಗಿ ಕಾಯುತ್ತಿದ್ದೆ, ಅಂಬಾ...

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನ

ಎಚ್.ಸಿ.ಭವ್ಯ ನವೀನ ಅವರ
ಯುದ್ಧಕಾಂಡ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಮುನ್ನೋಟ 26-12-2021 ರಿಂದ 01-01-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸಂಪನ್ಮೂಲಗಳಿಗಾಗಿ ಸಾಕಷ್ಟು ಹುಡುಕಾಟ ನಡೆಸುವಿರಿ. ಇತರರ ಕೆಲಸಗಳ ಯಶಸ್ವಿಗಾಗಿ ಸಲಹೆ ನೀಡುವ ಅವಕಾಶ ದೊರೆಯುತ್ತದೆ. ಈ ಹಿಂದೆ ನಿಲ್ಲಿಸಿದ್ದ ವಿದ್ಯಾಭ್ಯಾಸವನ್ನು ಪುನಃ ಆರಂಭಿಸಲು ಸೂಕ್ತ ಆಲೋಚನೆ ಮಾಡುವಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇದ್ದೇ ಇರುತ್ತದೆ. ಸದ್ಯದಲ್ಲೇ ಕೌಟುಂಬಿಕ ಸಮಸ್ಯೆಗಳು ಎದುರಾದರೂ ನಂತರ ತಿಳಿಯಾಗುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿದೇಶದಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಮಾಡುವವರಿಗೆ ಮಾನ್ಯತೆ ಮತ್ತು ಗೌರವ ದೊರೆಯುತ್ತದೆ. ಹಣಕಾಸಿನ ಸ್ಥಿತಿಯು ಸಾಕಷ್ಟು ಉತ್ತಮಗೊಳ್ಳುವುದು. ತಾಯಿಯ ಹಿತನುಡಿಗಳು ನಿಮಗೆ ಒಳಿತನ್ನು ಮಾಡುತ್ತವೆ. ವಿನಾಕಾರಣ ವಾದ ವಿವಾದಗಳನ್ನು ಯಾರೊಂದಿಗೂ ಮಾಡದಿರಿ. ನಿಮ್ಮ ವ್ಯವಹಾರದಲ್ಲಿ ಸಾಮಾನ್ಯ ಅಭಿವೃದ್ಧಿಯನ್ನು ಖಂಡಿತ ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವೈಯಕ್ತಿಕ ವ್ಯವಹಾರಗಳ ಹೋರಾಟದಲ್ಲಿ ಪ್ರಗತಿಯನ್ನು ಕಾಣುವಿರಿ. ಮನೆಯವರ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ. ವಿದ್ಯಾರ್ಥಿಗಳಿಗೆ ಏಕಾಗ್ರತೆ ಅತಿ ಅಗತ್ಯ. ಕೆಲವರಿಗೆ ಅಧ್ಯಯನದ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಸಂದರ್ಭವಿರುತ್ತದೆ. ಆರ್ಥಿಕ ಸಬಲತೆಗಾಗಿ ಹೊಸ ಹೊಸ ದಾರಿಗಳನ್ನು ಹುಡುಕುವಿರಿ. ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ಕೆಲಸವೊಂದು ಈಗ ಕೈಗೂಡುವುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ಇತರರ ಅಭಿವೃದ್ಧಿಯ ಬಗ್ಗೆ ಚಿಂತೆ ಮಾಡದೆ ನಿಮ್ಮ ಅಭಿವೃದ್ಧಿಯ ಬಗ್ಗೆ ಗಮನ ಹರಿಸಿರಿ. ಕ್ರೀಡಾಪಟುಗಳಿಗೆ ಅವರ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ಅವಕಾಶ ದೊರೆಯಬಹುದು. ಹಣದ ಒಳಹರಿವು ಉತ್ತಮವಾಗಿದ್ದು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಉದ್ಯೋಗದಲ್ಲಿ ಸ್ಥಾನ ಬದಲಾವಣೆಯ ಸಾಧ್ಯತೆಗಳಿವೆ. ಹಣಕಾಸಿನ ಅನುಕೂಲ ತಕ್ಕಮಟ್ಟಿಗೆ ಹೆಚ್ಚಾಗುತ್ತದೆ. ನಿಮ್ಮ ಸಮಾಜದ ಪ್ರಮುಖರೊಂದಿಗೆ ಬಾಂಧವ್ಯ ವೃದ್ಧಿಸುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಸಂಬಂಧ ಕೂಡಿ ಬರುವ ಸಾಧ್ಯತೆಗಳಿದೆ. ವಾಹನ ಚಾಲನೆ ವೇಳೆ ಸ್ವಲ್ಪ ಎಚ್ಚರವಾಗಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಹೊಸ ತಿರುವು ಬಂದು ನಿಮಗೆ ಹೆಚ್ಚಿನ ಅಧಿಕಾರ ದೊರೆಯುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಧೃಡ ಸಂಕಲ್ಪದಿಂದ ಮಾಡಿದ ಕೆಲಸಗಳು ಪೂರ್ಣಗೊಳ್ಳುವವು. ಕೃಷಿ ಕಾರ್ಯಗಳಲ್ಲಿ ಹೆಚ್ಚು ಆಸಕ್ತಿ ಮೂಡಿ ಅದರಲ್ಲಿ ತೊಡಗಿಕೊಳ್ಳುವಿರಿ. ನೃತ್ಯ ಕಲಾವಿದರುಗಳಿಗೆ ಹೆಚ್ಚಿನ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಹಿರಿಯರ ಬಗ್ಗೆ ಗೌರವ ತೋರುವುದು ಒಳ್ಳೆಯದು. ಅನವಶ್ಯಕವಾಗಿ ಇತರರನ್ನು ಹೀಗಳೆಯುವುದು ನಿಮಗೆ ನಷ್ಟ ತರುವುದು. ದೂರ ಪ್ರಯಾಣದಲ್ಲಿ ಸಂಕಟಗಳು ಎದುರಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳು ಉತ್ತಮ ಸಾಧನೆಯನ್ನು ಮಾಡಬಹುದು. ರಾಜಕಾರಣಕ್ಕೆ ಸೇರಬೇಕೆನ್ನುವವರು ತಮ್ಮ ಸ್ಥಾನಮಾನಗಳ ಬಗ್ಗೆ ಸರಿಯಾಗಿ ತಿಳಿಯುವುದು ಉತ್ತಮ. ಗೃಹನಿರ್ಮಾಣ ಮಾಡುವವರಿಗೆ ಉತ್ತಮ ಸಹಕಾರಗಳು ದೊರೆಯುತ್ತವೆ. ಹೂಡಿಕೆ ವ್ಯವಹಾರಗಳಿಂದ ಹೆಚ್ಚಿನ ಹಣ ಬರುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ವಿದ್ಯುತ್ ಉಪಕರಣಗಳನ್ನು ಮಾರಾಟ ಮಾಡುವ ವ್ಯವಹಾರದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಬಗೆಹರಿಯಬೇಕಿದ್ದ ವ್ಯಾಜ್ಯಗಳು ಸ್ವಲ್ಪ ಕಾಲ ವಿಳಂಬವಾಗುತ್ತವೆ. ನಯವಂಚಕರಿಂದ ನಿಮ್ಮ ಹಣ ಸಾಕಷ್ಟು ಪೋಲಾಗಬಹುದು. ಸ್ವಲ್ಪ ಎಚ್ಚರವಾಗಿರಿ. ನಿಮ್ಮ ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿಯನ್ನು ಕಂಡರೂ ಸಾಮಾಜಿಕ ಜೀವನದಲ್ಲಿ ಕಳಂಕ ಬರುವ ಸಾಧ್ಯತೆ ಇದೆ. ಸಂದೇಹಾಸ್ಪದ ವ್ಯಕ್ತಿಗಳಿಂದ ದೂರವಿರುವುದು ಬಹಳ ಒಳ್ಳೆಯದು.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ದಿನಗಳಿಂದ ಅನಾರೋಗ್ಯ ಪೀಡಿತರಾದ ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಹೊಸ ವಾಹನದ ಖರೀದಿಯನ್ನು ಮುಂದೂಡುವುದು ಒಳ್ಳೆಯದು. ದಿನಸಿ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಿ ಸಹಕಾರ ನೀಡುವ ನಿಮ್ಮ ಮನೋಭಾವಕ್ಕೆ ಗೌರವ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆದಾಯದಲ್ಲಿ ಏರಿಕೆ ಕಂಡು ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುತ್ತದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಸ್ವಯಂ ಉದ್ಯೋಗ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಊಟ ತಿಂಡಿಗಳನ್ನು ಅಲ್ಪಪ್ರಮಾಣದಲ್ಲಿ ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಲೇಖಕರು ಹೊಸ ವಿಚಾರದ ಬಗ್ಗೆ ಚಿಂತನ ಮಂಥನ ನಡೆಸಿ ಹೊಸ ಪ್ರಬಂಧವನ್ನು ಬರೆಯುವರು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಣಕಾಸಿನ ಅನುಕೂಲದಲ್ಲಿ ತುಸು ಏರಿಕೆಯನ್ನು ಕಾಣಬಹುದು. ಹಿರಿಯರಿಗೆ ಕೆಲವೊಂದು ಸಂಸ್ಥೆಗಳ ನಾಯಕತ್ವವನ್ನು ವಹಿಸುವ ಅವಕಾಶ ದೊರೆಯುತ್ತದೆ. ಶೃಂಗಾರ ಸಾಧನಗಳನ್ನು ತಯಾರಿಸಿ ಮಾರಾಟ ಮಾಡುವವರ ವ್ಯವಹಾರ ಹೆಚ್ಚಾಗುತ್ತದೆ. ಸ್ಥಿರಾಸ್ತಿ ಖರೀದಿ ಮಾಡುವ ಆಲೋಚನೆ ಸದ್ಯಕ್ಕೆ ಬೇಡ. ಯುವಕರ ಅತಿಯಾದ ಆತ್ಮವಿಶ್ವಾಸವು ಅವರನ್ನು ನಗೆಪಾಟಲಿಗೆ ದೂಡುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಎದುರಾಳಿಗಳ ಕಾರ್ಯತಂತ್ರಗಳು ವಿಫಲವಾಗಿ ನಿಮಗೆ ಜಯ ದೊರೆಯುತ್ತದೆ. ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅವರ ವಿಷಯದ ಆಯ್ಕೆಯ ಬಗ್ಗೆ ಗೊಂದಲಗಳು ಉಂಟಾಗುತ್ತವೆ. ಸಂಗಾತಿಯ ಸಹಕಾರದಿಂದ ಸ್ವಯಂ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಸಾಧಿಸುವಿರಿ. ಕಟ್ಟಡ ಕಟ್ಟುವ ಕಾರ್ಮಿಕರಿಗೆ ಹೆಚ್ಚಿನ ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ.

ಪದಬಂಧ 2719



ಮೇಲಿನಿಂದ ಕೆಳಕ್ಕೆ

1. ವರ್ಚಸ್ಸಿನ ಆವರಣ 5
2. ಕಾರಣವಿಲ್ಲದೆ, ಕೆಲಸವಿಲ್ಲದೆ ಹಾಗೆ...... ದ್ವಿರುಕ್ತಿಯಲ್ಲಿ ಆಡುಮಾತಿನ ಪರಿ 5
3. ಆರಂಭ ಹಾಗು ಕೊನೆಯಲ್ಲಿ ಶುಭವನ್ನು ಓದುವವ 5
4. ಅಲೆ ಅಲೆಯ ನಡುವಿನ ವ್ಯತ್ಯಾಸ 5
6. ಕೃಷ್ಣ ವರ್ಣದ ಬಾಲಕನನ್ನು ಅಕ್ಕರೆಯಲ್ಲಿ ಅಚ್ಚ ಕನ್ನಡದಲ್ಲಿ ಹೀಗೆ ಕರೆಯುವರು 3
8. ಒಂದಕ್ಕೊಂದು ಕಲೆಸು 3
10. ಸಂಸ್ಕೃತ ಪದಕ್ಕೆ ಸರಿಹೊಂದುವ ಕನ್ನಡ ಪದ 3
12. ಗಣನೆಗೆ ಬಾರದೆ ನಿಕೃಷ್ಟವಾದದ್ದು 3
13. ಮಂದಿಯ ಸಾಮಾನ್ಯ ಬದುಕು 5
14. ಕಟ್ಟಿರುವ ಸೌದೆ 3
15. ಹಣದೊಡತಿಯ ಸುಪುತ್ರ 5
16. ಹೃದಯ ಬಡಿತದಂತೆ ದೇಹದ ತಂತುಗಳ ಸಂವೇದನೆ 5
17. ಜಗಳ ಬಗೆಹರಿಸಲು ನಡೆಸುವ ಮಧ್ಯಸ್ಥಿಕೆ 3
18. ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚಾದ ಹಣ 5

ಎಡದಿಂದ ಬಲಕ್ಕೆ

1. ವಾದವನ್ನು ಮಂಡಿಸಿ ಸಮರ್ಥಿಸು 5
3. ತನಗೆ ತಾನಾಗಿ ಬಂದ ಮನೋಪ್ರವೃತ್ತಿ 5
5. ವೃದ್ಧಿಯನ್ನು ತರವಂತದ್ದು 3
7. ರಾಮನ ಸ್ನೇಹ ಪಡೆದ ವಾಲೀ ಸೋದರ 3
8. ಬೆಳಗುವ ಜಿಲ್ಲೆಯ ಹಿಂದಿನ ನಾಮ 3
9. ಮೃತ್ಯುದೇವ ಕೊಡುವ ಅತಿಯಾದ ಕಷ್ಟ 5
11. ಸದಾ ಸ್ವಪ್ನಲೋಕದಲ್ಲಿ ವಿಹರಿಸುವವ 5
13. ನೀರ ತಾವರೆ 5
16. ಕಾಸನ್ನು ಸೇರಿಸಿಡುವ ಹವ್ಯಾಸ 5
19. ಮೆಣಸಿನ ಜೊತೆ ಬರುವ ಪದಾರ್ಥ 3
20. ಪರೀಕ್ಷೆಗೆ ಓದುವ ಪುಸ್ತಕದ ಹುಳು 3
21. ಹಣದ ಮೂಲ ಸ್ವರೂಪದಲ್ಲಿ ಪಾವತಿ 3
22. ಬೆಂಗಳೂರು ಪಟ್ಟಣದ ಪರಶಿವ 5
23. ಸಂಸ್ಕೃತದಲ್ಲಿ ಆರಂಭವಾಗುವ ಕನ್ನಡದ ಆಮೇಲೆ 5

ಪದಬಂಧ ಉತ್ತರ -2718

ಮೇಲಿಂದ ಕೆಳಕ್ಕೆ

1. ವಾಗೀಶ್ವರಿ 2.ಸಿದ್ಧಾಶ್ರಮ 3.ಕಾಲಾಂತರ 4.ಗೆಲುವಾಟ 7.ಪುಟ್ಟಪ್ರಪಂಚ 9.ದೂರದರ್ಶನ 10.ಸನಿಹ 11.ನೆರಳು 15.ಸುಪ್ರಭಾತ 16.ತರಾವರಿ 17.ಗುಣತ್ರಯ 18.ರಿಯಾಯಿತಿ

ಎಡದಿಂದ ಬಲಕ್ಕೆ

1. ವಾರಾಣಸಿ 3.ಕಾಶಿಗಂಗೆ 5.ಶ್ರವಣಾತೀತ 6.ರಿಪುನಾಮ 8.ರಸದೂಟ 10.ಸಹನೆ 12.ಪ್ರತಿಧ್ವನಿ 13.ರಮಾನಂದ 14.ಹರಳು 15.ಸುಚರಿತ 17.ಗುಳ್ಳೆನರಿ 19.ರಾಮರಾವಣ 20.ತರಿತರಿ 21.ಯಥಾಸ್ಥಿತಿ

ಕೇಡುಗಾಲದ ಕುರಿತೇ ಕಟ್ಟಿದ ಪದ್ಯಗಳು

ಪದ್ಮನಾಭ ಭಟ್

ತಮ್ಮ ತಲೆಮಾರಿನ ಬಹುತೇಕ ಬರಹಗಾರರು ಟಾರು ರಸ್ತೆ, ಅಂಚು ಕೊರೆದ ಸಿಮೆಂಟು ರಸ್ತೆಗಳಲ್ಲಿ 'ಹೊಸ ನುಡಿಗಟ್ಟು' ಹುಡುಕುವುದರಲ್ಲಿ ಮುಳುಗಿರುವಾಗ, ತಾವು ಮಾತ್ರ ಕಾಡ ನಡುವಿನ ಕಾಲುಹಾದಿಯಲ್ಲಿ, ಜಗದ ನೋವುಗಳನ್ನೆಲ್ಲ ಆಯ್ದು ತನ್ನಷ್ಟಕ್ಕೆ ಹಾಡುತ್ತ ಹೊರಟಿರುವ ಒಬ್ಬಂಟಿ ಹುಡುಗನ ಹಾಗೆ ಕಾಣಿಸುತ್ತಾರೆ ರಮೇಶ ಅರೋಲಿ.

'ಬಿಡು ಸಾಕು ಈ ಕೇಡುಗಾಲಕ್ಕಿಷ್ಟು' ರಮೇಶರ ಮೂರನೇ ಕವನ ಸಂಕಲನ. ಜನಪದರು, ತತ್ತ್ವಪದಕಾರರು, ವಚನಕಾರರು ಬಳಸಿದ ಕಾವ್ಯದ 'ರೂಪ'ಗಳನ್ನು ತಮ್ಮ ಅಭಿವ್ಯಕ್ತಿಗೆ ಒಲಿಸಿಕೊಳ್ಳುವ ಪ್ರಯತ್ನವೇ ಇವರನ್ನು ಈ ತಲೆಮಾರಿನ ಬೇರೆ ಕವಿಗಳಿಗಿಂತ ಭಿನ್ನವಾಗಿಸುತ್ತದೆ.

ಈ ಸಂಕಲನದ ಮೊದಲ ಪದ್ಯ ಶುರುವಾಗುವುದು ಹೀಗೆ: 'ಮುಂಜಾಲೆ ಎದ್ದು ಮುಗಿಲಿಗೆ ಮುಗಿದೇನು / ಮರದಾಗ ಮಲಿಗೆದ್ದ ಗುಬ್ಬಿಗೆ ನಮಿಸೇನು / ಬೇರಿಗೆ ಬೆರಗಾದೆನೋ ಗಿಳಿರಾಮ / ಚಿಗುರಿಗೆ ಋಣಿಯಾದೆನೋ ಗಿಳಿರಾಮ'. ಈ ಸಾಲುಗಳು ಜನಪದ ತ್ರಿಪದಿಯೊಂದನ್ನು ನೆನಪಿಸುತ್ತದೆ. ಪ್ರಕೃತಿಯ ಬೇರು-ಚಿಗುರುಗಳನ್ನು ತಮ್ಮ ಬದುಕಿನ ಭಾಗವಾಗಿಯೇ ಗ್ರಹಿಸಿರುವ ಜನಪದರ ಜೀವನದೃಷ್ಟಿಯನ್ನೂ ನೆನಪಿಸುತ್ತದೆ. ಆದರೆ ಆ ಸಮೃದ್ಧಚಿತ್ರಣ ಹೆಚ್ಚುಕಾಲ ಉಳಿಯುವುದಿಲ್ಲ. ಪ್ರಕೃತಿಯ ನಾಶ, ಅದನ್ನು ನೆಚ್ಚಿಕೊಂಡವರ ಬದುಕಿನ ನಾಶಗಳು ಒಟ್ಟೊಟ್ಟಿಗೇ ನಡೆದು, ಚಿತ್ರದ ಬಣ್ಣಗೆಡತೊಡಗಿ, 'ಊರ ಮ್ಯಾರಿಗೆಲ್ಲ ಉಕ್ಕಿನ ಗಿಡವಾಗಿ / ಗಾಳಿಯ ಅಲೆಯೆಲ್ಲ ಕಂಪನಿ ಅಡವಾಗಿ / ಚಿಲಿಪಿಲಿ ಸದ್ದಡಗಿತೋ ಗಿಳಿರಾಮ / ಚೀರೋದು ರದ್ದಾಯಿತೋ ಗಿಳಿರಾಮ' ಎಂಬ ದಾರುಣ ದೃಶ್ಯವಾಗಿಬಿಡುತ್ತದೆ.

ಹಾಡು ಕಟ್ಟುವುದು ಈ ಕವಿಗೆ ಒಂದು ಕಸುಬಷ್ಟೇ ಅಲ್ಲ, ಅದು ಈ ನೆಲದ ನೋವುಗಳನ್ನು, ಬೆಂದವರ ಚೀರುಗಳನ್ನು, ಒಡೆದ ಹೃದಯಗಳನ್ನು ಮಾತೃಹೃದಯದಿಂದ ಅವುಚಿಹಿಡಿದು, ಅದಕ್ಕೆ ಧ್ವನಿಕೊಡುವ ಅನಿವಾರ್ಯ ಅಭಿವ್ಯಕ್ತಿ. ಆ ಅಭಿವ್ಯಕ್ತಿಗೆ ಪೂರ್ವಸೂರಿಗಳಿಂದ ಪಡೆದುಕೊಂಡ ಅಂತಃಕರಣವಿದೆ; ವಸ್ತುಗಳಿಗೂ ಜೀವನೀಡುವ ಮರುಜವಣಿ ಗುಣವಿದೆ. ಅದಕ್ಕೆ ಉದಾಹರಣೆಯಾಗಿ 'ಕುಮ್ಮಟಿ' ಪದ್ಯ ನೋಡಬಹುದು. 'ಕುಮ್ಮಟಿ' ಎಂದರೆ ತಳ ಒಡೆದ ಮಣ್ಣಿನ ಬಿಂದಿಗೆಯನ್ನು ತಲೆಕೆಳಗೆ ಮಾಡಿ ಕಟ್ಟಿದ ಒಲೆ. ತಾತನ ಕಾಲದ ಈ 'ಕುಕ್ಕುರುಗಾಲಿನ ಕುಮ್ಮಟಿ' – 'ಗುಡಿಸಲ ದುಃಖವ ಬಾನಿಗೆ ಕಕ್ಕಿದ' ಪ್ರಖರ ಚಿತ್ರವೂ ಕವಿಯ ಕಣ್ಣಿಗೆ ಕಂಡಿದೆ. ಇದುವರೆಗೆ ಒಂದು ವಸ್ತುವಾಗಿದ್ದ ಕುಮ್ಮಟಿ, 'ಗಾಳಿಗೆ ಅಲುಗಿತ್ತ ಮೂಲೆಗೆ ಮಲಗಿತ್ತ / ಅಮವಾಸೆ ಬಂದಾರೆ ಮೈನೆರೆದು ಕುಂತಿತ್ತು / ಮಳೆನೀರು ಬಿದ್ದರೆ ಕುಮ್ಮಟಿ / ಇದು ಗಳ-ಗಳ ಅತ್ತೀತ ಕುಮ್ಮಟಿ' ಎಂಬಲ್ಲಿಗೆ ಕವಿ ಕುಮ್ಮಟಿಯ ಬಗ್ಗೆ ಹೇಳುತ್ತಿದ್ದಾನೆಯೇ? ಕುಟುಂಬವ ಸಲುಹುವ ಕೆಲಸದಲ್ಲಿಯೇ ನಲುಗುತ್ತ ಬದುಕ ಸವೆಸುವ ಹೆಣ್ಣಿನ ಬಗ್ಗೆ ಹೇಳುತ್ತಿದ್ದಾನಲ್ಲವೇ ಅನಿಸಿಬಿಡುತ್ತದೆ. ಆದರೆ ಹೀಗೆ 'ಕುಮ್ಮಟಿ' ಎಂಬ ವಸ್ತುವೊಂದು 'ಅಮ್ಮ'ನ ಜೀವಂತ ಚಿತ್ರವಾಗಿ ಮನಸಲ್ಲಿ ಬೆಳೆಯುವಾಗಲೂ, ಗಾಳಿಗೆ ಅಲುಗುವ, ಮೂಲೆಯಲ್ಲಿ ಮಲಗುವ, ಮಳೆನೀರು ಬಿದ್ದಾಗ ನೀರು ಸುರಿದು ಅಳುವಂತೆ ತೋರುವ ಕುಮ್ಮಟಿಯಾಗಿಯೇ ಉಳಿದಿದೆ.



ಬಿಡು ಸಾಕು ಈ ಕೇಡುಗಾಲಕ್ಕಿಷ್ಟು
ಲೇಖಕ: ರಮೇಶ ಅರೋಲಿ
ಪ್ರಕಾಶನ: ಸಂಗಾತ ಪುಸ್ತಕ
ಸಂ: 9341757653
ಪು: 116 ₹100

ವಿಮರ್ಶೆ

ಇಲ್ಲಿನ ಬಹುತೇಕ ಪದ್ಯಗಳಿಗೆ ಒಂದು ಕಥನಗುಣವಿದೆ. ಅದರಲ್ಲಿ ಕಾಣಿಸಿಕೊಳ್ಳುವ ಪಾತ್ರಗಳಿಗೆ ಹೆಸರಿಲ್ಲದಿರಬಹುದು, ಆದರೆ ಸ್ಪಷ್ಟ ಚಹರೆಯಿದೆ. ಆ ಚಹರೆ ಒಂದು ಪಾತ್ರದ್ದಷ್ಟೇ ಆಗಿರುವುದಿಲ್ಲ. ಒಂದು ಸಮೂಹದ ಚಹರೆಯೂ ಆಗಿರುತ್ತದೆ. 'ಬರುವ ಹಬ್ಬಕ್ಕೆ ತಯಾರಾದ ಓಣಿ'ಯಲ್ಲಿ ಬರುವ 'ನನ್ನವ್ವ' ಬರೀ ಕವಿಯ ಅವ್ವ ಅಷ್ಟೇ ಅಲ್ಲ, ಖಾಲಿ ಕಂದೀಲಿನಲ್ಲಿ ಕಾದು ಕೂತಿರುವ ಮನೆಗಳಿಗೆಲ್ಲ ಮರಳಬೇಕಿರುವ ಅವ್ವ. ಹಾಗಾಗಿಯೇ ಕವಿ, 'ಇನ್ನು ಹೊತ್ತಾಯಿತು ಮನೆಗೆ ಬರ ಹೇಳಿ / ಕಡ್ಡಿಪೊಟ್ಟಣ ಕಾದಿವೆ ಕಂದೀಲಿಗೆ ಎಣ್ಣೆ ಖಾಲಿ!' ಎಂದು ಅವ್ವನ ಕರೆಯುವ ಹೊಣೆಯನ್ನು ನಮಗೇ ಬಿಡುತ್ತಾನೆ!

ತನ್ನ ಸುತ್ತಲಿನ ಬರ್ಬರ ವಿದ್ಯಮಾನಗಳಿಗೆ ತುಡಿಯುವ ಹಂಬಲ ಇಲ್ಲಿನ ಬಹುತೇಕ ಪದ್ಯಗಳಲ್ಲಿ ತೀವ್ರವಾಗಿಯೇ ಕಾಣುತ್ತದೆ. 'ಕಂತಾಗಿ ಕಾಡ್ಯಾವ ಭತ್ತದ ಸಾಲ/ ಅಂಗಡಿ ಹೊಕ್ಕಾವ ಸಗಣಿಯ ಚೀಲ', 'ಮೇಕೆಗೆ ಮೇವಿಲ್ಲ ಮೇಕಿನ್ನು-ಇಂಡಿಯ' ಎಂಬ ರೀತಿಯ ಸಮಕಾಲೀನ ರಾಜಕೀಯಕ್ಕೆ ಪ್ರತಿಕ್ರಿಯಿಸುವ ಸಾಲುಗಳು ಮತ್ತೆ ಮತ್ತೆ ಎದುರಾಗುತ್ತವೆ.

'ರಂಗೋಲಿ ತುಂಬೆಲ್ಲ ರಗುತಾದ ಚುಕ್ಕಿಯು' ಸಂಕಲನದ ಕಾಡುವ ಕವಿತೆಗಳಲ್ಲೊಂದು. 'ಪೋಟೊದ ಸೀತೆಗೆ ಪೂಜೆಯು ನಡೆದಿತ್ತು / ಪೂಟುದ್ದ ಕುಣಿಯಲ್ಲಿ ಅರೆಮುಗಿಲು ಮಲಗಿತ್ತು / ಕೈ ಚಾಚಿ ಆಕಾಶ ತಂಗ್ಯಮ್ಮ / ನಿನ್ನ ಎದೆಗಪ್ಪಿ ಅತ್ತೀತ ತಂಗ್ಯಮ್ಮ' – ಆಕಾಶವೇ ಕೈ ಚಾಚಿ, ಎದೆಗಪ್ಪಿ ಅಳುತ್ತಿರುವ ಈ ವಿದ್ರಾವಕ ಚಿತ್ರ ಮನಸ್ಸನ್ನು ಆಳವಾಗಿ ಕಲುಕಿಬಿಡುವಂಥದ್ದು, ಬಹುಕಾಲ ಉಳಿಯುವಂಥದ್ದು. ರಂಗೋಲಿಯ ನಡುವಿನ ರಕ್ತದ ಚುಕ್ಕಿಯ ರೂಪಕ ಹುಟ್ಟಿಸುವ ತಳಮಳವೂ ಅಲ್ಲಾಡಿಸಿಬಿಡುತ್ತದೆ. ಈ ಎಲ್ಲ ನೋವುಗಳ ನಡುವೆಯೂ ಕವಿ ಪೂರ್ತಿ ನಿರಾಶರಾಗುವುದಿಲ್ಲ. 'ಮಗು ಎಸೆದ ಚೆಂಡನು ಆಕಾಶವಾದರೂ ಮರಳಿ ಕೊಟ್ಟಿತಲ್ಲ / ಬಿಡು ಸಾಕು ಇಷ್ಟು ಈ ಕೇಡುಗಾಲಕ್ಕೆ!' ಎಂಬ ಆಶಾವಾದ ಪದ್ಯ ಕಟ್ಟುವ ಕುರಿತ ಅವರ ನಂಬಿಕೆಯೂ ಹೌದು.

'ಕೈ ಹೆಂಡ ಕರಾಮತ್ತು...' ಪದ್ಯದ ಶಂಭುಲಿಂಗ ಗುಡಿಯೊಳಗಿನ ದೇವರಲ್ಲ. 'ಅರೆಹೊಟ್ಟೆಲೆ ಮಲಗಿ ಆಯಿತಾರ ನೀನೆದ್ದು/ ಮೇಸ್ತ್ರಿರಿ ಮನೆ ಮುಂದ ಬಟವಾಡೆಗೆ ಬಂದು / ಸಿಕ್ಕಕೂಲಿಗಿಷ್ಟು ಚಿಕ್ಕನ್ನು ನೀತಿಂದು / ಕೈಲಿ ಬಿಡಿದು ಬರುವಾಗ ಕದ್ದು ಮುಚ್ಚಿ ಹೋಗಿ / ಮಟಮಟ ಮಧ್ಯಾಹ್ನ ಶಂಭುಲಿಂಗ/ ನೀ ಗಟಗಟ ಎತ್ತಿದ್ದಿ ಶಂಭುಲಿಂಗೋ' – ಇಂಥ ಶಂಭುಲಿಂಗ ನಮ್ಮೊಳಗೆ ಹಲಬಗೆಯ ರಿಂಗಣಗಳನ್ನು ಎಬ್ಬಿಸುತ್ತಿರುವಾಗಲೇ ಪದ್ಯದ ಕೊನೆಯ ಟಿಪ್ಪಣಿ, ಅವನನ್ನು ವಾಸ್ತವಕ್ಕೆ ಕಟ್ಟಿಹಾಕಿ ನಿರಾಸೆಗೊಳಿಸುತ್ತದೆ.

ಕೆಲವು ಕಡೆ ರಮೇಶ್ ಸಂಯಮದ ಗೆರೆ ಮೀರುವುದೂ ಇದೆ. ಹಾಗೆ ಮೀರಿದಾಗೆಲ್ಲ ಅವರ ಹಾಡುಧ್ವನಿ ತುಸು ಗೊಗ್ಗರಾಗುತ್ತದೆ. ಪದ್ಯದ ಒಳಲಯ ತಪ್ಪಿ ಘೋಷಣೆಗಳ ಹಾಗೆ ಭಾಸವಾಗುತ್ತದೆ. ಇವರ ಪದ್ಯಗಳ ವಿಶಿಷ್ಟ ಗುಣವಾದ ಲಯಗಾರಿಕೆಯೇ ಕೆಲವೊಮ್ಮೆ ಕಾವ್ಯದ ಸಹಜ ನಡೆಗೆ ಅಡಚಣೆ ಮಾಡುವುದೂ ಇದೆ. ಹಾಗೆಯೇ ಚಂದದ ಬಿಡಿ ಇಮೇಜ್‌ಗಳ ವ್ಯಾಮೋಹವೂ ಇಡೀ ಪದ್ಯದ ಅನುಭವಕ್ಕೆ ತಡೆಯಾಗಿರುವುದೂ ಇದೆ. ಆದರೆ ಈ ಎಲ್ಲ ಮಿತಿಗಳನ್ನು ಮೀರಿಕೊಳ್ಳುವುದು ರಮೇಶರಿಗೆ ದುಸ್ಸಾಧ್ಯವೇನಲ್ಲ. ಯಾಕೆಂದರೆ ಎದೆದನಿಯನ್ನು ನೆಚ್ಚಿ ಹಾಡುಕಟ್ಟುವ ಕಲೆ ಅವರಿಗೆ ಸಿದ್ಧಿಸಿದೆ. ❖

ಮೊದಲ ಓದು

ಕಸುವು ತುಂಬುವ ಕಾವ್ಯ

ಚಳವಳಿಯ ಹಾಡುಗಳು
ಲೇ: ಬರಗೂರು ರಾಮಚಂದ್ರಪ್ಪ
ಪ್ರ:ಜನ ಪ್ರಕಾಶನ, ಬೆಂಗಳೂರು.
ಸಂ: 9448324727
ಪು: 80 ₹50

ಅಂತರಂಗದ ಭಾವನೆಗಳಿಗೆ ಒದಗಿಬರುವ ಗೀತೆ, ಸಮುದಾಯದ ಸಮೂಹಗಾನವೂ ಆಗಬಲ್ಲದು ಎನ್ನುವುದನ್ನು ಮನದಟ್ಟು ಮಾಡಿಸುವಂತಹ ನಲವತ್ತೆರಡು ಹಾಡುಗಳ ಕಟ್ಟು ಬರಗೂರು ರಾಮಚಂದ್ರಪ್ಪ ಅವರ – 'ಚಳವಳಿಯ ಹಾಡುಗಳು.'

ಚಳವಳಿಯ ಬಿತ್ತದಲ್ಲಿರುವುದು ಸಮಾನತೆ ಹಾಗೂ ನ್ಯಾಯದ ಅಪೇಕ್ಷೆ. ಆ ಹಂಬಲವೇ ಇಲ್ಲಿನ ರಚನೆಗಳ ಹೂರಣವೂ ಆಗಿದೆ. ಆಕ್ರೋಶ ಮತ್ತು ಭಾವುಕತೆ ಚಳವಳಿಯ ಹಾಡುಗಳಲ್ಲಿನ ಸಾಮಾನ್ಯ ಅಂಶಗಳು. ಬರಗೂರರ ಗೀತೆಗಳಲ್ಲೂ ಭಾವುಕತೆ ಇದೆ, ಭಾವಾವೇಶವಿಲ್ಲ. ಆಕ್ರೋಶದ ಬದಲು ಸತ್ಯಾಗ್ರಹಿಯ ಸಂಯಮವಿದೆ. ಈ ಸಾವಧಾನವೇ ಇಲ್ಲಿನ ರಚನೆಗಳನ್ನು ಚಳವಳಿಯ ಹಾಡುಗಳ ಪರಂಪರೆಯಲ್ಲಿ ಭಿನ್ನವಾಗಿ ನೋಡಲು ಒತ್ತಾಯಿಸುತ್ತವೆ. ನಲವತ್ತೆರಡು ಗೀತೆಗಳು ಈ ಸಂಕಲನದಲ್ಲಿವೆ. ಈ ಗೀತೆಗಳ ಮೂಲಕ ಬರಗೂರರ ವೈಚಾರಿಕತೆಯ ಪಾರ್ಶ್ವನೋಟ ಸಾಧ್ಯ. ಬರಗೂರರ ವಿಚಾರ ಸಾಹಿತ್ಯದಲ್ಲಿ ಮತ್ತೆ ಮತ್ತೆ ಕಾಣುವ ಬೆವರು, ಬೆವರಿನ ಇಂಡಿಯಾ, ಜಾಲೀಮರ, ಶ್ರಮಜೀವಿ, ಕರುಳು, ಸೂರ್ಯ, ಮುಂತಾದ ಪ್ರತಿಮೆಗಳು ಇಲ್ಲಿನ ಹಾಡುಗಳಲ್ಲೂ ಇವೆ.

'ಚಳವಳಿ ಮತ್ತು ಸಾಹಿತ್ಯ' ಶೀರ್ಷಿಕೆಯ ದೀರ್ಘ ಪ್ರಸ್ತಾವನೆ ಸಂಕಲನದ ವಿಶೇಷಗಳಲ್ಲೊಂದು. ಚಳವಳಿಯಿಂದ ಸೃಜನಶೀಲ ಸಾಹಿತ್ಯ ರಚನೆಗೆ ಹಿನ್ನಡೆಯಾಗುತ್ತದೆ ಎನ್ನುವ ನಂಬಿಕೆಯ ಪೊಳ್ಳುತನವನ್ನು ಉದಾಹರಣೆಗಳ ಸಮೇತ ನಿರಾಕರಿಸುವ ಈ ಬರಹ ಸಾಹಿತ್ಯ ವಿದ್ಯಾರ್ಥಿಗಳು ಗಮನಿಸಬೇಕಾದುದು. ❖

ಕಾದಂಬರಿಯಾದ ಪ್ರಚಲಿತ ಸಮಸ್ಯೆ

ಇಂಗ್ಲಿಷ್ ಆರ್ಭಟದ ನಡುವೆ ಕನ್ನಡ ಭಾಷೆಯ ಉಳಿವು, ಮಾತೃಭಾಷೆಯಲ್ಲಿ ಶಿಕ್ಷಣ, ಸರ್ಕಾರಿ ಶಾಲೆಗಳ ರಕ್ಷಣೆ ಸದಾ ಚರ್ಚೆಯಲ್ಲಿರುವ, ಪ್ರಸ್ತುತವಾಗಿರುವ ವಿಷಯಗಳು. ಈ ಎಲ್ಲ ವಿಷಯಗಳನ್ನು ಬೆರೆಸಿ, ಕುಟುಂಬದ ಕಥೆಯೊಂದನ್ನು ಆಧಾರವಾಗಿಟ್ಟುಕೊಂಡು 'ನೆಲದ ನುಡಿಯ ಕಂಪು' ಪಸರಿಸಿದ್ದಾರೆ ಈರಣ್ಣ ಬಡಿಗೇರ.

ಇದೊಂದು ವಿಶೇಷ ಕಾದಂಬರಿ. ಇಲ್ಲಿನ ಮೂಲ ಉದ್ದೇಶ ಕನ್ನಡ ಭಾಷೆಯ ಉಳಿವು ಹಾಗೂ ಉದ್ಧಾರ. ಕೃತಿಯ ಆರಂಭದಲ್ಲಿ ಶ್ರೀಧರ ಹಾಗೂ ಆತನ ಸಹಪಾಠಿ ಸೋಮೇಶನ ನಡುವೆ ನಡೆಯುವ 'ಸರ್ಕಾರಿ ಶಾಲೆಯ ನ್ಯೂನತೆ ಹಾಗೂ ಕಾನ್ವೆಂಟ್ ಶಾಲೆಯ ಲಾಭದ' ದೀರ್ಘ ಚರ್ಚೆ ಇಡೀ ಕಾದಂಬರಿಗೆ ವೇದಿಕೆ ಒದಗಿಸುತ್ತದೆ.

ಬೆಂಗಳೂರಿನಂಥ ಮಹಾನಗರಿಗಳಲ್ಲಿ ರಸ್ತೆಗೊಂದರಂತೆ ತಲೆಎತ್ತುತ್ತಿರುವ ಇಂಗ್ಲಿಷ್ ಶಾಲೆಗಳ 'ಹುಟ್ಟು-ಬೆಳವಣಿಗೆ'ಯ ಬಗ್ಗೆ ಸ್ಥೂಲವಾಗಿ ಪ್ರಸ್ತಾಪಿಸುವ ಲೇಖಕರು, ಇಲ್ಲಿ ಸುರಿಯುವ ಹಣ, ಪಾಲಕರ ಪರೀಕ್ಷೆ ಎಲ್ಲದಕ್ಕೂ ಕಥೆಯ ರೂಪ ನೀಡಿದ್ದಾರೆ. ಈ ಕಥೆಯ ಜೊತೆಗೇ ಗಂಡು-ಹೆಣ್ಣಿನ ಆಕರ್ಷಣೆ, ತ್ಯಾಗ, ಮದುವೆ ಮುಂತಾದ ಅಂಶಗಳನ್ನೊಳಗೊಂಡ ಕಥನ ಸಮಾನಾಂತರವಾಗಿ ಚಲಿಸುತ್ತವೆ. ಸರ್ಕಾರಿ ಶಾಲೆ ಉಳಿಸಲು ತೆಗೆದುಕೊಳ್ಳಬೇಕಾದ ಕ್ರಮ, ಇಲ್ಲಿನ ಮೂಲಭೂತ ಸೌಲಭ್ಯದ ಕೊರತೆಗಳ ಬಗ್ಗೆ ವಿವರಣೆಯೂ ಇಲ್ಲಿದೆ. ಭಾಷಾ ಸಮಸ್ಯೆಯ ಕುರಿತ ರಾಜಕೀಯ ಪ್ರತಿನಿಧಿಗಳ ಹಾಗೂ ಪೋಷಕರ ಇಬ್ಬಂದಿ ನಿಲುವಿಗೆ ಕಥೆ ಕನ್ನಡಿ ಹಿಡಿಯುತ್ತದೆ. ಕಾದಂಬರಿಯ ನಡುವೆ ಕನ್ನಡದ ಉಳಿವಿಗಾಗಿ ಎಂಬತ್ತರ ದಶಕದಲ್ಲಿ ನಡೆದ ಗೋಕಾಕ ಚಳವಳಿ, ಈ ಚಳವಳಿಗೆ ವರನಟ ಡಾ.ರಾಜ್‌ಕುಮಾರ್ ಅವರು ಧುಮ್ಮಿಕ್ಕಿದ ಬಗೆ ವಿಸ್ತೃತವಾಗಿ ಉಲ್ಲೇಖವಾಗುತ್ತದೆ. ❖

ನೆಲದ ನುಡಿಯ ಕಂಪು!
ಲೇ/ಪ್ರ: ಈರಣ್ಣ ಬಡಿಗೇರ
ಸಂ: 98440 62244
ಪು: 295 ₹295

ಅಂತಃಕರಣ ತಟ್ಟುವ ಆತ್ಮಗೀತ

ದೇವು ಪತ್ತಾರ

'ಕವಿ'ಯೇ ಕತೆಯಾಗುವುದು, ಕವಿತೆಯೇ 'ವಸ್ತು'ವಾಗುವುದು ಸಾಹಿತ್ಯದ ಹಲವು ಸೋಜಿಗಗಳಲ್ಲಿ ಒಂದು. ಇದು ಅಪರೂಪವಾದರೂ ಅಸಹಜವೇನಲ್ಲ. ಆಗಾಗ್ಗೆ ಸಾಹಿತ್ಯ ಲೋಕದಲ್ಲಿ ಬೇರೆ ಬೇರೆ ರೀತಿಯಲ್ಲಿ ದಾಖಲಾಗುತ್ತ ಬಂದ ವಿದ್ಯಮಾನ. ಕವಿತೆ ಬರೆಯುವ ಕವಿಯೊಳಗೆ ಕತೆಯೂ ಇರುತ್ತದೆ. ಕವಿಯ ಬದುಕು ಕತೆ-ಕಾವ್ಯಕ್ಕೆ ವಸ್ತುವಾಗುವುದೂ ಇದ್ದೇ ಇದೆ. ಕವಿಯ ಬದುಕು ಹಾಗೂ ಅವನು ಬರೆಯುವ ಕವಿತೆಗಳೆರಡೂ ಸಮಾಜದ ಘಟಕಗಳೇ ಆಗಿರುವುದರಿಂದ ಆ ಬಗ್ಗೆ ಕುತೂಹಲ-ಆಸಕ್ತಿಗಳು ಸಹಜ.

20ನೆಯ ಶತಮಾನದ ಕಾವ್ಯಲೋಕದಲ್ಲಿ ತಮ್ಮ 'ಅನನ್ಯ' ಕವಿತೆಗಳ ಮೂಲಕ ಗಮನ ಸೆಳೆದ 'ಕವಿಜೋಡಿ' ಕುರಿತ 'ಕಥಾಕಾವ್ಯ'ವನ್ನು ಕಟ್ಟಲು ಕವಿಯಾಗಿದ್ದ ಕತೆಗಾರ ನಟರಾಜ್ ಹುಳಿಯಾರ್ ಪ್ರಯತ್ನಿಸಿದ್ದಾರೆ ಮತ್ತು ಯಶಸ್ವಿಯೂ ಆಗಿದ್ದಾರೆ. ನಟರಾಜರೊಳಗಿನ ಕವಿ-ಕತೆಗಾರರಿಬ್ಬರೂ ಸೇರಿ ಕಟ್ಟಿದ ಕಥನ 'ಕವಿಜೋಡಿಯ ಆತ್ಮಗೀತ'. ಇದು ಏಕಕಾಲಕ್ಕೆ ಕತೆಯೂ ಹೌದು, ಕಾವ್ಯವೂ ಹೌದು.

ಇಂಗ್ಲೆಂಡಿನ ಕವಿ ಟೆಡ್ ಹ್ಯೂಸ್ (1930-1998) ಮತ್ತು ಅಮೆರಿಕದ ಕವಯತ್ರಿ ಸಿಲ್ವಿಯಾ ಪ್ಲಾತ್ (1932-1963) ಎಂಬ ಕವಿಜೋಡಿ ಜನಮನ್ನಣೆಯನ್ನು ಗಳಿಸಿದವರು. 'ದಂತಕತೆ'ಯೂ ಆದವರು. ಒಂದು ಸಂಜೆಯ ಪಾರ್ಟಿಯಲ್ಲಿ ಮುಖಾಮುಖಿಯಾದ ಈ ಇಬ್ಬರು ಕವಿಗಳು ನಂತರ ಸ್ನೇಹಿತರಾದರು. ಅದು ಪ್ರೀತಿ-ಪ್ರೇಮ-ಮೋಹಗಳಾಗಿ ಬೆಳೆದ 'ಸಂಗಾತಿ'ಗಳಾದರು. ಕವಿತೆ ಬರೆಯುವುದಕ್ಕೆ ಪರಸ್ಪರ ಪೂರಕವಾಗಿದ್ದ ಈ ಕವಿಗಳು 'ಕತೆ'ಯಾಗುವುದಕ್ಕೆ ಪೈಪೋಟಿ ನಡೆಸಿದಂತೆ ಬದುಕಿದರು.

ಉಭಯರ ನಡುವಿನ ವಿಶ್ವಾಸ ಕಡಿಮೆಯಾಗಿ ನಂಬಿಕೆಗಳು ಅಪನಂಬಿಕೆಗಳಾಗಿ 'ದೂರ' ಸರಿಯಲು ಕಾರಣವಾದವು. ಪರಸ್ಪರ ಒಮ್ಮತದಿಂದ ಬೇರೆಯಾದ ಕವಿಗಳಿಬ್ಬರೂ 'ನೆಮ್ಮದಿ' ಕಾಣಲಾಗಲಿಲ್ಲ. ಪುಟ್ಟಮಕ್ಕಳೊಂದಿಗೆ ಒಂಟಿಯಾಗಿ ಬದುಕಲು ನಿರ್ಧರಿಸಿದ ಸಿಲ್ವಿಯಾ ಕೇವಲ ತನ್ನ 31ನೇ ವಯಸ್ಸಿಗೆ ಅಂತ್ಯ ಹಾಡಿಕೊಂಡಳು. ಅದರ ಹೊಣೆ ಹೊರಬೇಕಾದ ಟೆಡ್ ಸಮಾಜದ ಕಣ್ಣಲ್ಲಿ 'ದ್ರೋಹಿ'. ನಾಯಕನೇ ಪ್ರತಿನಾಯಕನಾದಂತೆ. ಮೂರು ಬಾರಿ ಆತ್ಮಹತ್ಯೆಗೆ ಯತ್ನಿಸಿ ವಿಫಲಳಾಗಿದ್ದ ಸಿಲ್ವಿಯಾ ನಾಲ್ಕನೇ ಪ್ರಯತ್ನದಲ್ಲಿ ಯಶಸ್ವಿಯಾದಳು. ಕವಿಯೇ ಕತೆಗೆ ವಸ್ತುವಾದಳು. ಸಿಲ್ವಿಯಾಳ ಕವಿತೆಗಳ ಅನುಭವಲೋಕ ಮತ್ತು ಅದು ದಾಖಲಾಗುವ ಕ್ರಮ ಸ್ತ್ರೀವಾದಿಗಳ ಗಮನ ಸೆಳೆಯಿತು. ಮತ್ತೊಂದು ನೆಲೆಯಲ್ಲಿ ಸಾಗಿದ ಟೆಡ್‌ನ ಕವಿತೆಗಳು ಇಂಗ್ಲಿಷ್ ಕಾವ್ಯದಲ್ಲಿ ತನ್ನದೇ ಛಾಪು ಮೂಡಿಸಲು ಕಾರಣವಾದವು. ಅವನನ್ನು ಪೊಯೆಟ್ ಲಾರಿಯೆಟ್ ಮಾಡಿದವು.

ಈ ಕವಿ ಜೋಡಿಯ ಬದುಕನ್ನು ಆಧರಿಸಿ 'ಕಥಾಕಾವ್ಯ'ವನ್ನು ಕಟ್ಟುವ ಮೂಲಕ ನಟರಾಜ್ ಅವರು ಕನ್ನಡದ ಓದುಗರನ್ನು ಹೊಸ ಅನುಭವಕ್ಕೆ ತೆರೆದಿಟ್ಟಿದ್ದಾರೆ. ಕವಿತೆಗಳ ಓದು-ಕವಿಗಳ ಬದುಕಿನ ಅಧ್ಯಯನ ಎರಡೂ ಸೃಜನಶೀಲ ಅಭಿವ್ಯಕ್ತಿಯಾಗಿ ಈ ಪುಸ್ತಕದಲ್ಲಿ ಅರಳಿವೆ. ಹೀಗಾಗಿ ಇಲ್ಲಿ ಕವಿತೆಯ ಆರ್ದ್ರತೆ-ಸೊಗಸುಗಾರಿಕೆಗಳಿರುವ 'ಕತೆ'ಯ ಸೊಬಗು ಬಿಚ್ಚಿಕೊಂಡಿದೆ. ಇದನ್ನು ಓದುವಾಗ ಕವಿತೆಯ ಅನುಭವ ಆಗುತ್ತಿರುತ್ತದೆ. ಅದೇ ಹೊತ್ತಿಗೆ ಕತೆಯನ್ನೂ ಬಿಚ್ಚಿಡಲಾಗುತ್ತದೆ. ಹದಿನೆಂಟು ನೀಳ್ಗವಿತೆಗಳು ಒಟ್ಟಾಗಿ ಒಂದರ ಪಕ್ಕ ಮತ್ತೊಂದು ಕುಳಿತು ಕತೆ ಹೇಳಿವೆ. ಮಹಾಕಾವ್ಯಕ್ಕೆ ಹತ್ತಿರವಾಗಿರುವಂತೆ ಕಾಣುವ ಆದರೆ ಅದಕ್ಕಿಂತ ಭಿನ್ನ ನೆಲೆ-ದಾರಿಯ ಓದಿನ ಅನುಭವವನ್ನು ಈ 'ಕಥಾಕಾವ್ಯ' ಕಟ್ಟಿಕೊಡುತ್ತದೆ.

ಕವಿಯಾಗಿದ್ದ ಸಿಲ್ವಿಯಾಳ ಒಳಗೆ ಕಲಾವಿದಳೂ ಆಗಿದ್ದಳು. ಅವಳು ಚಿತ್ರಿಸಿದ ರೇಖೆಗಳನ್ನು ಪ್ರತಿ ಅಧ್ಯಾಯದ ಆರಂಭದಲ್ಲಿ ಹಾಕಲಾಗಿದೆ. ಸಿಲ್ವಿಯಾಳ ಈ ರೇಖೆಗಳು ಅವಳ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ತೋರಿಸುತ್ತವೆ. ಹಾಗೆಯೇ ಕವಿಗಳ ಬದುಕಿನ ನಾಟಕೀಯತೆಗೆ ದೃಶ್ಯರೂಪ ನೀಡುತ್ತವೆ. ಅವುಗಳನ್ನು ಅಚ್ಚುಕಟ್ಟಾಗಿ ಜೋಡಿಸಿರುವ ನಟರಾಜ್ ಅವರ ಶ್ರಮ ಗಮನ ಸೆಳೆಯುತ್ತದೆ. 'ರೂಪಕಗಳ ಸಾವು' ಸಂಕಲನ ಪ್ರಕಟಿಸಿದ್ದ ನಟರಾಜ್ ಅವರು ಈ ಸಂಕಲನ-ಕತೆಯ ಮೂಲಕ ಮತ್ತೊಂದು ಲೋಕ ಕಟ್ಟಿದ್ದಾರೆ. ಕನ್ನಡದ ಜಾಯಮಾನಕ್ಕೆ ಭಿನ್ನವಾದ ಆದರೆ ಅದನ್ನು ಬಗ್ಗಿಸಿ, ಒಗ್ಗಿಸಿದ ಕಸುಬುದಾರಿಕೆ ಎದ್ದು ಕಾಣಿಸುತ್ತದೆ. ಸರಾಗವಾಗಿ ಓದಿಸಿಕೊಂಡು ಹೋಗುವ ಗುಣ ಈ ಪುಸ್ತಕದ ವಿಶೇಷ.

ಈ ಕಥಾಕಾವ್ಯದ ನಾಯಕಿ ಸಿಲ್ವಿಯಾ. ಇದು ಸಿಲ್ವಿಯಾ ಕೇಂದ್ರಿತ. ಟೆಡ್‌ಗೂ ಇಲ್ಲಿ ಜಾಗ ಉಂಟು. ಮಾತ್ರವಲ್ಲ ಮಹತ್ವದ ಪಾತ್ರವೂ ಇದೆ. ಅವ ಈ ಕಾವ್ಯದ ನಾಯಕ. ಆದರೆ, ಲೋಕಗ್ರಹಿಸಿದ 'ಪ್ರತಿನಾಯಕ' ಅಲ್ಲ. ಅವರಿಬ್ಬರ ಕವಿತೆಗಳ ಸಾಲುಗಳು 'ಅನುವಾದ'ವಾಗದೇ ಕನ್ನಡೀಕರಣಗೊಂಡಿವೆ. ಕತೆಯಾಗಿಸಿವೆ. ಹೃದಯಂಗಮ ಅನ್ನಿಸುವ ಈ ಕವಿತೆಗಳ ಗುಚ್ಛ ಬುದ್ಧಿ-ಭಾವಗಳ ಹದವಾದ ಮಿಶ್ರಣದಂತಿದೆ. ❖



ಕವಿಜೋಡಿಯ ಆತ್ಮಗೀತ
ಲೇ: ನಟರಾಜ್ ಹುಳಿಯಾರ್
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಸಂ: 8880087235
ಪು: 137 ₹120

ಗಾಂಧಿ-ಅಂಬೇಡ್ಕರ್ ಹಣತೆಗಳ ಮಾರ್ಗದಲ್ಲಿ...

ಎಸ್.ಗಂಗಾಧರಯ್ಯ

'ವೈಷ್ಣವ ಜನತೋ' ಲೋಕೇಶ ಅಗಸನಕಟ್ಟೆಯವರ ಇತ್ತೀಚಿನ ಕಾದಂಬರಿ. ಅಂತೆಯೇ ಇದು ಇತ್ತೀಚೆಗೆ ಬಂದಿರುವ ತುಂಬಾ ಮಹತ್ವದ ಕಾದಂಬರಿಯೂ ಹೌದು. ತಮ್ಮ ಕಥೆ, ಕಾದಂಬರಿಗಳ ಮೂಲಕ ಈಗಾಗಲೇ ಕನ್ನಡ ಓದುಗರಿಗೆ ಪರಿಚಿತರಿರುವ ಅಗಸನಕಟ್ಟೆ ಅವರನ್ನು ಈ ಕಥನ ಕನ್ನಡ ಸಾಹಿತ್ಯ ಲೋಕದ ಯಶಸ್ವಿ ಕಾದಂಬರಿಕಾರರ ಸಾಲಿನಲ್ಲಿ ಕೂರಿಸಿದೆ.

ಸಾವಧಾನದಿಂದ ಹರಿವ ತೊರೆಯಂತೆ ಸಾಗುತ್ತಾ ಅಷ್ಟೇ ಸಮಚಿತ್ತದ ಧ್ಯಾನದೊಂದಿಗೆ ಅನಾವರಣಗೊಳ್ಳುವ ಇದರೊಳಗಿನ ಲೋಕ, ಬಹುತ್ವ ಮತ್ತು ಬಹುಮುಖೀ ಬದುಕಿನ ಆಶಯಗಳನ್ನು ಹೊಂದಿದೆ. ಜತೆಗೆ, ಇತ್ತ ಕೇವಲ ಭಾವ ಪ್ರಧಾನವೂ ಆಗದೆ, ಅತ್ತ ಒಣ ವೈಚಾರಿಕತೆಯ ಸೋಂಕಿನಿಂದಲೂ ಸೊರಗದೆ ಅರಿವು ಹಾಗೂ ಮೀರುವ ಕ್ರಿಯೆಗಳ ಮುಖೇನ ಅಂತಸ್ಸಾಕ್ಷಿಯ ಬೆಳಕಿನಲ್ಲಿ ಬೆಳಗುತ್ತದೆ. ದಟ್ಟ ಜೀವನಾನುಭವವೊಂದು ಅಪ್ಪಟ ಪ್ರಾದೇಶಿಕ ನೆಲೆಯಲ್ಲಿ ನಿಂತು ಸಮಸಮಾಜದ ಕನಸಿಗಾಗಿ ಕಾತರಿಸುತ್ತಾ ಮನುಷ್ಯರೊಳಗಿನ ಕೇಡುಗಳನ್ನೂ, ಒಳಿತುಗಳನ್ನೂ ಹಾಗೂ ಅವರುಗಳು ಸ್ವತಿಳಿವಳಿಕೆಗಳಿಂದ ಬದಲಾಗುವ ಕ್ರಮವನ್ನೂ ತೋರಾಕುವ ಈ ವಿಶಿಷ್ಟ ಕಥನ ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ ಹೀಗೆ ಹಲವು ಆಯಾಮಗಳಲ್ಲಿ ಓದಿಸಿಕೊಳ್ಳುತ್ತದೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಗ್ರಾಮೀಣ ಬದುಕೊಂದರಲ್ಲಿ ಬೀಸುವ ಬದಲಾವಣೆಯ ಗಾಳಿಯಲ್ಲಿ ಹಾಗೂ ಗಾಂಧಿ, ಅಂಬೇಡ್ಕರರ ವಿಚಾರಧಾರೆಗಳ ಪ್ರವಾಹದಲ್ಲಿ ಅಲ್ಲಿನ ಪೂರ್ವಗ್ರಹಗಳು, ಜಾತಿ ಧರ್ಮಗಳ ಜಡತ್ವ ಹಾಗೂ ಕೇಡುಗಳು ಬಹುಮಟ್ಟಿಗೆ ತೂರಿ ಹೋಗುತ್ತವೆ. ಅಂತಃಕರಣದ ಮನಸ್ಸುಗಳನ್ನು ಅನನ್ಯವಾಗಿ ತಟ್ಟುವ ಇದರ ಇಂಥ ಕ್ರಿಯೆಯೇ ಈ ಕಥನದ ಸಾಫಲ್ಯವಾಗಿದೆ. ಗ್ರಾಮೀಣ ಪರಿಸರ, ಅಲ್ಲಿನ ಹಳ್ಳ ಕೊಳ್ಳಗಳು, ಮಳೆ ಬೆಳೆಗಳು, ತೋಟ ತುಡಿಕೆಗಳು, ದನಕರುಗಳು, ಮನೆ ಜೋಪಡಿಗಳು, ಕೃಷಿ, ಪಶುಪಾಲನೆ, ಗುಡಿ ಕೈಗಾರಿಕೆಗಳ ಬಗೆಗಿನ ವಿವರಗಳು ಮೈದುಂಬಿಕೊಂಡ ಪರಿಯಲ್ಲಿ ವಿಸ್ಮೃತಿಗೆ ಜಾರುತ್ತಿರುವ ಲೋಕವೊಂದು ಮತ್ತೆ ಕಣ್ಣೆದುರಿಗೆ ನಿಂತಂತೆ ಮುದಕೊಡುತ್ತದೆ.

ಈ ಕಥನದ ಕ್ರಿಯಾಭೂಮಿ ಬಸನಕಟ್ಟೆ ಎಂಬ ಹಳ್ಳಿ. ಈ ಹಳ್ಳಿಗೆ ವಾಸಣ್ಣನೆಂಬ ಮಾಗಿದ ಮನಸಿನ ಅಪ್ಪಟ ಗಾಂಧಿವಾದಿಯ ಆಗಮನದೊಂದಿಗೆ ಹಳ್ಳಿ ಹಲವು ಸ್ಥಿತ್ಯಂತರಗಳಿಗೆ ಸಾಕ್ಷಿಯಾಗುತ್ತಾ ಹೋಗುತ್ತದೆ. ಬಹುತೇಕ ವಾಸಣ್ಣ, ಬಸವರಾಜು ಎಂಬ ಬಿಸಿರಕ್ತದ ಯುವಕ ಹಾಗೂ ಖಾದಿ ಕೇಂದ್ರದ ಸುತ್ತ ಹೆಣೆಯಲ್ಪಟ್ಟಿರುವ ಕಾದಂಬರಿಯಲ್ಲಿ ವಾಸಣ್ಣ ಹಾಗೂ ಬಸವರಾಜುವಿನೊಳಗೆ ಆಗುವ ಈ ಪರಿವರ್ತನೆ ಖಾದಿಕೇಂದ್ರ ಹಾಗೂ ಇಡೀ ಹಳ್ಳಿಯ ಮೇಲೆ ಆಗುತ್ತಾ ಹೋಗುತ್ತದೆ. ಇದು ಸ್ಥಾಪಿತ ಮೌಲ್ಯಗಳ ವಾರಸುದಾರರನ್ನು ಕೆರಳಿಸುತ್ತದೆ. ತತ್ಪರಿಣಾಮ ಇದು ಹಳ್ಳಿಯಲ್ಲಿ ಹಲವು ಬಗೆಯ ಸಂಘರ್ಷಗಳಿಗೆ ಕಾರಣವಾಗುತ್ತದೆ. ವಾಸಣ್ಣನ ವ್ಯಕ್ತಿತ್ವ ಮತ್ತು ಸರಳತೆಯ ಪ್ರಭಾವಕ್ಕೊಳಗಾದ ಅನೇಕ ಸಾಂಪ್ರದಾಯಿಕ ಮನಸ್ಸುಗಳು ವಾಸಣ್ಣನತ್ತ ವಾಲುತ್ತವೆ. ಇದಷ್ಟೇ ಅಲ್ಲದೆ ಇಲ್ಲಿ ಖುದ್ದು ವಾಸಣ್ಣ ಹಾಗೂ ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತನಾಗಿದ್ದ ಬಸವರಾಜು ಕೂಡ ಪರಿವರ್ತನೆಗೆ ಒಳಗಾಗುತ್ತಾನೆ. ಬಸವರಾಜು ವಾಸಣ್ಣನಿಗೆ ಅಂಬೇಡ್ಕರರನ್ನು ಓದಿಸುವ ಮೂಲಕ, ಅದೇ ರೀತಿ ವಾಸಣ್ಣ, ಬಸವರಾಜುವಿಗೆ ಗಾಂಧಿಯನ್ನು ಓದಿಸುವ ಮೂಲಕ ಇವರಿಬ್ಬರೂ ತಂತಮ್ಮ ಅರಿವಿನ ಲೋಕಕ್ಕೆ ಗಾಂಧಿ ಹಾಗೂ ಅಂಬೇಡ್ಕರರ ಬೆಳಕನ್ನು ಬಿಟ್ಟುಕೊಳ್ಳುತ್ತಾರೆ.

ಸಮಸಮಾಜದ ಕನಸಿನ ಸಾಕಾರಕ್ಕೆ ಗಾಂಧಿ-ಅಂಬೇಡ್ಕರ್ ಇಬ್ಬರೂ ಅನಿವಾರ್ಯ ಎಂಬುದನ್ನು 'ಕಾಲು ದೀಪ'ದ ಅದ್ಭುತ ರೂಪಕದ ಮೂಲಕ ಪ್ರತಿಪಾದಿಸುತ್ತಾರೆ. ಜೋಡಿ ಹಣತೆಗಳಿರುವ ಈ ಬೆಳಕೇ ತುಂಬಾ ವಿಶೇಷವಾಗಿ ಕಾಣುತ್ತದೆ. ಎರಡನ್ನೂ ಒಟ್ಟಿಗೇ ಹಚ್ಚಿದರೆ ಮಾತ್ರ ಹಚ್ಚಿಕೊಳ್ಳುವ, ಒಂಟೊಂಟಿಯಾಗಿ ಹತ್ತಿಕೊಳ್ಳದ ಈ ದೀಪದ ರೂಪಕ ಆಶಯ ಕಾದಂಬರಿಯ ಉದ್ದಗಲಕ್ಕೂ ಅಂತರ್ಗಾಮಿಯಾಗಿ ಅನುರಣಿಸುತ್ತದೆ. ಈ ಕಾರಣಕ್ಕೇ ಇಡೀ ಕಥನ ಮನುಕುಲದ ಒಳಿತಿನತ್ತ ಮುಖ ಮಾಡಿದಂತೆ ಕಾಣುತ್ತದೆ.

ಇಲ್ಲಿ ಗಾಂಧಿಯವರ 'ವೈಷ್ಣವ ಜನತೋ' 'ಮನುಜರೆಂದರೆ ಯಾರೆಂದು ಬಲ್ಲಿರೇನು?' ಎಂದಾಗುತ್ತದೆ. ಖಾದಿ ಕೇಂದ್ರದಲ್ಲಿ ಗಾಂಧಿ ಫೋಟೊದ ಜೊತೆಗೆ ಅಂಬೇಡ್ಕರ್ ಫೋಟೊ ಬರುತ್ತದೆ. ವಾಸಣ್ಣ, ವಿಧವೆ ಬಸವ್ವನನ್ನು ಮದುವೆ ಆಗುವುದರೊಂದಿಗೆ ವಿಧವಾ ವಿವಾಹವೂ, ಬಸವರಾಜು, ಶೀಲಾಳನ್ನು ವರಿಸುವುದರೊಂದಿಗೆ ಅಂತರ್ಜಾತಿ ವಿವಾಹವೂ ಒಪ್ಪಿತ ಸಂಗತಿಯಾಗಿ ನಡೆಯುತ್ತದೆ. ದಲಿತರ ಕೇರಿಯಲ್ಲಿ ಬಾವಿಯೊಂದು ತೋಡಲ್ಪಡುತ್ತದೆ. ನಿಧಾನಕ್ಕೆ ಹಳ್ಳಿಯಲ್ಲಿ ಮನುಷ್ಯತ್ವದ ಸೆಲೆಯೊಂದು ಸರುಕಾಡತೊಡಗುತ್ತದೆ. ಊರುಕೇರಿಗಳ ನಡುವಿನ ಗೆರೆ ತೆಳ್ಳಗಾಗುತ್ತಾ ಹೋಗುತ್ತದೆ.

ಓದುಗನೊಳಗೆ ಒಂದು ವಿಶೇಷ ಅನುಭವವನ್ನು ನೀಡುವ 'ವೈಷ್ಣವ ಜನತೋ'ದ ಬಲು ವಿಸ್ತಾರದ ಸಹಜ ನಡಿಗೆಯು ಕೆಲವೊಮ್ಮೆ ತುಂಬಾ ಮಂದಗತಿಯಂತೆ ಹಾಗೂ ವಿವರಣೆಗಳಲ್ಲಿ ಅಲ್ಲಲ್ಲಿ ಕೊಂಚ ಅತಿಯಂತೆ ಕಾಣುತ್ತಾ ಕಾದಂಬರಿಯ ಮುಕ್ತಾಯ ನಾಟಕೀಯವೂ ನಿರೀಕ್ಷಿತವೂ ಆಗಿರುವಲ್ಲಿ ಲೇಖಕರು ತುಸು ಸುಸ್ತಾದವರಂತೆ ಕಾದಂಬರಿಯ ಬಿಗಿ ಹಿಡಿತವನ್ನು ಕೊಂಚ ಸಡಿಲಾಗಿಸಿದ್ದಾರೆ.

ಆದರೆ ಈ ಮಿತಿ, ಕಥನಕಾರನ ಪ್ರಾಮಾಣಿಕತೆ ಹಾಗೂ ಮನುಕುಲದ ಬಗೆಗಿರುವ ಪ್ರೀತಿಯಲ್ಲಿ ಗೌಣವಾಗಿದೆ. ಏಕೆಂದರೆ, ತನ್ನ ಅನುಭವಕ್ಕೆ ದಕ್ಕಿದ ಲೋಕವನ್ನು ಯಾವುದೇ ಚಾಲಾಕಿತನ ತೋರದೆ 'ಮುಟ್ಟಿ ಮಾತನಾಡಿಸುವ' ಕ್ರಮ, ಭಾಷೆಯ ಆಪ್ತತೆ, ನಿರೂಪಣೆಯಲ್ಲಿನ ತಾಳ್ಮೆ, ಮೈದುಂಬಿಕೊಂಡಿರುವ ಪಾತ್ರಗಳಿಂದಾಗಿ ಈ ಕಾದಂಬರಿ ವಿಶಿಷ್ಟವಾಗಿ ಕಾಡುತ್ತದೆ ಮತ್ತು ಓದುಗನೊಳಗೆ ಬೆಳೆಯುತ್ತಾ ಹೋಗುತ್ತದೆ. ❖

ವೈಷ್ಣವ ಜನತೋ
ಲೇ: ಲೋಕೇಶ ಅಗಸನಕಟ್ಟೆ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
ಸಂ:9449174662
ಪು: 440 ₹365

ಒಳನೋಟ

ಸಾಹಿತ್ಯ ವರ್ಷ: ಖುಷಿಕೊಟ್ಟ ಕೃತಿಗಳು

ಕೃತಿ	ಪ್ರಕಾರ	ಲೇಖಕ
ಎಸ್.ಆರ್. ವಿಜಯಶಂಕರ		
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ಅಕ್ಕಯ್	ಆತ್ಮಕಥನ	ನಿರೂಪಣೆ: ಡಾ.ಡೊಮಿನಿಕ್
ಎಪ್ಪತ್ತು ತಿರುಗಾಟಗಳು	ಅನುಭವ ಕಥನ	ಎಸ್.ಕೆ. ಗೋವಿಂದ ಭಟ್
ಅನ್ಯರು – ಅನನ್ಯರು	ಸಂಶೋಧನ	ಜಿ.ಎನ್.ರಂಗನಾಥ ರಾವ್
ಬ್ರಹ್ಮಯಾನ	ವೇದಾಂತ ಕಾವ್ಯ	ಮಲ್ಲೇಪುರಂ ಜಿ. ವೆಂಕಟೇಶ
ರಾಜೇಂದ್ರ ಚೆನ್ನಿ		
ಯಕ್ಷಿಣಿ ಕನ್ನಡಿ	ಕವನ ಸಂಕಲನ	ಜ.ನಾ.ತೇಜಶ್ರೀ
ವಿಧಾನಸಭೆಯಲ್ಲೊಂದು ಹಕ್ಕಿ	ಕವನ ಸಂಕಲನ	ಎಸ್.ದಿವಾಕರ್
ಹೊತ್ತು ಗೊತ್ತಿಲ್ಲದ ಕಥೆಗಳು	ಕಥಾ ಸಂಕಲನ	ಅಬ್ದುಲ್ ರಶೀದ್
ಅಕ್ಕಪಕ್ಕದ ಪಾತರಗಿತ್ತಿ	ಅನುವಾದ	ಕಮಲಾಕರ ಕಡವೆ
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ಎಚ್.ದಂಡಪ್ಪ		
ಸೋಲಿಗ ಚಿತ್ರಗಳು	ಅಧ್ಯಯನ ಕೃತಿ	ಜಿ.ಎಸ್.ಜಯದೇವ
ಸಿಮೊನ್‌ದ ಬೋವಾ	ಮಾತು ಕಥನ	ಅನುವಾದ:ವಿಕ್ರಮ ವಿಸಾಜಿ
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ಕವಿಜೋಡಿಯ ಆತ್ಮಗೀತ	ಕಥಾ ಕಾವ್ಯ	ನಟರಾಜ್ ಹುಳಿಯಾರ್
ಓದೋರಂಗ!	ಕಥನ	ತುಂಬಾಡಿ ರಾಮಯ್ಯ
ವಿನಯಾ ಒಕ್ಕುಂದ		
ಹೋಗಿ ಬನ್ನಿ ಋತುಗಳೇ	ಸಮಗ್ರ ಕಾವ್ಯ	ಎಚ್.ಎಸ್. ಶಿವಪ್ರಕಾಶ
ಕವಿಜೋಡಿಯ ಆತ್ಮಗೀತ	ಕಥಾ ಕಾವ್ಯ	ನಟರಾಜ್ ಹುಳಿಯಾರ್
ಸಾವಿತ್ರಿಬಾಯಿ ಫುಲೆ ಮತ್ತು ನಾನು	ಜೀವನಗಾಥೆ	ಮೂಲ: ಸಂಗೀತಾ ಮುಳೆ, ಕೆಸ್ತಾರ, ವಿಕಾಸ್ ಮೌರ್ಯ
ಸಿಮೊನ್‌ದ ಬೋವಾ	ಮಾತು ಕಥನ	ಅನುವಾದ:ವಿಕ್ರಮ ವಿಸಾಜಿ
ಹರಿವ ನದಿ	ಆತ್ಮಕಥನ	ಮೀನಾಕ್ಷಿ ಭಟ್, ನಿರೂಪಣೆ: ಭಾರತಿ ಹೆಗಡೆ
ನಿಂಗಪ್ಪ ಮುದೇನೂರು		
ನೀಲು ಮಾತು ಮೀರಿದ ಮಿಂಚು	ಕಾವ್ಯದ ರೂಹುಗಳು	ಎಸ್.ಎಫ್.ಯೋಗಪ್ಪನವರ
ಅನೇಕಲವ್ಯ	ಕಥಾಸಂಕಲನ	ಪ್ರೊ.ಎಚ್.ಟಿ.ಪೋತೆ
ಸಿಮೊನ್‌ದ ಬೋವಾ	ಮಾತು ಕಥನ	ಅನುವಾದ:ವಿಕ್ರಮ ವಿಸಾಜಿ
ದಿ ರೈಲ್ವೆ ಚಿಲ್ಡ್ರನ್	ಮಕ್ಕಳ ಕಾದಂಬರಿ	ಮೂಲ: ಎಡಿತ್ ನೆಸ್ಬಿಟ್, ಕನ್ನಡಕ್ಕೆ:ಅರವಿಂದ ಪಟೇಲ್
ಶತಮಾನದ ಕವಿ ಡಾ.ದ.ರಾ. ಬೇಂದ್ರೆ	ವ್ಯಕ್ತಿಚಿತ್ರ	ಬಸು ಬೇವಿನಗಿಡದ
ಅಮರೇಶ ನುಗಡೋಣಿ		
ಚಹರೆಗಳೆಂದರೆ ಗಾಯಗಳೂ ಹೌದು	ಸಮುದಾಯ ಅಧ್ಯಯನ ಕಥನ	ಎ.ಎಸ್.ಪ್ರಭಾಕರ
ಹಾವಳಿ	ಕಾದಂಬರಿ	ಮಲ್ಲಿಕಾರ್ಜುನ ಹಿರೇಮಠ
ವೈಷ್ಣವ ಜನತೋ	ಕಾದಂಬರಿ	ಲೋಕೇಶ ಅಗಸನಕಟ್ಟೆ
ಬೇಟೆಯಲ್ಲ ಆಟವೆಲ್ಲಾ	ಕಥಾ ಸಂಕಲನ	ಎಂ.ಎಸ್.ಶ್ರೀರಾಮ್
ಸಿಮೊನ್‌ದ ಬೋವಾ	ಮಾತು ಕಥನ	ಅನುವಾದ:ವಿಕ್ರಮ ವಿಸಾಜಿ
ಲೋಕೇಶ ಅಗಸನಕಟ್ಟೆ		
ನಮ್ಮ ಅರಸು	ವ್ಯಕ್ತಿಚಿತ್ರ	ಬಸವರಾಜ ಮೇಗಳಗೆರೆ
ಯಾವ ಶಹರು ಯಾವ ಬೆಳಕು	ಕವನ ಸಂಕಲನ	ಎಚ್. ಎಸ್. ಶಿವಪ್ರಕಾಶ
ಚಾಂದಬೀ ಸರಕಾರ	ಕಾದಂಬರಿ	ಚಂದ್ರಶೇಖರ ಕಂಬಾರ
ಬ್ರಹ್ಮಯಾನ	ವೇದಾಂತ ಕಾವ್ಯ	ಮಲ್ಲೇಪುರಂ ಜಿ. ವೆಂಕಟೇಶ
ಕವಿಜೋಡಿಯ ಆತ್ಮಗೀತ	ಕಥಾ ಕಾವ್ಯ	ನಟರಾಜ್ ಹುಳಿಯಾರ್
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ವಿಕ್ರಮ ವಿಸಾಜಿ		
ಚಹರೆಗಳೆಂದರೆ ಗಾಯಗಳೂ ಹೌದು	ಸಮುದಾಯ ಅಧ್ಯಯನ ಕಥನ	ಎ.ಎಸ್.ಪ್ರಭಾಕರ
ಹೋಗಿಬನ್ನಿ ಋತುಗಳೇ	ಕವನ ಸಂಕಲನ	ಎಚ್.ಎಸ್. ಶಿವಪ್ರಕಾಶ
ಕವಿಜೋಡಿಯ ಆತ್ಮಗೀತ	ಕಥಾ ಕಾವ್ಯ	ನಟರಾಜ್ ಹುಳಿಯಾರ್
ಯಕ್ಷಿಣಿ ಕನ್ನಡಿ	ಕವನ ಸಂಕಲನ	ಜ.ನಾ.ತೇಜಶ್ರೀ
ಉರಿವ ಕೆಂಡದ ಮೇಲೆ	ಕಾದಂಬರಿ	ಬಸವರಾಜ ಡೋಣೂರ
ಎಚ್.ಎಲ್.ಪುಷ್ಪ		
ಫೀಫೋ	ಕಥಾ ಸಂಕಲನ	ಮಧುಸೂದನ್ ವೈ.ಎನ್.
ಕವಿಜೋಡಿಯ ಆತ್ಮಗೀತ	ಕಥಾ ಕಾವ್ಯ	ನಟರಾಜ್ ಹುಳಿಯಾರ್
ಹೋಗಿಬನ್ನಿ ಋತುಗಳೇ	ಸಮಗ್ರ ಕಾವ್ಯ	ಡಾ.ಎಚ್.ಎಸ್. ಶಿವಪ್ರಕಾಶ
ಜಂಗ್ಲಿ ಕುಲಪತಿಯ ಜಂಗೀಕತೆ	ಆತ್ಮ ಕಥನ	ಡಾ.ತೇಜಸ್ವಿ ಕಟ್ಟೀಮನಿ
ಜನಸಂಗಾತಿ ಭಗತ್	ಜೀವನ ಚರಿತ್ರೆ	ಡಾ.ಎಚ್.ಎಸ್ ಅನುಪಮಾ
ವಿಜಯ ರಾಘವನ್		
ಯಾವ ಶಹರು ಯಾವ ಬೆಳಕು	ಕವನ ಸಂಕಲನ	ಎಚ್.ಎಸ್. ಶಿವಪ್ರಕಾಶ
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ಧರ್ಮಯುದ್ಧ	ಕಾದಂಬರಿ	ನಾ.ಮೊಗಸಾಲೆ
ಅಕ್ಷರ ಲೋಕದ ಅಂಚಿನಲ್ಲಿ	ಅಂಕಣ ಬರಹ	ಕೆ.ವಿ.ತಿರುಮಲೇಶ್
ಸಂಗೀತಲೋಕದ ಸಂತ-ಬಿಸ್ಮಿಲ್ಲಾಖಾನ್	ಜೀವನಚರಿತ್ರೆ	ಎನ್. ಜಗದೀಶ ಕೊಪ್ಪ
ಸುರೇಶ ನಾಗಲಮಡಿಕೆ		
ಚಹರೆಗಳೆಂದರೆ ಗಾಯಗಳೂ ಹೌದು	ಸಮುದಾಯ ಅಧ್ಯಯನ ಕಥನ	ಎ.ಎಸ್. ಪ್ರಭಾಕರ
ರಾಗಿಕಾಳು	ಕವನಸಂಕಲನ	ಚೀಮನಹಳ್ಳಿ ರಮೇಶ ಬಾಬು
ಬಿಡು ಸಾಕು ಈ ಕೇಡುಗಾಲಕ್ಕಿಷ್ಟು	ಕವನ ಸಂಕಲನ	ರಮೇಶ ಅರೋಲಿ
ಮತ್ತೆ ಮತ್ತೆ ಮರ್ತ್ಯಕ್ಕಿಳಿಯುತ್ತೇನೆ	ಕವನ ಸಂಕಲನ	ಭುವನಾ ಹಿರೇಮಠ
ಸೈಂಧವ ಸಂಕಥನ	ಸಂಕಥನ	ಪಿ.ಆರ್.ಡಿ. ಮಲ್ಲಯ್ಯ
ಮಲ್ಲೇಪುರಂ ಜಿ. ವೆಂಕಟೇಶ		
ಚೆನ್ನಭೈರಾದೇವಿ	ಕಾದಂಬರಿ	ಗಜಾನನ ಶರ್ಮ
ವರ್ಣಕ	ಕಾದಂಬರಿ	ಕೆ.ಪಿ.ರಾವ್
ಚಾಂದಬೀ ಸರಕಾರ	ಕಾದಂಬರಿ	ಚಂದ್ರಶೇಖರ ಕಂಬಾರ
ವೈಷ್ಣವ ಜನತೋ	ಕಾದಂಬರಿ	ಲೋಕೇಶ್ ಅಗಸನಕಟ್ಟೆ
ದೇವ್ರು	ಕಾದಂಬರಿ	ಪದ್ಮನಾಭ ಭಟ್ ಶೇವ್ಕಾರ
ಎಸ್.ದಿವಾಕರ		
ಕಾಯ	ಕಾದಂಬರಿ	ಗುರುಪ್ರಸಾದ್ ಕಾಗಿನೆಲೆ
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ಒಲವೆಂಬ ಮಾಯೆ	ಪ್ರಬಂಧ	ವೆಂಕಟೇಶ ಮಾಚಕನೂರ
ಅಪರಿಚಿತ	ಕಾದಂಬರಿ	ಮೂಲ:ಆಲ್ಬರ್ಟ್ ಕಮೂ ಅನುವಾದ:ಪ್ರಕಾಶ್ ನಾಯ್ಕ್
ವಿಚಿತ್ರಸೇನನ ವೈಖರಿ	ಕವನ ಸಂಕಲನ	ಜಯಂತ ಕಾಯ್ಕಿಣಿ
ಪ್ರತಿಭಾ ನಂದಕುಮಾರ್		
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ನೆಲದಾಸೆಯ ನಕ್ಷತ್ರಗಳು	ನೆನಪು ಸರಣಿ	ಎಂ.ಆರ್.ಕಮಲ
ಎನ್‌ಕೌಂಟರ್	ಕಾದಂಬರಿ	ಕುಂ. ವೀರಭದ್ರಪ್ಪ
ಶಯ್ಯಾಗೃಹದ ಸುದ್ದಿಗಳು	ಕವನ ಸಂಕಲನ	ಶೋಭಾ ನಾಯಕ
ಯಕ್ಷಗಾನ ಲೀಲಾವಳಿ	ಆತ್ಮಕಥೆ	ಲೀಲಾವತಿ ಬೈಪಡಿತ್ತಾಯ, ನಿರೂಪಣೆ:ವಿದ್ಯಾರಶ್ಮಿ ಪೆಲ್ಲತ್ತಡ್ಕ
ಪವಿತ್ರ ಪ್ರಿಯಭಾಷಿಣಿ		
ವಿಚಿತ್ರಸೇನನ ವೈಖರಿ	ಕವನ ಸಂಕಲನ	ಜಯಂತ ಕಾಯ್ಕಿಣಿ
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ವೈಷ್ಣವ ಜನತೋ	ಕಾದಂಬರಿ	ಲೋಕೇಶ ಅಗಸನಕಟ್ಟೆ
ಅಂಗುಲ ಹುಳುವಿನ ಇಂಚುಪಟ್ಟಿ	ವಿಮರ್ಶೆ	ಆರ್.ತಾರಿಣಿ ಶುಭದಾಯಿನಿ
ಮೆಟ್ರೊ ಜಿನ್	ಕವನ ಸಂಕಲನ	ವಿಕ್ರಂ ಹತ್ವಾರ
ಕೃಷ್ಣಮೂರ್ತಿ ಹನೂರ		
ಯಾವ ಶಹರು ಯಾವ ಬೆಳಕು	ಕವನ ಸಂಕಲನ	ಎಚ್.ಎಸ್ ಶಿವಪ್ರಕಾಶ
ಸಕೀನಾಳ ಮುತ್ತು	ಕಾದಂಬರಿ	ವಿವೇಕ ಶಾನಭಾಗ
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ಅಂಗುಲ ಹುಳುವಿನ ಇಂಚುಪಟ್ಟಿ	ವಿಮರ್ಶೆ	ಆರ್.ತಾರಿಣಿ ಶುಭದಾಯಿನಿ
ಸೋಲಿಗ ಚಿತ್ರಗಳು	ಬುಡಕಟ್ಟು ಅಧ್ಯಯನ	ಜಿ.ಎಸ್.ಜಯದೇವ
ಚಿದಾನಂದ ಸಾಲಿ		
ಸೋನಪಾಪಡಿ	ಮಕ್ಕಳ ಪದ್ಯಗಳು	ರಾಜಶೇಖರ ಕುಕ್ಕುಂದ
ಹೆಣ್ಣಿನ ಸ್ಥಾನಮಾನ	ಅನುವಾದ	ಮೂಲ-ಶರತ್ ಚಂದ್ರ ಚಟ್ಟೋಪಾಧ್ಯಾಯ, ಕನ್ನಡಕ್ಕೆ-ಸಿದ್ಧಲಿಂಗ ಪಟ್ಟಣಶೆಟ್ಟಿ
ಧರ್ಮಯುದ್ಧ	ಕಾದಂಬರಿ	ನಾ.ಮೊಗಸಾಲೆ
ಹಾವಳಿ	ಕಾದಂಬರಿ	ಮಲ್ಲಿಕಾರ್ಜುನ ಹಿರೇಮಠ
ಭಿನ್ನ ಅಭಿಪ್ರಾಯ	ಆತ್ಮಕತೆ	ಮೂಲ: ವೈ.ವಿ. ರೆಡ್ಡಿ, ನಿರೂ-ಎಂ.ಎಸ್.ಶ್ರೀರಾಮ್
ಚನ್ನಬಸವಣ್ಣ		
ಸೋಲಿಗ ಚಿತ್ರಗಳು	ಅಧ್ಯಯನ ಕೃತಿ	ಜಿ.ಎಸ್.ಜಯದೇವ
ಭಿನ್ನ ಅಭಿಪ್ರಾಯ	ಆತ್ಮಕಥೆ	ಮೂಲ: ವೈ.ವಿ. ರೆಡ್ಡಿ, ನಿರೂ-ಎಂ.ಎಸ್.ಶ್ರೀರಾಮ್
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ಗುಂಡಿಗೆಯ ಬಿಸಿರಕ್ತ	ಆಫ್ರಿಕನ್ ಸಂಕಥನ	ಅನು:ಕೇಶವ ಮಳಗಿ
ಯಕ್ಷಿಣಿ ಕನ್ನಡಿ	ಕವನ ಸಂಕಲನ	ಜ.ನಾ.ತೇಜಶ್ರೀ
ಗೀತಾ ವಸಂತ		
ಅವರವರ ಭವಕ್ಕೆ ಓದುಗರ ಭಕುತಿಗೆ	ಆತ್ಮಚರಿತ್ರೆಗಳ ಪರಿಶೀಲನೆ	ಕೆ. ಸತ್ಯನಾರಾಯಣ
ಅನಾರ್ಕಲಿಯ ಸೇಫ್ಟಿಪಿನ್	ಕಥಾ ಸಂಕಲನ	ಜಯಂತ ಕಾಯ್ಕಿಣಿ
ಸಿಮೊನ್‌ದ ಬೋವಾ	ಮಾತು ಕಥನ	ಅನು:ವಿಕ್ರಮ ವಿಸಾಜಿ
ದಾರಾ ಶುಕೋಹ್‌ನ ಕನಸುಗಳು	ಕಾದಂಬರಿ	ಉದಯಕುಮಾರ್ ಹಬ್ಬು
ಹೋಗಿಬನ್ನಿ ಋತುಗಳೇ	ಸಮಗ್ರ ಕಾವ್ಯ	ಡಾ.ಎಚ್.ಎಸ್. ಶಿವಪ್ರಕಾಶ
ಎಂ.ಎಸ್.ವೇದಾ		
ಸಿದ್ಧಿಯ ಕೈ ಚಂದ್ರನತ್ತ	ಕಾದಂಬರಿ	ಕೃಷ್ಣಮೂರ್ತಿ ಹನೂರು
ಗೌರಿಯರು	ಕಾದಂಬರಿ	ಅಮರೇಶ ನುಗಡೋಣಿ
ನಡುವೆ ಸುಳಿವ ಹೆಣ್ಣು	ಆತ್ಮಕಥನ	ಅರುಣ್ ಜೋಳದ ಕೂಡ್ಲಗಿ
ಒಡನಾಡಿ ಸಬಿಹಾ	ಅಭಿನಂದನಾ ಹೊತ್ತಗೆ	ಸಂ: ಡಾ.ದು.ಸರಸ್ವತಿ, ಡಾ.ಆರ್.ಸುನಂದಮ್ಮ, ಡಾ.ಓಂಕಾರ ಕಾಕಡೆ, ಡಾ.ಎಚ್.ಎಸ್.ಅನುಪಮಾ
ಸಂಪ	ಕಾದಂಬರಿ	ಪ್ರೊ.ಮಲೆಯೂರು ಗುರುಸ್ವಾಮಿ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

2022ರ ಮೋಜಿನ ಕ್ಯಾಲೆಂಡರ್

ಜ.	ಫೆ.	ಮಾ.	ಏ.	ಮೇ	ಜೂ.	ಜು.	ಆ.	ಸೆ.	ಅ.	ನ.	ಡಿ.
5	1	1/	4	6	2/	4	0	3/	5	1	3

– ಇಲ್ಲಿ ಕೊಟ್ಟಿರುವ 12 ಅಂಕಿಗಳು ಕ್ರಮವಾಗಿ ಆಯಾ ತಿಂಗಳಿನ ನಿಯತಕಾಲಿಕಗಳು. ಈ 12 ಅಂಕಿಗಳನ್ನು ನೆನಪಿನಲ್ಲಿಟ್ಟುಕೊಂಡರೆ 2022ರ ಯಾವ ದಿನ, ಯಾವ ವಾರ ಎಂದು ಕ್ಯಾಲೆಂಡರ್ ಇಲ್ಲದೇ ಅರೆಕ್ಷಣದಲ್ಲಿ ಹೇಳಿಬಿಡಬಹುದು. ಅದು ಹೇಗೆ?

ಹೀಗೆ: ನಿಮಗೆ ಬೇಕಾದ ತಿಂಗಳ ತಾರೀಖಿಗೆ ಆ ತಿಂಗಳ ನೆನಪಿನ ಅಂಕಿ ಕೂಡಿಸಿ 7ರಿಂದ ಭಾಗಿಸಿರಿ (ಯಾವಾಗಲೂ 7ರಿಂದ) ಉಳಿಯುವ ಶೇಷ ಆಧರಿಸಿ ವಾರ ಹೇಳುವುದು. 1 ಶೇಷ ಉಳಿದರೆ ಸೋಮವಾರ, 2 ಉಳಿದರೆ ಮಂಗಳವಾರ 3 ಬುಧವಾರ, 4 ಗುರುವಾರ 5 ಶುಕ್ರವಾರ 6 ಶನಿವಾರ 0 ಭಾನುವಾರ ಎಂದು ಹೇಳುವುದು. ಒಂದು ವೇಳೆ ನಿಯತಕಾಲಿಕ ತಾರೀಖಿಗೆ ಕೂಡಿಸಿದಾಗ 7ರ ಒಳಗಿನ ಅಂಕಿಯಾದರೆ ಅದನ್ನೇ ಶೇಷ ಎಂದು ತಿಳಿದು ವಾರ ಹೇಳುವುದು.

ಉದಾ: ಈ ವರ್ಷ ಆಗಸ್ಟ್ 15 ಯಾವ ವಾರ?

ಆಗಸ್ಟ್ ನಿಯತಾಂಕ	0
ದಿನಾಂಕ	+ 15
ಎರಡು ಕೂಡಿಸಿ	7) 15 (2
7ರಿಂದ	14
ಭಾಗಿಸಿದಾಗ	1 ಶೇಷ

ಟ್ರಿಕ್: 1 ಶೇಷ. ಮೇಲೆ ಹೇಳಿದಂತೆ ಸೋಮವಾರ. ನಿಯತಾಂಕಗಳನ್ನು 511/402/403/513 ನಾಲ್ಕು ಸಂಖ್ಯೆ ಮಾಡಿಕೊಂಡು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಕಲಿಕೆಯಲ್ಲಿ ಕೊಂಚ ತಂತ್ರ

ಕೆಲವು ವಿಷಯಗಳನ್ನು ಸುಲಭವಾಗಿ ನೆನಪಿಡಲು ಕೆಲವೊಂದು ತಂತ್ರಗಳನ್ನು ನೆನಪಿಟ್ಟುಕೊಳ್ಳಬೇಕು

ಉದಾ 1: ಪಂಚವಾರ್ಷಿಕ ಯೋಜನೆ ಯಾವಾಗ ಪ್ರಾರಂಭವಾಯಿತು?

ಉತ್ತರ: 1951. ಇದನ್ನು ನೆನಪಿಡಲು ಸೂಚ್ಯವಾಗಿ ಆ ಇಸವಿಯಲ್ಲೇ ಇದೆ. 5 ವರ್ಷಕ್ಕೆ 1 ಬಾರಿ ಈ ಯೋಜನೆ ರೂಪುಗೊಳ್ಳುವುದರಿಂದ ಆ ಎರಡೂ ಅಂಕಿಗಳೇ 51 ಎಂಬುದನ್ನು ಸೂಚಿಸುತ್ತವೆ.

ಉದಾ 2: ಗಗನ ನೌಕೆಗಳಲ್ಲಿ ಎಷ್ಟನೇ ನೌಕೆ ಚಂದ್ರನ ಮೇಲೆ ಕಾಲಿಟ್ಟಿತು?

ಉತ್ತರ: 11ನೇ ನೌಕೆ. ಇಲ್ಲಿ ಸೂಚ್ಯವಾಗಿ Apollo ಶಬ್ದದಲ್ಲಿ 11 ಸಹಜವಾಗಿ ಬಂದಿದೆ.

ಶಬ್ದಗಳೊಡನೆ ಸರಸ

ತಿಂಗಳ ತಮಾಷೆ; ಸ-ರಸ ಪ್ರಶ್ನೆಗಳು

1. ತಿಂಗಳ ಹೆಸರಲ್ಲದೇ ಅವೆರಡೂ ಪದಗಳು ಇಂಗ್ಲಿಷ್ ಪದಗಳೂ ಹೌದು – ಅವು ಯಾವುವು?

ಉತ್ತರ: March, May

2. ಪ್ರತಿ ವರ್ಷ ಯಾವ ತಿಂಗಳಲ್ಲಿ ಈ ವರಿ ಕಾಣಿಸಿಕೊಳ್ಳುತ್ತದೆ?

ಉ: 1 ಜನ'ವರಿ' 2 ಫೆಬ್ರು'ವರಿ'

3. ಯಾವ ತಿಂಗಳಲ್ಲಿ ಜನ ಕಡಿಮೆ ಮಾತನಾಡುತ್ತಾರೆ?

ಉ: ಫೆಬ್ರುವರಿಯಲ್ಲಿ (ಏಕೆಂದರೆ ಫೆಬ್ರುವರಿಯಲ್ಲಿ 28 ದಿನಗಳು ಇವೆ, ಅಧಿಕ ವರ್ಷವಾದರೂ 29 ದಿನಗಳು ಇರುತ್ತವೆ)

4. ಅತಿ ಚಿಕ್ಕ ತಿಂಗಳು ಯಾವುದು?

ಉ: ಮೇ (ಏಕೆಂದರೆ ಅದರಲ್ಲಿ ಒಂದೇ ಅಕ್ಷರವಿದೆ)

5. ಯಾವ ತಿಂಗಳಲ್ಲಿ 29 ದಿವಸಗಳಿರುತ್ತವೆ?

ಉ: ಎಲ್ಲ ತಿಂಗಳುಗಳಲ್ಲಿ 29 ದಿನಗಳಿರುತ್ತವೆ.

6. ವರ್ಷದ ಯಾವ ತಿಂಗಳಲ್ಲಿ ಬರ ಬಂದೇ ಬರುತ್ತದೆ?

ಉ: ಸೆಪ್ಟೆಂ'ಬರ', ಅಕ್ಟೋ'ಬರ', ನವೆಂ'ಬರ', ಡಿಸೆಂ'ಬರ' ತಿಂಗಳುಗಳಲ್ಲಿ 'ಬರ' ಬಂದೇ ಬರುತ್ತದೆ.

7. ವರ್ಷದ ಆರು ತಿಂಗಳುಗಳಲ್ಲಿ ಇದು ಇರುತ್ತದೆ. ಇನ್ನು ಉಳಿದ ತಿಂಗಳುಗಳಲ್ಲಿ ಇರುವುದಿಲ್ಲ ಏನದು?

ಉ: E

8. ಡಿಸೆಂಬರ್ ಆದ ಮೇಲೆ ನವೆಂಬರ್ ತಿಂಗಳು ಎಲ್ಲಿ ಬರುತ್ತದೆ?

ಉ: ಶಬ್ದಕೋಶದಲ್ಲಿ (ಡಿಕ್ಷನರಿಯಲ್ಲಿ) ಬರುತ್ತದೆ

ಕಿತ್ತೂರು ರಾಣಿ ಚೆನ್ನಮ್ಮ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಕಿತ್ತೂರು ರಾಣಿ ಚೆನ್ನಮ್ಮ ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಹೆಂಡತಿ. ಸ್ವಾತಂತ್ರ ರಕ್ಷಣೆಗಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ

ಕಿತ್ತೂರು ಬೆಳಗಾವಿ ಜಿಲ್ಲೆಯ ಒಂದು ಪುಟ್ಟ ಊರು. 12ನೆಯ ಶತಮಾನದಿಂದ ಚರಿತ್ರೆಯಲ್ಲಿ ಕಿತ್ತೂರಿನ ಉಲ್ಲೇಖಗಳಿವೆ. ಚಿತ್ರದಲ್ಲಿರುವುದು ಕಿತ್ತೂರಿನ ಕೋಟೆ



ಕಿತ್ತೂರಿನ ಮೇಲೆ ಬ್ರಿಟಿಷರು ಕಣ್ಣಿಟ್ಟಿದ್ದರು. ಅವರ ಆಕ್ರಮಣ ತಡೆಯಲು ನಡೆದ ಮಾತುಕತೆಗಳು ವಿಫಲವಾದವು. ಬ್ರಿಟಿಷರಿಗೆ ಕಪ್ಪ ಕೊಡುವುದಿಲ್ಲ ಎಂದು ಚೆನ್ನಮ್ಮ ಹೇಳಿಬಿಟ್ಟಳು

1824ರ ಅ.23ರಂದು ಧಾರವಾಡದ ಕಲೆಕ್ಟರ್ ಥ್ಯಾಕರೆ ಕಿತ್ತೂರಿನ ಮೇಲೆ ದಾಳಿ ಮಾಡಿಸಿದ. ಚೆನ್ನಮ್ಮನ ನೇತೃತ್ವದಲ್ಲಿ ಸಾವಿರಾರು ವೀರರು ಥ್ಯಾಕರೆಯ ಸೈನ್ಯದ ಮೇಲೆ ಮುಗಿಬಿದ್ದರು

ಡಿ. 3ರಂದು ಬ್ರಿಟಿಷರು ಮತ್ತೆ ದಾಳಿ ನಡೆಸಿದರು. ಈ ವೇಳೆ ಸರದಾರ ಗುರುಸಿದ್ದಪ್ಪ, ಚೆನ್ನಮ್ಮ ಮತ್ತು ಆಕೆಯ ಸೊಸೆಯರಾದ ವೀರಮ್ಮ ಮತ್ತು ಜಾನಕಿಬಾಯಿ ಸೆರೆಯಾದರು

ಚೆನ್ನಮ್ಮಳ ಹೋರಾಟ, ಬ್ರಿಟಿಷರ ವಿರುದ್ಧ ಸಾಧಿಸಿದ ಗೆಲುವು, ದೇಶಭಕ್ತಿಯ ನೆನಪಿಗಾಗಿ ಸರ್ಕಾರವು ಅಲ್ಲಲ್ಲಿ ಆಕೆಯ ಪ್ರತಿಮೆ ಸ್ಥಾಪಿಸಿ ಗೌರವಿಸಿ ಸ್ಮರಿಸುತ್ತಿದೆ

ಟ್ವೆಂಟಿ – 20 ಮ್ಯಾಚ್

ಅ– ಇಲ್ಲಿ ಕೊಟ್ಟಿರುವ ಮೂಲಮಾನ ಹೊಂದಿಸಿ

1.	ವ್ಯಾಟ್	A.	ಹಡಗಿನ ವೇಗ
2.	ಮೀಟರ್	B.	ಉಷ್ಣದ ಅಳತೆ
3.	ನ್ಯೂಟನ್	C.	ಬಲ (M.K.S. ಪದ್ಧತಿ)
4.	ಡೆಸಿಬಲ್	D.	ವಿದ್ಯುತ್ ಶಕ್ತಿ
5.	ಕ್ಯಾಲೊರಿ	E.	ತೂಕ
6.	ಕಿಲೋಗ್ರಾಂ	F.	ಉದ್ದ
7.	ಕೆಲ್ವಿನ್	G.	ಸಮತಲ ಕೋನ
8.	ನಾಟ್	H.	ವಿದ್ಯುತ್ ಪ್ರವಾಹ
9.	ರೇಡಿಯನ್	I.	ಉಷ್ಣದ ಚಲನೆ
10.	ಆ್ಯಂಪಿಯರ್	J.	ಶಬ್ದದ ತೀವ್ರತೆ

ಬ – ಆಟಗಳಿಗೂ ಆಟಗಾರರಿಗೂ ಹೊಂದಿಸಿ

1.	ಕ್ರಿಕೆಟ್	A.	ಧ್ಯಾನ್‌ಚಂದ್
2.	ಅಥ್ಲೆಟಿಕ್ಸ್	B.	ಅಲನ್ ಬಾರ್ಡರ್
3.	ಕುಸ್ತಿ	C.	ದಾರಾ ಸಿಂಗ್
4.	ಹಾಕಿ	D.	ಜಸ್ಪಾಲ್ ರಾಣಾ
5.	ಟೇಬಲ್ ಟೆನಿಸ್	E.	ಅಶ್ವಿನಿ ನಾಚಪ್ಪ
6.	ಶೂಟಿಂಗ್	F.	ವಿಶ್ವನಾಥ್ ಆನಂದ್
7.	ಭಾರ ಎತ್ತುವಿಕೆ	G.	ಅಂಜು ಬಾಬಿ ಜಾರ್ಜ್
8.	ಉದ್ದ ಜಿಗಿತ	H.	ಕರ್ಣಂ ಮಲ್ಲೇಶ್ವರಿ
9.	ಸಾಗರ ಈಜು	I.	ಗೀತಾ ನಾಡಕರ್ಣಿ
10.	ಚದುರಂಗ	J.	ಮಿಹಿರ್ ಸೇನ್

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ನಾರು 2. ಇತ್ತು 3. ಮೂರು 4. ನೂರು
5. ಆಳು 6. ಹತ್ತು 7. ಎತ್ತು 8. ಇರು

1.		ಬ್ಬ			5.		ರಾ	
2.		ಪ್ಪ			6.		ವ	
3.		ರಿ			7.		ಪ್ಪ	
4.		ರೇ			8.		ಲ್ವ	

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಸತಿ ಅಣ್ಣ = __________
2. ಅರಹೂಳಿದ = __________
3. ಅದರ ಚಡಿ = __________
4. ಸಸಿ ತುಳದಾ = __________

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದಹಿಗ್ಗು

1. ಜವಾರಿ 2. ಕರುಣೆ 3. ರಭಸ 4. ವೈಖರಿ
5. ಗುಜರಿ 6. ವಾನರ 7. ಮಾರ್ಪಾಡು 8. ರಾಗಿಣಿ

ಅದಲು ಬದಲು ಕಂಚಿ ಕದಲು

1. ಕದನಕಲಿ 2. ತಬಲಾದ ನಾದ
3. ಮರಕಡಿರಿ 4. ಮನನ ಮಾಡು

ಶಬ್ದಗಳೊಡನೆ ಸರಸ

ಶಿವರಾಜ್‌ಕುಮಾರ್ (ಚಿತ್ರನಟರ ಹೆಸರಿನ ಮೊದಲ ಅಕ್ಷರ ಕೂಡಿಸಿ ಓದಿ ನೋಡಿ)

ಟ್ವೆಂಟಿ–20 ಮ್ಯಾಚ್:

A ವಿಭಾಗ: 1-D 2-H 3-F 4-I 5-G 6-J 7-B 8-C 9-A 10-E

B ವಿಭಾಗ: 1-C 2-F 3-H 4-B 5-D 6-I 7-E 8-G 9-J 10-A

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸೃಜನ ನಾಗಾವಿ, ವಿಜಯಪುರ

ಸಮೃದ್ಧಿ, ಬೆಂಗಳೂರು

ಪೃಥ್ವಿರಾಜ್ ಎಂ. ಚಾಮರಾಜನಗರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇ– ಮೇಲ್ ವಿಳಾಸ:

majakoora@prajavani.co.in

8ನೇ ಪುಟದಿಂದ...

ಆಘಾತದಲ್ಲೇ ಏಗಿದ ವರ್ಷ

ರಾಜಕೀಯ ಚದುರಂಗ

2021ರ ವರ್ಷಾರಂಭದಲ್ಲೇ ನಾಯಕತ್ವ ಬದಲಾವಣೆಯ ಬಿರುಗಾಳಿ ರಾಜ್ಯ ಆಡಳಿತದ ಮೇಲೆ ಅಪ್ಪಳಿಸಿತು. ಅಧಿಕಾರ ಬಿಟ್ಟು ಕೆಳಗಿಳಿಯಲಾರೆ ಎಂದು ಹಟಕ್ಕೆ ಕುಳಿತಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ವಯಸ್ಸಿನ ಕಾರಣ ಕೊಟ್ಟು ರಾಜೀನಾಮೆ ಕೊಡುವಂತಹ ಅನಿವಾರ್ಯವನ್ನು ಸೃಷ್ಟಿಸಲಾಯಿತು. ಮುಖ್ಯಮಂತ್ರಿ ಗಾದಿ ಮೇಲೆ ಕಣ್ಣಿಟ್ಟವರು ಕಣ್ಣರಳಿಸುವಂತೆ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಗಾದಿಗೆ ತಂದಿದ್ದು ಈ ವರ್ಷದ ವಿದ್ಯಮಾನ.

ಜನವರಿಯಿಂದ ಶುರುವಾದ ಆಟ ಜುಲೈನಲ್ಲಿ ತಾರ್ಕಿಕ ಅಂತ್ಯ ಕಂಡಿದ್ದು, ಮತ್ತೆ ಹೊಸ ಸಚಿವ ಸಂಪುಟ ರಚನೆ, ಹೊಸತರದ ಆಡಳಿತದಿಂದಾಗಿ ಅಭಿವೃದ್ಧಿಯ ಚಟುವಟಿಕೆಗೆ ಆರೇಳು ತಿಂಗಳು ಪಾರ್ಶ್ವವಾಯು ಬಡಿಯಿತು. ಉತ್ಸಾಹದಿಂದಲೇ ಆಡಳಿತಕ್ಕೆ ಚುರುಕುಕೊಟ್ಟ ಬೊಮ್ಮಾಯಿ, ಬಿಜೆಪಿ ಸರ್ಕಾರದ ಭವಿಷ್ಯದ ಆಸರೆಯಂತೆ ಕಂಡರು. ಹೊಸ ಯೋಜನೆಗಳು, ಸರಳ ಶೈಲಿ ಜನರ ಮೆಚ್ಚುಗೆ ಗಳಿಸಿದವು. ಆದರೆ, ಜಡ್ಡುಗಟ್ಟಿದ ಆಡಳಿತ, ಬಿಜೆಪಿ ಒಳಗಿನ ಜಗಳ, ಕೆಲವೇ ಸಚಿವರ ಗುಂಪನ್ನು ಕಟ್ಟಿಕೊಂಡು ಆಡಳಿತ ನಡೆಸುವ ಮುಖ್ಯಮಂತ್ರಿ ವೈಖರಿಗೆ ಪಕ್ಷದೊಳಗೆ ಆಕ್ಷೇಪ ಶುರುವಾಗಿದೆ. ಜತೆಗೆ ಬಿಟ್ ಕಾಯಿನ್ ಹಗರಣದ ವಾಸನೆ, ಶೇ 40ರ ಲಂಚದ ಆರೋಪವು ಸರ್ಕಾರವನ್ನು ತುಸು ನಡುಗಿಸಿದೆ. ನಾಯಕತ್ವ ಬದಲಾವಣೆಯ ಸದ್ದು ಮತ್ತೆ ಜೋರಾಗಿದೆ.

ವರ್ಷಾರಂಭದಲ್ಲೇ ಬಿಜೆಪಿ ಸರ್ಕಾರ ಮುಜುಗರ ಅನುಭವಿಸಲು ಆರಂಭಿಸಿತು. ಜಲಸಂಪನ್ಮೂಲ ಸಚಿವರಾಗಿದ್ದ ರಮೇಶ ಜಾರಕಿಹೊಳಿ, ಯುವತಿ ಜೊತೆ ಲೈಂಗಿಕ ಕ್ರಿಯೆ ನಡೆಸಿದ್ದರೆನ್ನಲಾದ ವಿಡಿಯೊ ಬಿಡುಗಡೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಮಾರ್ಚ್‌ನಲ್ಲಿ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ವರ್ಷಾಂತ್ಯದಲ್ಲಿ ಬೈರತಿ ಬಸವರಾಜ ವಿರುದ್ಧದ ಭೂಕಬಳಿಕೆ ಆರೋಪ ಸರ್ಕಾರವನ್ನು ಕಷ್ಟಕ್ಕೆ ಸಿಲುಕಿಸಿತು.

ಈ ವರ್ಷ ನಡೆದ ಉಪಚುನಾವಣೆ ಹಾಗೂ ವಿಧಾನ ಪರಿಷತ್ತಿನ ಚುನಾವಣೆ ಆಳುವ ಬಿಜೆಪಿಗೆ ಹಿತಕಾರಿಯಾಗಲೇ ಇಲ್ಲ. ಬಸವ ಕಲ್ಯಾಣವನ್ನು ಕಾಂಗ್ರೆಸ್‌ನಿಂದ ಬಿಜೆಪಿ ಕಿತ್ತುಕೊಂಡರೆ, ಮಸ್ಕಿಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿತು. ಬೊಮ್ಮಾಯಿ ಮುಖ್ಯಮಂತ್ರಿಯಾದ ಮೇಲೆ ನಡೆದ ಚುನಾವಣೆಯಲ್ಲಿ ಅವರ ತವರು ಜಿಲ್ಲೆಯ ಹಾನಗಲ್‌ನಲ್ಲಿ ಕಾಂಗ್ರೆಸ್ ವಿಜಯ ಸಾಧಿಸಿದರೆ, ಜೆಡಿಎಸ್ ಗೆದ್ದಿದ್ದ ಸಿಂಧಗಿಯನ್ನು ಬಿಜೆಪಿ ದಕ್ಕಿಸಿಕೊಂಡಿತು. ಮೇಲ್ಮನೆ ಚುನಾವಣೆಯಲ್ಲಿ 6ರಿಂದ 11ಕ್ಕೆ ಬಿಜೆಪಿ ಜಿಗಿದರೂ ಭದ್ರಕೋಟೆಯಲ್ಲಿ ನೆಲ ಅದುರುತ್ತಿರುವ ಅನುಭವ ಕಮಲ ಪಕ್ಷದ ನಾಯಕರಿಗೆ ಆಯಿತು.

ಚುನಾವಣೆಗೆ ವರ್ಷ ಹತ್ತಿರವಾಗುವ ಹೊತ್ತಿಗೆ ಜೆಡಿಎಸ್‌ನ ಪ್ರಮುಖರು ಕಾಂಗ್ರೆಸ್‌ನತ್ತ ಮುಖ ಮಾಡಿದ್ದು, ದಳದ ನೆಲವೂ ಅಲುಗಾಡ ತೊಡಗಿರುವುದರ ಸ್ಪಷ್ಟ ಸೂಚನೆ.

ಸಜ್ಜನರ ಮರಣ

ಈ ವರ್ಷ ಬಹುವಾಗಿ ಕಾಡಿದ್ದು ಪ್ರತಿಭಾವಂತರು, ಸಜ್ಜನರ ದುರ್ಮರಣ. ತನ್ನದೇ ಆದ ವಿಶಿಷ್ಟ ಪ್ರಯೋಗಗಳಿಂದ ಜನಮೆಚ್ಚುಗೆ ಗಳಿಸಿದ್ದ ಸಂಚಾರಿ ವಿಜಯ್ ಅಪಘಾತದಲ್ಲಿ ತೀರಿಹೋದರು.

ಜನಪ್ರಿಯ ನಟ, ಕನ್ನಡಿಗರ ಮೆಚ್ಚಿನ ಅಪ್ಪು ಪುನೀತ್ ರಾಜ್‌ಕುಮಾರ್ ಅಕಾಲಿಕ ಮರಣ ಕನ್ನಡ ನಾಡನ್ನೇ ವಾರಗಟ್ಟಲೇ ದುಃಖದ ಮಡುವಿನಲ್ಲಿ ಅದ್ದಿಟ್ಟಿತು. ತಮ್ಮ ಮಗನನ್ನೋ ಅಣ್ಣ–ತಮ್ಮನನ್ನೋ ಕಳೆದುಕೊಂಡ ರೀತಿಯಲ್ಲಿ ರಾಜ್ಯದ ಜನ ಕಣ್ಣೀರನಲ್ಲಿ ತೋಯ್ದುಹೋದರು. ಜನಪರ ಕಾರ್ಯಕ್ರಮ, ಸಜ್ಜನಿಕೆ, ಉತ್ತಮ ಆದರ್ಶಗಳನ್ನು ಬಿತ್ತುವ ಸಿನಿಮಾ ಕೊಟ್ಟಿದ್ದ ಅಪ್ಪು ಅಗಲಿಕೆ ಇಡೀ ವರ್ಷದ ಕ್ಯಾಲೆಂಡರ್‌ಅನ್ನೇ ನೋವಿನ ಕಡಲೊಳಗೆ ಹುದುಗಿಸಿಬಿಟ್ಟಿತು. ಆದರ್ಶಗಳನ್ನೇ ಮೈವೆತ್ತುಕೊಂಡಿದ್ದ ಪೋಷಕ ನಟ ಶಿವರಾಂ ನಿಧನವೂ ಇದೇ ವರ್ಷ ಘಟಿಸಿದ್ದು ಮತ್ತೊಂದು ದುರಂತ.

ಹಿಂದುಳಿದ ಸಮುದಾಯವರ ಪಾಲಿಗೆ ತಮ್ಮ ಸಂಘಟನಾ ಶಕ್ತಿಯಿಂದ ಚೈತನ್ಯವನ್ನೇ ತಂದುಕೊಟ್ಟು, ಶಿಕ್ಷಣ–ಆರೋಗ್ಯ ಸೇವೆಗೆ ತಮ್ಮದೇ ಕೊಡುಗೆ ನೀಡಿದ ಆರ್.ಎಲ್. ಜಾಲಪ್ಪ ನಿಧನ ರಾಜ್ಯದ ಜನರಿಗೆ, ಸಹಕಾರಿ ಕ್ಷೇತ್ರಕ್ಕೆ ಆಗಿರುವ ನಷ್ಟ ಎಂದರೆ ತಪ್ಪಾಗಲಿಕ್ಕಿಲ್ಲ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಭ್ರಷ್ಟಾಚಾರದ ಹೊಸಾವತಾರ

ಭ್ರಷ್ಟಾಚಾರದ ಹಲವು ಮುಖಗಳನ್ನು ಕಂಡು ರೋಸಿ ಹೋಗಿದ್ದ ಜನ ಈ ವರ್ಷ ಮತ್ತೊಂದು ಬಗೆಯ ಭ್ರಷ್ಟಾಚಾರವನ್ನು ಕಂಡು, ದಿಗ್ಭ್ರಮೆಗೊಂಡರು.

ಗುತ್ತಿಗೆದಾರರು, ಅಧಿಕಾರಿಗಳು, ರಾಜಕಾರಣಿಗಳ ಕೂಟ ಕಾಮಗಾರಿಗಳ ಹೆಸರಿನಲ್ಲಿ ದುಡ್ಡು ತಿನ್ನುವುದು ಹೊಸದೇನಲ್ಲ. ಬಿಜೆಪಿ ಸರ್ಕಾರ ಅಂದರೆ ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ ಕಾಮಗಾರಿಗಳ ಗುತ್ತಿಗೆಯಲ್ಲಿನ ಲಂಚದ ಪ್ರಮಾಣ ಶೇ 40ಕ್ಕೆ ಏರಿದೆ ಎಂಬ ಆರೋಪವನ್ನು ಮಾಡಿದ ಗುತ್ತಿಗೆದಾರರು, 'ನಾನು ತಿನ್ನುವುದಿಲ್ಲ; ತಿನ್ನುವವರಿಗೆ ಬಿಡುವುದಿಲ್ಲ' ಎಂಬ ಘೋಷಣೆ ಕೊಡುವ ಸ್ವಯಂಘೋಷಿತ ಚೌಕಿದಾರರಾದ ಪ್ರಧಾನಿ ನರೇಂದ್ರ ಮೋದಿಯವರಿಗೆ ದೂರು ಕೊಟ್ಟರು.

ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು ಡ್ರಗ್ಸ್ ಪ್ರಕರಣದಲ್ಲಿ ವಶಕ್ಕೆ ಪಡೆದ ಪೊಲೀಸರು ಬಿಟ್ ಕಾಯಿನ್ 'ವ್ಯವಹಾರ' ನಡೆಸಿದ್ದು ಸರ್ಕಾರದ ಮರ್ಯಾದೆಯನ್ನು ತೆಗೆದ ಮತ್ತೊಂದು ಪ್ರಕರಣ. ಪೊಲೀಸರ ವಶದಲ್ಲಿದ್ದ ಶ್ರೀಕಿ, ಆ ಅವಧಿಯಲ್ಲೇ ರಾಜ್ಯ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್, ಕೇಂದ್ರದ ಜನ್‌ಧನ್ ಖಾತೆ ಹ್ಯಾಕ್ ಮಾಡಿದ್ದಾನೆ ಎಂಬ ಆರೋಪವಿದೆ.

ಅದರ ಜತೆಗೆ, ಬಿಟ್ ಕಾಯಿನ್ ವೆಬ್ ಸೈಟ್ ಹ್ಯಾಕ್ ಮಾಡಿ ಭಾರತದ ರೂಪಾಯಿಯ ಇಂದಿನ ಮೌಲ್ಯದಲ್ಲಿ ₹56 ಸಾವಿರಕೋಟಿ ಮೊತ್ತದ ಬಿಟ್ ಕಾಯಿನ್ ಎಗರಿಸಿದ್ದಾನೆ ಎಂಬ ದೂರು ಇದೆ. ಸರ್ಕಾರದ ಪ್ರಭಾವಿ ಸಚಿವರು, ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದ ಬಗ್ಗೆ ಪ್ರಧಾನಿಗೆ ಸಲ್ಲಿಕೆಯಾದ ದೂರಿನಲ್ಲಿ ವಿವರಗಳಿವೆ.

ಇನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬಿ.ಎಸ್. ಯಡಿಯೂರಪ್ಪನವರ ಆಪ್ತ ಕಾರ್ಯದರ್ಶಿಯಾಗಿದ್ದ, ಅವರ ಮಗ ಬಿ.ವೈ. ವಿಜಯೇಂದ್ರರವರ ಆಪ್ತನೆಂದೇ ಗುರುತಿಸಿಕೊಂಡಿದ್ದ ಆಯನೂರು ಉಮೇಶ್ ಮನೆ ಮೇಲೆ ದಾಳಿ ನಡೆಸಿದರು. ಜತೆಗೆ ವಿಜಯೇಂದ್ರ ಆಪ್ತ ಅರವಿಂದ್ ಎಂಬಾತನ ಮನೆ–ಕಚೇರಿಯಲ್ಲೂ ಶೋಧ ನಡೆಸಿದರು. ಈ ವೇಳೆ ವಿವಿಧ ನೀರಾವರಿ ನಿಗಮ ಹಾಗೂ ಲೋಕೋಪಯೋಗಿ ಇಲಾಖೆಯ ಟೆಂಡರ್ ದಾಖಲೆಗಳು ಮೂಟೆಗಟ್ಟಲೇ ವಶವಾಗಿವೆ. ಭ್ರಷ್ಟಾಚಾರದ ಮೂಲ ಎಲ್ಲಿದೆ ಎಂದು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆ ಹಚ್ಚಿದ್ದರೂ ಈವರೆಗೂ ಕ್ರಮವನ್ನು ಮಾತ್ರ ಕೈಗೊಂಡಿಲ್ಲ.

ಕೋಮು ಧ್ರುವೀಕರಣದ ದಾರಿ

ಇವೆಲ್ಲವೂ ಅನೂಚಾನವಾಗಿ ನಡೆಯುತ್ತಿರುವ ಹೊತ್ತಿನಲ್ಲೇ ಸರ್ಕಾರ ಮಾತ್ರ ಅಭಿವೃದ್ಧಿ, ಜನ ಕಲ್ಯಾಣಕ್ಕೆ ತೋರಿಸಬೇಕಾದ ಆಸಕ್ತಿಯನ್ನು ಬದಿಗೊತ್ತಿದೆ. ಅದರ ಬದಲು 2023ರ ಚುನಾವಣೆಗೆ ತನ್ನ ಮತ ಬ್ಯಾಂಕ್ ಭದ್ರಗೊಳಿಸಲು ಹಿಂದೂ ಮತಗಳ ಧ್ರುವೀಕರಣಕ್ಕೆ ತನ್ನ ಶ್ರಮವನ್ನು ಮೀಸಲಾಗಿಟ್ಟಂತೆ ವರ್ತಿಸುತ್ತಿದೆ. ಗೋಹತ್ಯೆ ನಿಷೇಧ, ಮತಾಂತರ ನಿಷೇಧ ಕಾಯ್ದೆಗಳು ಇದಕ್ಕೆ ಪುರಾವೆಯಂತಿವೆ. ಪಠ್ಯಪುಸ್ತಕದಲ್ಲಿರುವ ಸಾಮರಸ್ಯದ ಕುರುಹುಗಳನ್ನು ಅಳಿಸಿ, ಕೋಮುಪಿತ್ತ ತುಂಬುವ ಯತ್ನವನ್ನೂ ಆರಂಭಿಸಿದೆ. ಜನರಿಗೆ ನೆಟ್ಟಗೆ ಕುಡಿಯುವ ನೀರೇ ಸಿಗದಿರುವಾಗ ತುಂಗಾರತಿಯಂತಹ ಕಾರ್ಯಕ್ರಮಕ್ಕೆ ₹30 ಕೋಟಿ ಕೊಡುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ಘೋಷಿಸಿದ್ದಾರೆ. ಮತ ಕ್ರೋಡೀಕರಣದ ಈ ಹುನ್ನಾರಗಳು ಅಪಾಯಕಾರಿ ಹತಾರಗಳನ್ನು ಒಳಮನೆಗೆ ಬಿಟ್ಟುಕೊಳ್ಳಲು ದಾರಿ ಮಾಡಿಕೊಡುತ್ತಿರುವುದು ಆತಂಕಕಾರಿ. ❖

ಹಾಜಬ್ಬ ಮತ್ತು ತುಳಸೀಗೌಡ

ಪದ್ಮ ಪ್ರಶಸ್ತಿಗೇ ಇವರಿಂದ ಸಡಗರ

ಪದ್ಮ ಪ್ರಶಸ್ತಿ ಈ ಬಾರಿ ನಮ್ಮ ನಾಡಿಗೆ ವಿಶೇಷ ಸಡಗರ ತಂದುಕೊಟ್ಟಿದೆ. ಪದ್ಮ ಪುರಸ್ಕೃತರಾದ 119 ಸಾಧಕರ ಪೈಕಿ ಮಿಂಚಿದ್ದು ಕರ್ನಾಟಕದ ಹರೇಕಳ ಹಾಜಬ್ಬ, ಮಂಜಮ್ಮ ಜೋಗತಿ ಮತ್ತು ತುಳಸಿಗೌಡ.

ಯಾವ ಪ್ರಶಸ್ತಿ, ಪುರಸ್ಕಾರದ ನಿರೀಕ್ಷೆಯೂ ಇಲ್ಲದೆ ಹಳ್ಳಿ ಮೂಲೆಯಲ್ಲಿ ತಮ್ಮಷ್ಟಕ್ಕೆ ತಾವಿದ್ದ ಈ ಮೂವರನ್ನು ಪದ್ಮ ಪ್ರಶಸ್ತಿ ಹುಡುಕಿಕೊಂಡು ಬಂದಿತು.

ಕಿತ್ತಳೆ ಮಾರುತ್ತಲೇ ತನ್ನೂರು ಹರೇಕಳದಲ್ಲಿ ಶಾಲೆ ಸ್ಥಾಪನೆಗೆ ಹೋರಾಡಿ ಕೊನೆಗೂ ಗುರಿಮುಟ್ಟಿದ ಹಾಜಬ್ಬ, ಮರಗಿಡಗಳ ಪೋಷಣೆ, ಬೆಳವಣಿಗೆಯಲ್ಲೇ ಜೀವನ ಸಾರ್ಥಕತೆ ಕಂಡ ತುಳಸಿಗೌಡ, ಎಲ್ಲ ಸಂಕಷ್ಟಗಳನ್ನು ಎದುರಿಸಿ ಗೆದ್ದು, ಅವರು ಪ್ರತಿನಿಧಿಸುವ ಸಮುದಾಯಕ್ಕೆ ಗೌರವ ತಂದು, ಜಾನಪದ ಅಕಾಡೆಮಿ ಅಧ್ಯಕ್ಷರಾದ ಜೋಗತಿ ಮಂಜಮ್ಮ ಅವರು ಪ್ರಶಸ್ತಿ ಪುರಸ್ಕೃತರಾದರು. ಇದು ಆ ಪ್ರಶಸ್ತಿಗೇ ಸಂದ ಗೌರವ ಎಂಬ ಅಭಿಮಾನದ ಮಾತುಗಳು ಕೇಳಿಬಂದವು. 'ಅಕ್ಷರ ಸಂತ' ಹಾಜಬ್ಬ ಅವರದ್ದು ಈಗ ಪಿಯುಸಿ ಕಾಲೇಜು ಸ್ಥಾಪನೆಗೆ ಹೋರಾಟ ಮುಂದುವರಿದಿದೆ. ಈ ಕಾಯಕಕ್ಕೆ 'ವೃಕ್ಷಮಾತೆ' ತುಳಸಿಗೌಡ ಹಾಜಬ್ಬರ ಜೊತೆ ಕೈಜೋಡಿಸುವ ಭರವಸೆಯನ್ನೂ ಕೊಟ್ಟಿದ್ದಾರೆ. ಜಾನಪದ ಕ್ಷೇತ್ರದ ಉಳಿವು, ಬೆಳವಣಿಗೆಗೆ ಸಂಬಂಧಿಸಿ ಮಂಜಮ್ಮ ಅವರ ಬದ್ಧತೆಯ ಕಾಯಕ ಮುಂದುವರಿದಿದೆ.



ಮಂಜಮ್ಮ ಜೋಗತಿ

ಫ್ರೀಡಂ ಟ್ರೋಫಿ ಟೆಸ್ಟ್ ಸರಣಿ: ಭಾರತ–ದಕ್ಷಿಣ ಆಫ್ರಿಕಾ ಮುಖಾಮುಖಿ

ಕ್ರೀಡಾ ಕಣದಲ್ಲಿ ಬಾಕ್ಸಿಂಗ್ ಡೇ ಕುತೂಹಲ

ವಿರಾಟ್ ನಾಯಕತ್ವಕ್ಕೆ ಅಗ್ನಿ ಪರೀಕ್ಷೆ



ವಿರಾಟ್ ಕೊಹ್ಲಿ

ಬಲಾಬಲ

ಪಂದ್ಯಗಳು	39
ಭಾರತ ಜಯ	14
ದಕ್ಷಿಣ ಆಫ್ರಿಕಾ ಜಯ	15
ಡ್ರಾ	10

ಸೆಂಚುರಿಯನ್ ಸಾಧನೆ

ಪಂದ್ಯಗಳು	2
ದಕ್ಷಿಣ ಆಫ್ರಿಕಾ ಜಯ	2
ಭಾರತ	0

ದಕ್ಷಿಣ ಆಫ್ರಿಕಾದಲ್ಲಿ ಭಾರತ ಮುಖಾಮುಖಿ

ಪಂದ್ಯಗಳು	20
ದ. ಆಫ್ರಿಕಾ ಜಯ	10
ಭಾರತ ಜಯ	3
ಡ್ರಾ	7

ಸೆಂಚುರಿಯನ್ (ಪಿಟಿಐ): ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಮುಂದೆ ಈಗ ಹಲವು ಸವಾಲುಗಳು.

ಭಾನುವಾರ ಇಲ್ಲಿ ಆರಂಭವಾಗಲಿರುವ ದಕ್ಷಿಣ ಆಫ್ರಿಕಾ ಎದುರಿನ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಕಣಕ್ಕಿಳಿಯುವ ಅಂತಿಮ ಹನ್ನೊಂದರ ತಂಡವನ್ನು ಆಯ್ಕೆ ಮಾಡುವ ಸವಾಲು ಪ್ರಮುಖವಾಗಿದೆ. ಬ್ಯಾಟಿಂಗ್‌ನಲ್ಲಿ ತಾವು ಲಯ ಕಂಡುಕೊಳ್ಳುವುದರ ಜೊತೆಗೆ ದಕ್ಷಿಣ ಆಫ್ರಿಕಾದ ನೆಲದಲ್ಲಿ ಮೊದಲ ಸರಣಿ ಗೆಲ್ಲುವ ಒತ್ತಡವೂ ಅವರ ಮೇಲಿದೆ. ಮುಖ್ಯ ಕೋಚ್ ಆಗಿ ನೇಮಕವಾದ ನಂತರ ರಾಹುಲ್ ದ್ರಾವಿಡ್ ಅವರಿಗೂ ಇದು ಮೊದಲ ವಿದೇಶ ಪ್ರವಾಸವಾಗಿದೆ. ಗೆಲುವಿನೊಂದಿಗೆ ಶುಭಾರಂಭ ಮಾಡುವ ಛಲ ಅವರಲ್ಲಿಯೂ ಇದೆ.

1992ರಲ್ಲಿ ಭಾರತವು ಮೊದಲ ಬಾರಿ ಇಲ್ಲಿಗೆ ಪ್ರವಾಸ ಬಂದಿತ್ತು. ಆಗಿನಿಂದಲೂ ಇಲ್ಲಿ ಸರಣಿ ಜಯದ ಆಸೆ ಕೈಗೂಡಿಲ್ಲ.

ಇಲ್ಲಿಯ ಬೌನ್ಸಿ ಪಿಚ್‌ಗಳಲ್ಲಿ ಐವರು ಬೌಲರ್ ಗಳನ್ನು ಕಣಕ್ಕಿಳಿಸುವ ಯೋಚನೆಯಲ್ಲಿ ತಂಡವಿದೆ. ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್ ಮತ್ತು ಸ್ಪಿನ್ನರ್ ಆರ್. ಅಶ್ವಿನ್ ಆಡಬಹುದು. ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಕಣಕ್ಕಿಳಿಯಬಹುದು. ರಹಾನೆ ಮತ್ತು ಇಶಾಂತ್ ಅವರ ಮೀನಖಂಡದಲ್ಲಿ ನೋವು ಇರುವುದರಿಂದ ಭಾನುವಾರ ಬೆಳಿಗ್ಗೆಯವರೆಗೆ ತಂಡದ ವ್ಯವಸ್ಥಾಪಕ ಸಮಿತಿ ಕಾದು ನೋಡಲಿದೆ.

ಭಾರತದ ಶಕ್ತಿ ಇರುವುದು ಬೌಲಿಂಗ್‌ನಲ್ಲಿ. ಅವರ ಬಳಿ ಅನುಭವಿ ಮತ್ತು ಪರಿಣಾಮಕಾರಿ ಬೌಲರ್‌ಗಳು ಇದ್ದಾರೆ. ಈ ಸವಾಲನ್ನು ಎದುರಿಸಲು ನಾವು ಸಿದ್ಧರಾಗಿದ್ದೇವೆ.
ಡೀನ್ ಎಲ್ಗರ್ ದಕ್ಷಿಣ ಆಫ್ರಿಕಾ ನಾಯಕ

ರೋಹಿತ್ ಶರ್ಮಾ, ಶುಭಮನ್ ಗಿಲ್ ಅನುಪಸ್ಥಿತಿಯಲ್ಲಿ ಕನ್ನಡದ ಜೋಡಿ ಮಯಂಕ್ ಅಗರವಾಲ್ ಮತ್ತು ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ನಂತರದ ಕ್ರಮಾಂಕದಲ್ಲಿ ವಿರಾಟ್, ಪೂಜಾರ ಆಡುವರು. ಐದನೇ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್, ಹನುಮವಿಹಾರಿ ಅಥವಾ ಅಜಿಂಕ್ಯ ರಹಾನೆ ಪೈಕಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಒತ್ತಡ ಕೊಹ್ಲಿ ಮುಂದಿದೆ.

ಕಳೆದೆರಡು ವರ್ಷಗಳಿಂದ ಕೊಹ್ಲಿ ಒಂದೂ ಶತಕ ಗಳಿಸಿಲ್ಲ. ಉತ್ತಮ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಪೂಜಾರ ಅವರದ್ದೂ ಇದೇ ಪರಿಸ್ಥಿತಿ ಇದೆ. ಒಂದೊಮ್ಮೆ ಇವರಿಬ್ಬರೂ ಲಯಕ್ಕೆ ಮರಳಿದರೆ, ಡೀನ್ ಎಲ್ಗರ್ ನಾಯಕತ್ವದ ಆತಿಥೇಯರಿಗೆ ಕಠಿಣ ಸವಾಲು ಎದುರಾಗಲಿದೆ. ದಕ್ಷಿಣ ಆಫ್ರಿಕಾ ತಂಡದಲ್ಲಿ ಎಲ್ಗರ್ (69 ಪಂದ್ಯ) ಮತ್ತು ತೆಂಬಾ ಬವುಮಾ (53 ಪಂದ್ಯ) ಅವರಿಬ್ಬರೂ 50ಕ್ಕೂ ಹೆಚ್ಚು ಟೆಸ್ಟ್‌ಗಳಲ್ಲಿ ಆಡಿದ ಅನುಭವಿಗಳು. ಕ್ವಿಂಟನ್ ಡಿಕಾಕ್, ಏಡನ್ ಮಾರ್ಕರಮ್ ಅವರಿಗೆ ಪ್ರತಿಭೆ ಸಾಬೀತುಪಡಿಸುವ ಅವಕಾಶವಿದೆ. ಕಗಿಸೊ ರಬಾಡ, ಲುಂಗಿ ಗಿಡಿ, ಕೇಶವ್ ಮಹಾರಾಜ್ ಭಾರತದ ಬ್ಯಾಟಿಂಗ್ ಪಡೆಯನ್ನು ಕಾಡುವ ಸಮರ್ಥರು. ತವರಿನ ಪಿಚ್‌ಗಳಲ್ಲಿ ಅವರು ಹೆಚ್ಚು ಪರಿಣಾಮಕಾರಿಯಾಗಬಲ್ಲರು.

ನಾಯಕರ ಟೆಸ್ಟ್ ಸಾಧನೆ

ನಾಯಕ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ವಿರಾಟ್ ಕೊಹ್ಲಿ	97	7801	254	27	27
ಡೀನ್ ಎಲ್ಗರ್	69	4347	199	13	17

ತಂಡಗಳು

- **ಭಾರತ:** ವಿರಾಟ್ ಕೊಹ್ಲಿ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಅಜಿಂಕ್ಯ ರಹಾನೆ, ವೃದ್ಧಿಮಾನ್ ಸಹಾ (ವಿಕೆಟ್‌ಕೀಪರ್), ಜಯಂತ್ ಯಾದವ್, ಪ್ರಿಯಾಂಕ್ ಪಾಂಚಾಲ್, ಉಮೇಶ್ ಯಾದವ್, ಹನುಮವಿಹಾರಿ, ಇಶಾಂತ್ ಶರ್ಮಾ
- **ದಕ್ಷಿಣ ಆಫ್ರಿಕಾ:** ಡೀನ್ ಎಲ್ಗರ್ (ನಾಯಕ), ತೆಂಬಾ ಬವುಮಾ (ಉಪನಾಯಕ), ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ಕಗಿಸೊ ರಬಾಡ, ಸರೆಲ್ ಎರ್ವಿ, ಬೆರೆನ್ ಹೆನ್ರಿಕ್ಸ್, ಜಾರ್ಜ್ ಲಿಂಡೆ, ಕೇಶವ್ ಮಹಾರಾಜ್, ಲುಂಗಿ ಗಿಡಿ, ಏಡನ್ ಮಾರ್ಕರಮ್, ವಿಯಾನ್ ಮಲ್ಡರ್, ಕೀಗನ್ ಪೀಟರ್ಸನ್, ರಸಿ ವ್ಯಾನ್ ಡೆರ್ ಡಸೆ, ಕೈಲ್ ವೆರೆಯನ್, ಮಾರ್ಕೊ ಜೆನ್ಸನ್, ಗ್ಲೆಂಟನ್ ಸ್ಟರ್ಮನ್, ಪ್ರೆನೆಲನ್ ಸುಬ್ರಾಯನ್, ಸಿಸಾಂದ ಮಗಾಲ, ರಿಯಾನ್ ರಿಕೆಲ್ಟನ್, ಡನೆ ಒಲಿವಿಯರ್.

ಪಂದ್ಯ ಆರಂಭ: ಮಧ್ಯಾಹ್ನ 1.30 | ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆಂತರಿಕ ಮಾತುಕತೆ ವಿವರ ಮಾಧ್ಯಮಕ್ಕಲ್ಲ; ದ್ರಾವಿಡ್

ರಾಹುಲ್

ಸೆಂಚುರಿಯನ್ (ಪಿಟಿಐ): ಸೀಮಿತ ಓವರ್‌ಗಳ ತಂಡದ ನಾಯಕತ್ವದಿಂದ ವಿರಾಟ್ ಕೊಹ್ಲಿಯನ್ನು ಕೈಬಿಡುವ ಕುರಿತು ಬಿಸಿಸಿಐ ಅಧಿಕಾರಿಗಳು ಮತ್ತು ಆಯ್ಕೆಗಾರರೊಂದಿಗೆ ನಡೆಸಿದ ಮಾತುಕತೆಯ ವಿವರಗಳನ್ನು ಮಾಧ್ಯಮಗಳಿಗೆ ನೀಡಲು ಸಾಧ್ಯವಿಲ್ಲ ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆಂತರಿಕ ಮಾತುಕತೆಯ ವಿವರಗಳನ್ನು ಮಾಧ್ಯಮಗಳಿಗೆ ನೀಡಲು ಸಾಧ್ಯವಿಲ್ಲ' ಎಂದರು.

'ವಿರಾಟ್ ಕೊಹ್ಲಿ ನಾಯಕರಾಗಿ ಮತ್ತು ಆಟಗಾರರಾಗಿ ತಂಡಕ್ಕೆ ನೀಡಿರುವ ಕೊಡುಗೆಯು ಬಹಳ ದೊಡ್ಡದು. ಟೆಸ್ಟ್ ಕ್ರಿಕೆಟ್‌ನಲ್ಲಿ ಆಡಲು ಇಷ್ಟಪಡುವ ಆಟಗಾರರಲ್ಲಿ ವಿರಾಟ್ ಕೂಡ ಒಬ್ಬರು. ಅವರ ಸ್ಪರ್ಧಾತ್ಮಕ ಮನೋಭಾವ ಅಮೋಘವಾದದ್ದು' ಎಂದರು.

ಕೇರಳ–ಜೆಎಫ್‌ಸಿ ಹಣಾಹಣಿ

ಸಹಾಲ್ ಅಬ್ದುಲ್ ಸಮದ್

ವಾಸ್ಕೊ (ಪಿಟಿಐ): ಕ್ರಿಸ್‌ಮಸ್ ಬಿಡುವಿನ ನಂತರ ಗೋವಾದಲ್ಲಿ ಮತ್ತೆ ಫುಟ್‌ಬಾಲ್ ಕಲರವ. ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ 'ಬಾಕ್ಸಿಂಗ್ ಡೇ' ಪಂದ್ಯದಲ್ಲಿ ಭಾನುವಾರ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಮತ್ತು ಜೆಮ್ಶೆಡ್‌ಪುರ ಎಫ್‌ಸಿ ತಂಡಗಳು ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಸೆಣಸಲಿವೆ.

ಎರಡೂ ತಂಡಗಳು ಎಂಟನೇ ಆವೃತ್ತಿಯಲ್ಲಿ ಉತ್ತಮ ಸಾಮರ್ಥ್ಯ ತೋರುತ್ತಿದ್ದು ಏಳು ಪಂದ್ಯಗಳ ಪೈಕಿ ಮೂರರಲ್ಲಿ ಜಯ ಗಳಿಸಿದ್ದು ಮೂರರಲ್ಲಿ ಡ್ರಾ ಸಾಧಿಸಿವೆ. ಮತ್ತು ಒಂದರಲ್ಲಿ ಮಾತ್ರ ಸೋತಿವೆ. ಗೋಲು ಗಳಿಕೆ ಆಧಾರದಲ್ಲಿ ಜೆಮ್ಶೆಡ್‌ಪುರ ಮೂರನೇ ಸ್ಥಾನ ಗಳಿಸಿದ್ದು ಕೇರಳ ಬ್ಲಾಸ್ಟರ್ಸ್ ನಂತರದ ಸ್ಥಾನದಲ್ಲಿದೆ.

ಕೇರಳ ಬ್ಲಾಸ್ಟರ್ಸ್ ಹಿಂದಿನ ಆರು ಪಂದ್ಯಗಳಲ್ಲಿ ಸೋಲು ಕಂಡಿಲ್ಲ. ಜೆಮ್ಶೆಡ್‌ಪುರ ಕಳೆದ ಎರಡು ಪಂದ್ಯಗಳಲ್ಲಿ ಸೋತಿಲ್ಲ. ಬೆಂಗಳೂರು ಎಫ್‌ಸಿ ಎದುರಿನ ಪಂದ್ಯದಲ್ಲಿ ಗೋಲು ರಹಿತ ಡ್ರಾ ಸಾಧಿಸಿರುವ ಜೆಮ್ಶೆಡ್‌ಪುರ ಭರವಸೆಯಲ್ಲಿದೆ. ಆಕ್ರಮಣ ವಿಭಾಗದಲ್ಲಿ ಈ ತಂಡ ಅಪ್ರತಿಮ ಸಾಮರ್ಥ್ಯ ತೋರುತ್ತಿದ್ದು ಗ್ರೆಗ್ ಸ್ಟಿವರ್ಟ್ ಇದರ ಚುಕ್ಕಾಣಿ ಹಿಡಿದಿದ್ದಾರೆ.

ಹಿಂದಿನ ವರ್ಷಗಳಲ್ಲಿ ಅನುಭವಿಸಿದ ಕಹಿ ಮರೆತು ಕೇರಳ ಬ್ಲಾಸ್ಟರ್ಸ್ ಮುನ್ನುಗ್ಗುತ್ತಿದ್ದು ಈ ತಂಡವೂ ಆಕ್ರಮಣಕಾರಿ ಆಟದಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಹಿಂದಿನ ಪಂದ್ಯದಲ್ಲಿ ಚೆನ್ನೈಯಿನ್ ತಂಡದ ರಕ್ಷಣಾ ಗೋಡೆಯನ್ನು ಛಿದ್ರ ಮಾಡಿರುವ ತಂಡ 3–0ಯಿಂದ ಜಯ ಗಳಿಸಿದೆ. ಸಹಾಲ್ ಅಬ್ದುಲ್ ಸಮದ್ ಅಮೋಘ ಫಾರ್ಮ್‌ನಲ್ಲಿದ್ದು ಎರಡು ಪಂದ್ಯಗಳಲ್ಲಿ ಸತತ ಗೋಲು ಗಳಿಸಿದ್ದಾರೆ. ರಕ್ಷಣಾ ವಿಭಾಗಕ್ಕೂ ಅವರು ಉತ್ತಮ ಕಾಣಿಕೆ ನೀಡಿದ್ದಾರೆ. ಈ ವರೆಗೆ 13 ಯಶಸ್ವಿ ಟ್ಯಾಕಲ್ ಮತ್ತು 11 ಬ್ಲಾಕ್‌ಗಳನ್ನು ಮಾಡಿದ್ದಾರೆ. ಅಡ್ರಿಯಾನ್ ಲೂನಾ ಕೂಡ ರಕ್ಷಣಾ ವಿಭಾಗದಲ್ಲಿ ಮಿಂಚುತ್ತಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

8ನೇ ಆವೃತ್ತಿಯಲ್ಲಿ ಉಭಯ ತಂಡಗಳ ಬಲಾಬಲ

ತಂಡ	ಪಂದ್ಯ	ಜಯ	ಡ್ರಾ	ಸೋಲು	ಪಾಯಿಂಟ್ಸ್	ಗೋಲು	ಕೊಟ್ಟ ಗೋಲು
ಜೆಎಫ್‌ಸಿ	7	3	3	1	12	13	8
ಕೆಬಿಎಫ್‌ಸಿ	7	3	3	1	12	12	7

ಸರಣಿ ಮೇಲೆ ಆಸ್ಟ್ರೇಲಿಯಾ ಕಣ್ಣು

ಮೆಲ್ಬರ್ನ್ (ಎಎಫ್‌ಪಿ): ಸತತ ಎರಡು ಜಯಗಳಿಂದ ಆತ್ಮವಿಶ್ವಾಸದ ಆಗಸದಲ್ಲಿ ತೇಲಾಡುತ್ತಿರುವ ಆತಿಥೇಯ ಆಸ್ಟ್ರೇಲಿಯಾ ತಂಡವು ಭಾನುವಾರ ಆರಂಭವಾಗಲಿರುವ ಬಾಕ್ಸಿಂಗ್ ಡೇ ಟೆಸ್ಟ್ ಗೆದ್ದು ಆ್ಯಷಸ್ ಸರಣಿಯನ್ನು ಕೈವಶ ಮಾಡಿಕೊಳ್ಳುವ ಛಲದಲ್ಲಿದೆ.

ಐದು ಪಂದ್ಯಗಳ ಸರಣಿಯನ್ನು ಜಯಿಸುವ ತನ್ನ ಕನಸು ಜೀವಂತವಾಗುಳಿಯಬೇಕಾದರೆ, ಇಂಗ್ಲೆಂಡ್ ತಂಡವು ಈ ಪಂದ್ಯದಲ್ಲಿ ಜಯಿಸುವ ಒತ್ತಡದಲ್ಲಿದೆ. ಆತಿಥೇಯ ತಂಡದ ಡೇವಿಡ್ ವಾರ್ನರ್, ಮಾರ್ನಸ್ ಲಾಬುಷೇನ್, ಟ್ರಾವಿಸ್ ಹೆಡ್ ಮತ್ತು ಸ್ಟೀವ್ ಸ್ಮಿತ್ ಅವರು ಅಮೋಘ ಲಯದಲ್ಲಿದ್ದಾರೆ. ಇಂಗ್ಲೆಂಡ್‌ನ ಅನುಭವಿ ಬೌಲಿಂಗ್ ಪಡೆಯನ್ನು ಕಳೆದೆರಡೂ ಪಂದ್ಯಗಳಲ್ಲಿ ಹಣ್ಣುಗಾಯಿ ನೀರುಗಾಯಿ ಮಾಡಿದ್ದಾರೆ.

ಪ್ಯಾಟ್ ಕಮಿನ್ಸ್ ನಾಯಕತ್ವದ ಬೌಲಿಂಗ್ ಪಡೆಯೂ ತನ್ನ ಕೈಚಳಕ ಮೆರೆದಿದೆ. ಇಂಗ್ಲೆಂಡ್ ಬ್ಯಾಟಿಂಗ್ ಪಡೆಯನ್ನು ಅಪಾರವಾಗಿ ಕಾಡಿದ್ದಾರೆ. ಇದರ ನಡುವೆಯೂ ನಾಯಕ ಜೋ ರೂಟ್, ಡೇವಿಡ್ ಮಲಾನ್ ಒಂದಿಷ್ಟು ರನ್ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ತಂಡಕ್ಕೆ ಜಯ ಕೊಡಿಸುವಲ್ಲಿ ಅವರು ಸಫಲರಾಗಿಲ್ಲ. ಇದರಿಂದಾಗಿ ರೂಟ್ ನಾಯಕತ್ವವು ಬಹಳಷ್ಟು ಟೀಕೆಗೊಳಗಾಗಿದೆ. ಆದ್ದರಿಂದ ಈ ಪಂದ್ಯದಲ್ಲಿಕೆಲವು ಬದಲಾವಣೆಗಳೊಂದಿಗೆ ಅವರು ಕಣಕ್ಕಿಳಿಯುವ ಸಾಧ್ಯತೆ ಇದೆ.

ಜೋ ರೂಟ್

ತಂಡಗಳು: ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಅಲೆಕ್ಸ್ ಕ್ಯಾರಿ (ವಿಕೆಟ್‌ಕೀಪರ್), ಡೇವಿಡ್ ವಾರ್ನರ್, ಮಾರ್ಕಸ್ ಹ್ಯಾರಿಸ್, ಮಾರ್ನಸ್ ಲಾಬುಷೇನ್, ಸ್ಟೀವನ್ ಸ್ಮಿತ್, ಟ್ರಾವಿಸ್ ಹೆಡ್, ಕೆಮರಾನ್ ಗ್ರೀನ್, ಮಿಚೆಲ್ ಸ್ಟಾರ್ಕ್, ನೇಥನ್ ಲಯನ್, ಸ್ಕಾಟ್ ಬೋಲಾಂಡ್, ಉಸ್ಮಾನ್ ಖ್ವಾಜಾ, ಮಿಚೆಲ್ ನೆಸೆರ್, ಜೇ ರಿಚರ್ಡ್ಸನ್, ಮಿಚೆಲ್ ಸ್ವೆಪ್ಸನ್.

ಇಂಗ್ಲೆಂಡ್: ಜೋ ರೂಟ್ (ನಾಯಕ), ಜೋಸ್ ಬಟ್ಲರ್ (ವಿಕೆಟ್‌ಕೀಪರ್), ಹಸೀಬ್ ಹಮೀದ್, ಜ್ಯಾಕ್ ಕ್ರಾಲಿ, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಜಾನಿ ಬೆಸ್ಟೊ, ಮಾರ್ಕ್ ವುಡ್, ಒಲಿ ರಾಬಿನ್ಸನ್, ಜ್ಯಾಕ್ ಲೀಚ್, ಜೇಮ್ಸ್ ಆ್ಯಂಡರ್ಸನ್, ಸ್ಟುವರ್ಟ್ ಬ್ರಾಡ್, ಕ್ರಿಸ್ ವೋಕ್ಸ್, ಡಾಮ್ನಿಕ್ ಬೆಸ್, ಒಲಿ ಪೋಪ್, ರೋರಿ ಬರ್ನ್ಸ್, ಕ್ರೇಗ್ ಒವರ್ಟನ್, ಡೆನಿಯಲ್ ಲಾರೆನ್ಸ್.

ಪಂದ್ಯ ಆರಂಭ: ಬೆಳಿಗ್ಗೆ 5.00 (ಭಾರತೀಯ ಕಾಲಮಾನ)
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಬಾಕ್ಸಿಂಗ್ ಡೇ ಅಂದರೇನು?

ಬಾಕ್ಸಿಂಗ್ ಡೇ ಪರಿಕಲ್ಪನೆ ಆರಂಭಗೊಂಡದ್ದು ಇಂಗ್ಲೆಂಡ್‌ನಲ್ಲಿ. ಕ್ರಿಸ್‌ಮಸ್‌ನ ಮರುದಿನವನ್ನು ಬಾಕ್ಸಿಂಗ್ ಡೇ ಎಂದು ಕರೆಯುತ್ತಾರೆ. ಐರ್ಲೆಂಡ್ ಮತ್ತು ಸ್ಪೇನ್‌ನಲ್ಲಿ ಈ ದಿನವನ್ನು ಸೇಂಟ್ ಸ್ಟೀಫನ್ಸ್ ದಿನ ಎಂದೂ ಕರೆಯುತ್ತಾರೆ. ರೊಮೇನಿಯಾ, ಹಂಗರಿ, ಜರ್ಮನಿ, ಪೋಲೆಂಡ್ ಮತ್ತು ನೆದರ್ಲೆಂಡ್ಸ್‌ನಲ್ಲಿ ಈ ದಿನ ಎರಡನೇ ಕ್ರಿಸ್‌ಮಸ್.

ಯುರೋಪ್ ರಾಷ್ಟ್ರಗಳಲ್ಲಿ ವರ್ಷದ ಕೊನೆಯ ವಾರ ಚರ್ಚ್‌ಗಳಲ್ಲಿ ಪೊಟ್ಟಣಗಳನ್ನು (ಬಾಕ್ಸ್) ಇರಿಸಿ ಕಾಣಿಕೆಗಳನ್ನು ಸ್ವೀಕರಿಸಲಾಗುತ್ತದೆ. ಈ 'ಬಾಕ್ಸ್'ಗಳಿಂದಲೇ ಬಾಕ್ಸಿಂಗ್ ಡೇ ಎಂಬ ಹೆಸರು ಬಂದಿರಬೇಕು ಎನ್ನಲಾಗುತ್ತದೆ. ಈ ದಿನ ಆರಂಭವಾಗುವ ಪಂದ್ಯವನ್ನು ಬಾಕ್ಸಿಂಗ್ ಡೇ ಮ್ಯಾಚ್ ಎಂದು ಕರೆಯುವುದು ಕ್ರೀಡಾಕ್ಷೇತ್ರದಲ್ಲಿ ಮೊದಲಿನಿಂದಲೂ ಇರುವ ರೂಢಿ.

ವಿಜಯ್ ಹಜಾರೆ: ಫೈನಲ್ ಕದನ

ಜೈಪುರ (ಪಿಟಿಐ): ಐದು ಬಾರಿಯ ಚಾಂಪಿಯನ್ ತಮಿಳುನಾಡು ತಂಡವು ಭಾನುವಾರ ಹಿಮಾಚಲ ಪ್ರದೇಶ ಎದುರು ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಕಣಕ್ಕಿಳಿಯಲಿದೆ.

ಹಿಮಾಚಲ ಪ್ರದೇಶ ತಂಡವು ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ್ದು, ಬಲಿಷ್ಠ ತಮಿಳುನಾಡಿಗೆ ದಿಟ್ಟ ಸವಾಲೊಡ್ಡುವ ಆತ್ಮವಿಶ್ವಾಸದಲ್ಲಿದೆ. ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಚಾಂಪಿಯನ್ ಆಗಿರುವ ವಿಜಯಶಂಕರ್ ನಾಯಕತ್ವದ ತಮಿಳುನಾಡು ತಂಡವು ಋತುವಿನ ಎರಡನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ. ಈ ಟೂರ್ನಿಯುದ್ದಕ್ಕೂ ತನ್ನ ಶಕ್ತಿ ಪ್ರದರ್ಶನವನ್ನು ತಮಿಳುನಾಡು ಮಾಡಿದೆ.

ತಮಿಳುನಾಡು ತಂಡವು ಸೆಮಿಫೈನಲ್‌ನಲ್ಲಿ ಸೌರಾಷ್ಟ್ರದ ಎದುರು ಮುನ್ನೂರಕ್ಕೂ ಹೆಚ್ಚು ರನ್‌ಗಳ ಗುರಿಯನ್ನು ಬೆನ್ನತ್ತಿ ರೋಚಕ ಜಯ ದಾಖಲಿಸಿತ್ತು. ಇನ್ನೊಂದು ಸೆಮಿಫೈನಲ್‌ನಲ್ಲಿ ರಿಷಿ ಧವನ್ ನಾಯಕತ್ವದ ಹಿಮಾಚಲ ಪ್ರದೇಶವು ಸರ್ವಿಸಸ್ ವಿರುದ್ಧ ಜಯಿಸಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 9
ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

ಡಿವೈಇಎಸ್, ಬೀಗಲ್ಸ್ ತಂಡ ಸೆಮಿಫೈನಲ್‌ಗೆ

ಬೆಂಗಳೂರು: ಡಿವೈಇಎಸ್ ಬೆಂಗಳೂರು ಮತ್ತು ಬೀಗಲ್ಸ್ ತಂಡಗಳು ನಗರದಲ್ಲಿ ನಡೆಯುತ್ತಿರುವ ಅಸೋಸಿಯೇಷನ್ ಕಪ್ ರಾಜ್ಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡಿವೈಇಎಸ್ 90–75ರಲ್ಲಿ ವೈಎಂಎಂಎ ತಂಡವನ್ನು ಮಣಿಸಿತು. ಡಿವೈಇಎಸ್ ಪರವಾಗಿ ಅಕ್ಷಯ್ 28 ಮತ್ತು ವೈಎಂಎಂಎ ಪರವಾಗಿ ಪ್ರಭಾತ್ 25 ಪಾಯಿಂಟ್ ಗಳಿಸಿದರು.

ಪುರುಷರ ವಿಭಾಗದಲ್ಲಿ ಎಂಇಜಿ 75–47ರಲ್ಲಿ ಎಎಸ್‌ಸಿಯನ್ನು ಮಣಿಸಿತು. ಮಯೂರ್ ಭಟ್ (29 ಪಾಯಿಂಟ್) ಮತ್ತು ಮನು ಥಾಮಸ್ (19) ಎಂಇಜಿ ಪರ ಮಿಂಚಿದದರು. ಅರ್ಜುನ್ (22) ಮತ್ತು ಸುರೇಶ್ (12) ಅವರ ಉತ್ತಮ ಆಟದ ನೆರವಿನಿಂದ ಐಬಿಬಿಸಿ 64–55ರಲ್ಲಿ ವಿವೇಕ್ಸ್ ಎಸ್‌ಸಿಯನ್ನು ಮಣಿಸಿತು. ವಿವೇಕ್ಸ್‌ನ ಜೊನಾಥನ್ (19) ಮಿಂಚಿದರು.

ಬ್ಯಾಂಕ್ ಆಫ್ ಬರೋಡ 99–83ರಲ್ಲಿ ಮಂಗಳೂರು ಬಿ.ಸಿ ವಿರುದ್ಧ ಜಯ ಸಾಧಿಸಿತು.

ಹರೀಶ್ ಮತ್ತು ಕಾರ್ತಿಕೇಯನ್ ತಲಾ 26 ಪಾಯಿಂಟ್ ಗಳಿಸಿದರು. ಮಹಿಳಾ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರಾಜ್‌ಮಹಲ್ ಎಸ್‌ಸಿ 59–52ರಲ್ಲಿ ಭರತ್ ಎಸ್‌ಯುವನ್ನು ಮಣಿಸಿತು. ಐಶ್ವರ್ಯ (23) ರಾಜ್‌ಮಹಲ್ ಪರ, ಶಿಕ್ಷಿತಾ (20) ಭರತ್ ಎಸ್‌ಯು ಪರ ಮಿಂಚಿದರು. ಬೀಗಲ್ಸ್ 58–22ರಲ್ಲಿ ಡಿವೈಇಎಸ್ ಮಂಡ್ಯವನ್ನು ಮಣಿಸಿತು. ಡಿವೈಇಎಸ್ ವಿದ್ಯಾನಗರ ತಂಡ 55–48ರಲ್ಲಿ ಜೆಎಸ್‌ಸಿಯನ್ನು ಮಣಿಸಿತು. ಡಿವೈಇಎಸ್ ತಂಡದ ಪ್ರೀತಿ 20, ಮಾನಸ 16 ಪಾಯಿಂಟ್ ಗಳಿಸಿದರು. ಜೆಎಸ್‌ಸಿಗಾಗಿ ಅದಿತಿ 24 ಮತ್ತು ಆದ್ಯ 12 ಪಾಯಿಂಟ್ ಕಲೆ ಹಾಕಿದರು.